Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 07-12-2020



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಜಯಕಿರಣ
11. ಸಂಜೆ ವಾಣಿ
12. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 07-12-2020 |
|---|---|
| Page No | 2 |

### ಪಾಲಿಕೆ ಹಾಗೂ ರಾಜ್ಯ ಬಿಜೆಪಿ ಸರ್ಕಾರದ ವೈಫಲ್ಯಗಳ ಬಗ್ಗೆ ಮನವರಿಕೆ

# ‘ಗೊರಕೆ ಸಾಕು ಪೊರಕೆ ಬೇಕು ಅಭಿಯಾನ’ಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪಾಲಿಕೆ ಹಾಗೂ ರಾಜ್ಯ ಬಿಜೆಪಿ ಸರ್ಕಾರದ ವೈಫಲ್ಯಗಳನ್ನು ಮನೆ ಮನೆಗೆ ತಲುಪಿಸುವ 'ಗೊರಕೆ ಸಾಕು, ಪೊರಕೆ ಬೇಕು' ಅಭಿಯಾನಕ್ಕೆ ಆಮ್ ಆದ್ಮಿ ಪಕ್ಷವು (ಎಎಪಿ) ಭಾನುವಾರ ಚಾಲನೆ ನೀಡಿತು.

ಪಕ್ಷದ ರಾಜ್ಯ ಸಂಚಾಲಕ ಪೃಥ್ವಿ ರೆಡ್ಡಿ ಅವರು ಮಂಜುನಾಥ ನಗರದ ನಿವಾಸಿಗಳಿಗೆ ಪಕ್ಷದ ಬಾವುಟ ನೀಡುವುದರ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, 'ಬೆಂಗಳೂರಿನ ಜನತೆ ಮೂರು ಪಕ್ಷಗಳ ಕೆಟ್ಟ ಆಡಳಿತದಿಂದ ಬೇಸತ್ತು ಹೋಗಿದ್ದಾರೆ. ಇಲ್ಲಿನ ಸರ್ಕಾರಗಳ ವೈಫಲ್ಯಗಳನ್ನು ಜನರಿಗೆ ತಲುಪಿಸಲು ಪ್ರತಿ ವಾರ ಅಭಿಯಾನ ಮಾಡಲಿದ್ದೇವೆ. ಈ ಬಾರಿ ಪಾಲಿಕೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷಕ್ಕೆ ಬಹುಮತ ಸಿಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಎಎಪಿ ಬೆಂಗಳೂರು ಘಟಕದ ಅಧ್ಯಕ್ಷ ಮೋಹನ್ ದಾಸರಿ, 'ಈ ಅಭಿಯಾನದ ಮೂಲಕ ಮೂರು ಪಕ್ಷಗಳಿಗಿಂತ ಆಮ್ ಆದ್ಮಿ ಪಕ್ಷ ಹೇಗೆ ಭಿನ್ನ ಎಂದು ಮನವರಿಕೆ ಮಾಡಿಕೊಡಲಾಗುವುದು. ಸಮೀಕ್ಷೆಯೊಂದರ ಪ್ರಕಾರ ಬೆಂಗಳೂರಿನ ಶೇ 70ರಷ್ಟು ಜನ ನಗರದಲ್ಲೂ ದೆಹಲಿ ಮಾದರಿಯ ಆಡಳಿತ ಬೇಕು ಎಂದಿದ್ದಾರೆ. ನಾವು ಅಧಿಕಾರಕ್ಕೆ ಬಂದು, ಜನರ ಈ ನಿರೀಕ್ಷೆ ಉಳಿಸಿಕೊಳ್ಳುತ್ತೇವೆ' ಎಂದರು.

ಪಕ್ಷದ ಪದಾಧಿಕಾರಿಗಳಾದ ವಿಜಯ್ ಶರ್ಮ, ಶಾಂತಲಾ ದಾಮ್ಲೆ, ಸಂಚಿತ್ ಸಹಾನಿ, ಜಗದೀಶ್, ದರ್ಶನ್ ಜೈನ್, ಗುರುಮೂರ್ತಿ, ಬಾಲಕೃಷ್ಣೇಗೌಡ, ಲಕ್ಷ್ಮೀಕಾಂತ್ ರಾವ್, ಫಣಿರಾಜ್ ಭಾಗವಹಿಸಿದ್ದರು.



ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಮಂಜುನಾಥ ನಗರದಲ್ಲಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು 'ಗೊರಕೆ ಸಾಕು, ಪೊರಕೆ ಬೇಕು' ಅಭಿಯಾನ ನಡೆಸಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 07-12-2020 |
|---|---|
| Page No | 3 |

# ನಗರದ ಹಲವೆಡೆ ಜೋರು ಮಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಚಳಿ ಪ್ರಮಾಣ ಹೆಚ್ಚಿದ್ದು, ಅದರ ಜೊತೆಯಲ್ಲಿ ಮೋಡ ಕವಿದ ವಾತಾವರಣವೂ ಕಂಡುಬರುತ್ತಿದೆ. ಭಾನುವಾರ ಸಂಜೆ ನಗರದ ಹಲವೆಡೆ ಜೋರು ಮಳೆಯೂ ಸುರಿಯಿತು.

ಹಲವು ದಿನಗಳಿಂದ ನಗರದಲ್ಲಿ ಮೋಡ ಕವಿದ ವಾತಾವರಣವಿದೆ. ಅಲ್ಲಲ್ಲಿ ಜಿಟಿ ಜಿಟಿ ಮಳೆಯೂ ಸಾಮಾನ್ಯವಾಗಿದೆ. ಭಾನುವಾರ ಸಂಜೆ ದೊಮ್ಮಲೂರು, ಸೀಗೆಹಳ್ಳಿ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಪ್ರಮಾಣ ಹೆಚ್ಚಿತ್ತು.

ಜಯನಗರ, ಜೆ.ಪಿ.ನಗರ, ರಾಜಾಜಿನಗರ, ಮಲ್ಲೇಶ್ವರ, ವಿಜಯನಗರ, ರಾಜರಾಜೇಶ್ವರಿನಗರ, ಕಾಮಾಕ್ಷಿಪಾಳ್ಯ, ಚಾಮರಾಜನಗರ, ಕೆ.ಆರ್.ಮಾರುಕಟ್ಟೆ, ಕಲಾಸಿಪಾಳ್ಯ, ಮೆಜೆಸ್ಟಿಕ್, ಶೇಷಾದ್ರಿಪುರ ಹಾಗೂ ಸುತ್ತಮುತ್ತ ಪ್ರದೇಶಗಳ-ಲ್ಲೂ ಜೋರು ಮಳೆ ಇತ್ತು. ಅರ್ಧ ಗಂಟೆ ನಿರಂತರವಾಗಿ ಸುರಿದ ಮಳೆಯಿಂದಾಗಿ ಕೆಲ ರಸ್ತೆಗಳಲ್ಲಿ ನೀರು ಹರಿಯಿತು. ಅದೇ ನೀರಿನಲ್ಲೇ ವಾಹನಗಳು ಸಂಚರಿಸಿದವು. ಕೆಲ ವಾಹನಗಳು ಕೆಟ್ಟು ನಿಂತಿದ್ದವು.

'ಕೆಲ ಭಾಗಗಳಲ್ಲಿ ಮಳೆ ಪ್ರಮಾಣ ಹೆಚ್ಚಿತ್ತು. ಆದರೆ, ಹಾನಿ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ. ರಸ್ತೆಯಲ್ಲಿ ನಿಂತಿದ್ದ ನೀರು, ಕೆಲ ಗಂಟೆಗಳ ಬಳಿಕ ಖಾಲಿ ಆಗಿದೆ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

'ಭಾನುವಾರ ನಸುಕಿನಿಂದ ರಾತ್ರಿ 8.30 ಗಂಟೆಯವರೆಗೆ ಸರಾಸರಿ 2.08 ಮಿ.ಮೀ ಸರಾಸರಿ ಮಳೆ ಆಗಿದೆ' ಎಂದೂ ತಿಳಿಸಿದರು.

| ವಿವಿಧ ಪ್ರದೇಶಗಳಲ್ಲಿ ಮಳೆ ಪ್ರಮಾಣ (ಮಿ.ಮೀ.ಗಳಲ್ಲಿ) | |
|---|---|
| ದೊಮ್ಮಲೂರು, ಸೀಗೆಹಳ್ಳಿ | 9.5 |
| ಹೂಡಿ | 9 |
| ಕಾಡುಗೋಡಿ | 8.5 |
| ಕೆ.ಆರ್.ಪುರ, ಹೊನ್ನಾರಪೇಟೆ, ಅವಲಹಳ್ಳಿ | 7.5 |
| ಸಂಪಂಗಿರಾಮನಗರ | 7 |
| ಹೊಯ್ಸಳನಗರ | 6.5 |
| ರಾಮಮೂರ್ತಿ ನಗರ, ನಾಗರಭಾವಿ | 5 |
| ಬಾಣಸವಾಡಿ, ಕಾಟನ್‌ಪೇಟೆ, ಪುಲಿಕೇಶಿನಗರ | 4.5 |
| ಆರ್.ಆರ್.ನಗರ, ಕುಶಾಲನಗರ | 3.5 |
| ಅಗ್ರಹಾರ ದಾಸರಹಳ್ಳಿ | 3 |

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 07-12-2020 |
| --- | --- |
| Page No | 3B |

ಬಿಬಿಎಂಪಿ ಚುನಾವಣೆ: ಮುಂದುವರಿದ ಅನಿಶ್ಚಿತತೆ • ಕಾಂಗ್ರೆಸ್‌ನಲ್ಲಿ ಮನೆಮಾಡಿದ ಅಸಮಾಧಾನ

# ಮುಂದಾಳುಗಳ ವಲಸೆ ಪರ್ವಕ್ಕೆ ಪೂರ್ವರಂಗ ಸಜ್ಜು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿಗೆ ಚುನಾವಣೆ ನಡೆಸಲು ಅಧಿಸೂಚನೆ ಹೊರಡಿಸಬೇಕು ಎಂದು ಹೈಕೋರ್ಟ್ ಆದೇಶ ಹೊರಡಿಸಿದ ಬೆನ್ನಲ್ಲೇ ಸ್ಥಳೀಯ ಮಟ್ಟದ ಮುಂದಾಳುಗಳ ವಲಸೆಗೆ ಪೂರ್ವ ರಂಗ ಸಜ್ಜಾಗಿದೆ.

ಹೈಕೋರ್ಟ್ ಆದೇಶದ ಪ್ರಕಾರ ಇನ್ನು ಆರು ವಾರಗಳಲ್ಲೇ ಪಾಲಿಕೆ ಚುನಾವಣೆಗೆ ಅಧಿಸೂಚನೆ ಪ್ರಕಟವಾಗುತ್ತದೆಯೋ ಅಥವಾ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದರೆ ಚುನಾವಣೆ ಮತ್ತಷ್ಟು ಮುಂದಕ್ಕೆ ಹೋಗುತ್ತದೆಯೇ ಎಂಬ ಅನಿಶ್ಚಿತತೆ ಈಗಲೂ ಮುಂದುವರಿದಿದೆ. ಈ ನಡುವೆ, ರಾಜಕೀಯ ಪಕ್ಷಗಳು ಬೇರೆ ಪಕ್ಷಗಳ ಸ್ಥಳೀಯ ಪ್ರಮುಖರಿಗೆ ಗಾಳ ಹಾಕುವುದಕ್ಕೆ ಶುರು ಹಚ್ಚಿಕೊಂಡಿವೆ.

'ಸೂಕ್ತ ಸ್ಥಾನಮಾನ ಸಿಕ್ಕಿಲ್ಲ, ಬಿಜೆಪಿ ಸರ್ಕಾರ ಇರುವುದರಿಂದ ತಮ್ಮವರಿಗೆ ಗುತ್ತಿಗೆ ಕೊಡಿಸುವುದು ಸುಲಭವಾಗಬಹುದು, ಬಿಜೆಪಿಗೆ ಹೋದರೆ ಗೆಲ್ಲುವ ಸಾಧ್ಯತೆ ಹೆಚ್ಚು' ಎಂಬ ಕಾರಣಗಳಿಗಾಗಿ ಕಾಂಗ್ರೆಸ್‌ನ ಕೆಲ ತಳಹಂತದ ನಾಯಕರು ಪಕ್ಷಾಂತರಕ್ಕೆ ಮನಸ್ಸು ಮಾಡಿದ್ದಾರೆ.

ಗೋವಿಂದರಾಜ ವಿಧಾನಸಭಾ ಕ್ಷೇತ್ರದ ರಾಜ್‌ಕುಮಾರ್ ವಾರ್ಡ್‌ನಲ್ಲಿ 2015ರಲ್ಲಿ ಕಾಂಗ್ರೆಸ್‌ನಿಂದ ಗೆದ್ದಿದ್ದ ರೂಪಾ ಲಿಂಗೇಶ್ವರ್ ಈಗಾಗಲೇ ಬಿಜೆಪಿಗೆ ಅಧಿಕೃತವಾಗಿ ಸೇರ್ಪಡೆಯಾಗಿದ್ದಾರೆ. ಈ ಕ್ಷೇತ್ರದ ಕಾಂಗ್ರೆಸ್‌ನ ಹಿರಿಯ ಮುಖಂಡ ಸೋಮಶೇಖರ ಗೌಡ ಅವರೂ ಪಕ್ಷದಲ್ಲಿ ಸೂಕ್ತ ಸ್ಥಾನ ಸಿಕ್ಕಿಲ್ಲ ಎಂಬ ಅಸಮಾಧಾನದಿಂದ ಒಂದು ಕಾಲನ್ನು ಪಕ್ಷದಿಂದ ಹೊರಗೆ ಇಟ್ಟಿದ್ದಾರೆ. ಕಾಂಗ್ರೆಸ್ ಯುವ ಘಟಕದಲ್ಲಿ ಈ ಹಿಂದೆ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದ ಅವರು ಪಕ್ಷದ ಕಿಸಾನ್ ಘಟಕದಲ್ಲಿ ಪದಾಧಿಕಾರಿ.

**ನಾಯಕರ ಅಸಡ್ಡೆಗೆ ಮುನಿಸು:** 'ಕೋವಿಡ್ ನಿಯಂತ್ರಣದಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಇನ್ನೊಂದೆಡೆ, ಕಸ ನಿರ್ವಹಣೆ ಶುಲ್ಕ ವಿಧಿಸಿ ಅದನ್ನು ವಿದ್ಯುತ್ ಬಿಲ್ ಜೊತೆ ಸಂಗ್ರಹಿಸಲು ಬಿಬಿಎಂಪಿ ಸಿದ್ಧತೆ ನಡೆಸಿದೆ. ಆಸ್ತಿ ತೆರಿಗೆ ಹೆಚ್ಚಿಸುವುದಕ್ಕೂ ತಯಾರಿ ನಡೆದಿದೆ. ಕಟ್ಟಡ ಪರವಾನಗಿ ಶುಲ್ಕದ ಮೇಲೆ ಸೆಸ್ ಹಾಕುವ ಮೂಲಕವೂ ನಾಗರಿಕರ ಮೇಲೆ ಹೊರೆ ಹೆಚ್ಚಿಸಲಾಗಿದೆ. ಆದರೂ ನಾಯಕರು ಈ ಬಗ್ಗೆ ಗಟ್ಟಿ ಧ್ವನಿ ಎತ್ತುತ್ತಿಲ್ಲ. ಹೋರಾಟ ರೂಪಿಸುತ್ತಿಲ್ಲ' ಎಂದು ಕಾಂಗ್ರೆಸ್‌ನಿಂದ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗಿದ್ದ ಮುಖಂಡರೊಬ್ಬರು ಬೇಸರ ವ್ಯಕ್ತಪಡಿಸಿದರು.

'ನಮ್ಮ ನಾಯಕರು ಉಪಚುನಾವಣೆ ಗುಂಗಿನಿಂದ ಇನ್ನೂ ಹೊರಗೆ ಬಂದಿಲ್ಲ. ಇನ್ನೊಂದೆಡೆ, ಬಿಜೆಪಿ ನಾಯಕರು ಬಿಬಿಎಂಪಿ ವ್ಯಾಪ್ತಿಯಲ್ಲಿ ತಮ್ಮ ಪಕ್ಷದ ವಿರುದ್ಧ ಜನಾಭಿಪ್ರಾಯ ಇದ್ದರೂ ಪಕ್ಷದ ನೆಲೆ ಗಟ್ಟಿ ಮಾಡಿಕೊಳ್ಳುವ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ನಮ್ಮವರು ಈಗ ನಿದ್ದೆ ಹೋಗಿ ಚುನಾವಣೆಯ ಕೊನೆಗಳಿಗೆಯಲ್ಲಿ ಹೋರಾಟ ನಡೆಸಿದರೆ ಪಾಲಿಕೆ ಚುಕ್ಕಾಣಿ ಹಿಡಿಯುವುದು ಕಷ್ಟವಿದೆ' ಎಂದು ಅವರು ಅಭಿಪ್ರಾಯಪಟ್ಟರು.



ಬಿಬಿಎಂಪಿ ಕಚೇರಿ

## ಹೊಸ ಪಕ್ಷಗಳಿಂದ ಬಿರುಸಿನ ಸಿದ್ಧತೆ

ಇದೇ ಮೊದಲ ಬಾರಿಗೆ ಬಿಬಿಎಂಪಿ ಚುನಾವಣೆಯಲ್ಲಿ ಸ್ಪರ್ಧಿಸಲು ಆಮ್ ಆದ್ಮಿ ಪಾರ್ಟಿ, ಬೆಂಗಳೂರು ನವನಿರ್ಮಾಣ ಪಕ್ಷ, ಕರ್ನಾಟಕ ರಾಷ್ಟ್ರ ಸಮಿತಿ ಮೊದಲಾದ ಪಕ್ಷಗಳು ಸಿದ್ಧತೆ ನಡೆಸಿವೆ.

ಜನರನ್ನು ಬಾಧಿಸುವ ತಳ ಹಂತದ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಬಿಬಿಎಂಪಿ ಹಾಗೂ ಸರ್ಕಾರದ ವಿರುದ್ಧ ಪ್ರತಿಭಟನೆಗಳನ್ನು ಹಮ್ಮಿಕೊಳ್ಳುತ್ತಿವೆ. ತಳಮಟ್ಟದಲ್ಲಿ ವರ್ಚಸ್ಸು ಹೊಂದಿರುವ ಹಾಗೂ ನಾಗರಿಕ ಹೋರಾಟಗಳಲ್ಲಿ ಸಕ್ರಿಯವಾಗಿರುವ ಮುಖಂಡರನ್ನು ತಮ್ಮ ಪಕ್ಷಗಳತ್ತ ಸೆಳೆಯಲು ಕಾರ್ಯತಂತ್ರ ರೂಪಿಸಿವೆ.

## ಬಿಜೆಪಿಯಲ್ಲೂ ಹೆಚ್ಚುತ್ತಿದೆ ಒಳಬೇಗುದಿ

ಇನ್ನೊಂದೆಡೆ, ಬಿಜೆಪಿಯಲ್ಲೂ ನಾಯಕರ ವಿರುದ್ಧ ಮುನಿಸಿಕೊಂಡವರ ಸಂಖ್ಯೆ ಹೆಚ್ಚುತ್ತಿದೆ. ವಾರ್ಡ್ ಮೀಸಲಾತಿ ಪ್ರಕಟಿಸುವಾಗ ತಮ್ಮ ಪಕ್ಷದ ಮುಖಂಡರೇ ಬೆನ್ನಿಗೆ ಚೂರಿ ಹಾಕಿದ್ದಾರೆ ಎಂಬ ಕಾರಣಕ್ಕೆ ಬಿಜೆಪಿಯ ಕೆಲ ಸ್ಥಳೀಯ ನಾಯಕರು ಬೇಸರಗೊಂಡಿದ್ದಾರೆ.

'ಬಿಬಿಎಂಪಿ ಆಡಳಿತಾವಧಿಯ ಕೊನೆಯ ವರ್ಷ ತಮ್ಮದೇ ಪಕ್ಷ ಚುಕ್ಕಾಣಿ ಹಿಡಿದರೂ ನಮ್ಮ ವಾರ್ಡ್ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಲಿಲ್ಲ' ಎಂಬ ಅಸಮಾಧಾನವೂ ಕೆಲವರಲ್ಲಿ ಮನೆ ಮಾಡಿದೆ. ಬಿಜೆಪಿಯ ಶಾಸಕರು ಬಿಬಿಎಂಪಿ ಚುನಾವಣೆ ಮುಂದೂಡಲು ಇನ್ನಿಲ್ಲದ ಸಾಹಸ ಮಾಡುತ್ತಿರುವುದರಿಂದಲೂ ಪಾಲಿಕೆಯ ಮಾಜಿ ಸದಸ್ಯರು ಬೇಸತ್ತಿದ್ದಾರೆ.

'2015ರಲ್ಲಿ ನಮ್ಮ ಪಕ್ಷದ ಮುಖಂಡರೇ ನ್ಯಾಯಾಲಯದ ಮೊರೆ ಹೋಗಿ ಬಿಬಿಎಂಪಿ ಚುನಾವಣೆ ಮುಂದೂಡುವ ಸರ್ಕಾರದ ಪ್ರಯತ್ನವನ್ನು ವಿಫಲಗೊಳಿಸಿದ್ದರು. ಈಗ ನಮ್ಮದೇ ಸರ್ಕಾರವಿರುವಾಗ ಅದೇ ಚಾಳಿ ಮುಂದುವರಿಸುವುದು ಸರಿಯಲ್ಲ. ನಮ್ಮದು ವಿಭಿನ್ನ ಪಕ್ಷ, ಶಿಸ್ತಿನ ಪಕ್ಷ ಎಂದು ಜನರ ಮುಂದೆ ಬಾಯಿ ಮಾತಿಗೆ ಹೇಳಿಕೊಂಡರೇ ಸಾಕೇ. ಅದಕ್ಕೆ ತಕ್ಕಂತೆ ನಡೆದುಕೊಳ್ಳಬೇಡವೇ' ಎಂದು ಬಿಜೆಪಿಯ ಸ್ಥಳೀಯ ನಾಯಕರೊಬ್ಬರು ಬೇಸರ ವ್ಯಕ್ತಪಡಿಸಿದರು.

ಆರ್.ಆರ್.ನಗರ, ಕೆ.ಆರ್.ಪುರ ಹಾಗೂ ಯಶವಂತಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಶಾಸಕರ ಜೊತೆ ಕಾಂಗ್ರೆಸ್‌ನ ಅನೇಕ ಮಾಜಿ ಕಾರ್ಪೊರೇಟರ್‌ಗಳು ಬಿಜೆಪಿಗೆ ವಲಸೆ ಬಂದಿದ್ದಾರೆ. ಅವರು ಪ್ರತಿನಿಧಿಸುತ್ತಿದ್ದ ವಾರ್ಡ್‌ಗಳಲ್ಲಿ ಬಿಬಿಎಂಪಿ ಚುನಾವಣೆಯಲ್ಲಿ ಟಿಕೆಟ್ ಆಕಾಂಕ್ಷಿಗಳಾಗಿದ್ದ ಬಿಜೆಪಿಯ ಸ್ಥಳೀಯ ನಾಯಕರು ಇದರಿಂದಾಗಿ ಟಿಕೆಟ್ ಕೈತಪ್ಪುವ ಆತಂಕ ಎದುರಿಸುತ್ತಿದ್ದಾರೆ. ಅಂತಹ ಕೆಲ ನಾಯಕರು ಕಾಂಗ್ರೆಸ್ ಕದ ತಟ್ಟಲು ತೆರೆಮರೆಯಲ್ಲಿ ಸಿದ್ಧತೆ ನಡೆಸಿದ್ದಾರೆ.

### ವಾರ್ಡ್ ರಚನೆ ಬಳಿಕವೇ ಚುನಾವಣೆ: ಅಶೋಕ

'ವಾರ್ಡ್‌ಗಳ ಸಂಖ್ಯೆಯನ್ನು243ಕ್ಕೆ ಹೆಚ್ಚಿಸಿ ಮರುವಿಂಗಡಣೆ ಮಾಡಿದ ಬಳಿಕವೇ ಬಿಬಿಎಂಪಿ ಚುನಾವಣೆ ನಡೆಸುವ ಇಚ್ಛೆಯನ್ನು ಸರ್ಕಾರ ಹೊಂದಿದೆ. ಈ ಸಲುವಾಗಿ ವಿಧಾನ ಮಂಡಲದ ಅಧಿವೇಶನದಲ್ಲಿ ಪ್ರತ್ಯೇಕ ಮಸೂದೆ ಮಂಡನೆಗೂ ಸಿದ್ಧತೆ ನಡೆದಿದೆ' ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಅಧಿವೇಶನದಲ್ಲಿ ಬಿಬಿಎಂಪಿ ಮಸೂದೆ ಮಂಡಿಸಲಿದ್ದೇವೆ. ಈ ಮಸೂದೆ ಅಂಗೀಕಾರಗೊಂಡರೆ, ಬಿಬಿಎಂಪಿ ಚುನಾವಣೆ ಸಂಬಂಧ ಹೈಕೋರ್ಟ್ ಇತ್ತೀಚೆಗೆ ನೀಡಿರುವ ಆದೇಶವನ್ನು ಪ್ರಶ್ನಿಸಿ ಸರ್ಕಾರವು ಸುಪ್ರೀಂ ಕೋರ್ಟ್ ಮೊರೆ ಹೋಗುವ ಪ್ರಮೇಯವೇ ಎದುರಾಗದು' ಎಂದರು.

ಈಗಿರುವ 198 ವಾರ್ಡ್‌ಗಳ ಸಂಖ್ಯೆಯನ್ನು ಹಾಗೆಯೇ ಉಳಿಸಿಕೊಂಡು ಬಿಬಿಎಂಪಿಗೆ ಶೀಘ್ರವೇ ಚುನಾವಣೆ ನಡೆಸಬೇಕು. ಆರು ವಾರಗಳ ಒಳಗೆ ಈ ಕುರಿತು ಅಧಿಸೂಚನೆ ಹೊರಡಿಸಬೇಕು ಎಂದು ಹೈಕೋರ್ಟ್ ಆದೇಶ ಮಾಡಿತ್ತು.

'ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸುವ ಕುರಿತು ಕಾನೂನು ತಜ್ಞರ ಜೊತೆ ಸಮಾಲೋಚನೆ ನಡೆಸಿದ್ದೇವೆ. ಬೆಂಗಳೂರಿಗೆ ಪ್ರತ್ಯೇಕ ಕಾಯ್ದೆ ರೂಪಿಸುವ ಸಲುವಾಗಿ ರಚಿಸಲಾಗಿದ್ದ ವಿಧಾನ ಮಂಡಲದ ಜಂಟಿ ಸಲಹಾ ಸಮಿತಿಯೇ ಈ ಮಸೂದೆಯನ್ನು ರೂಪಿಸಿದೆ. ವಾರ್ಡ್‌ಗಳ ಸಂಖ್ಯೆ ಹೆಚ್ಚಿಸುವುದರ ಜೊತೆ ಮೇಯರ್ ಅಧಿಕಾರಾವಧಿಯನ್ನು ಎರಡೂವರೆ ವರ್ಷಗಳಿಗೆ ಹೆಚ್ಚಿಸುವ ಪ್ರಸ್ತಾಪವೂ ಇದೆ. ವಲಯಗಳ ಸಂಖ್ಯೆಯನ್ನು 12ಕ್ಕೆ ಅಥವಾ 15ಕ್ಕೆ ಹೆಚ್ಚಿಸುವ ಅಂಶವೂ ಮಸೂದೆಯಲ್ಲಿದೆ' ಎಂದು ಅವರು ತಿಳಿಸಿದರು.

ಕನ್ನಡಪ್ರಭ

| Date | 07-12-2020 |
|---|---|
| Page No | 2 |

# 2ನೇ ಅಲೆ ಭೀತಿ ಮಧ್ಯೆ ಕೊರೋನಾ ಸಾವು ಹೆಚ್ಚಳ

**ಸಿಲಿಕಾನ್ ಸಿಟಿಯಲ್ಲಿ ಸಾವಿನ ಖಚಿತತೆ ಪ್ರಮಾಣ ಶೇ.1.07ಕ್ಕೆ ಏರಿಕೆ | ಈ ತಿಂಗಳ ಮೊದಲ ನಾಲ್ಕು ದಿನದಲ್ಲಿ ಸೋಂಕಿತರ ಸಾವಿನ ಸಂಖ್ಯೆ ಹೆಚ್ಚಳ ಸೋಂಕಿನ ಖಚಿತತೆ ಪ್ರಮಾಣವೂ ಶೇ.1.59ಕ್ಕೆ ಜಿಗಿತ | ನಗರದಲ್ಲಿ ವಾರದಿಂದ ನಿತ್ಯ ಸರಾಸರಿ 700ಕ್ಕೂ ಅಧಿಕ ಕೇಸ್ | ಜನರಲ್ಲಿ ಹೆಚ್ಚಿದ ಆತಂಕ**

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜಧಾನಿ ಬೆಂಗಳೂರಿನಲ್ಲಿ ಕೊರೋನಾ ಎರಡನೇ ಅಲೆ ಆತಂಕಕ್ಕೆ ಪುಷ್ಟಿ ನೀಡುವಂತೆ ಡಿಸೆಂಬರ್ ತಿಂಗಳ ಮೊದಲ ನಾಲ್ಕು ದಿನದಲ್ಲಿ ಸೋಂಕಿತರ ಸಾವಿನ ಪ್ರಮಾಣ ಹೆಚ್ಚಾಗಿದೆ.

ಭಾರತ ಸೇರಿದಂತೆ ಪ್ರಪಂಚದಾದ್ಯಂತ ಕೊರೋನಾ ಎರಡನೇ ಆರಂಭವಾಗಿದ್ದು, ಬೆಂಗಳೂರಿನಲ್ಲಿ ಕೊರೋನಾ ಸೋಂಕಿತರ ಸಾವಿನ ಸಂಖ್ಯೆ ಹೆಚ್ಚಾಗಿರುವುದು ಆತಂಕ ಹೆಚ್ಚಿಸಿದೆ. ನಗರದಲ್ಲಿ ಪ್ರತಿನಿತ್ಯ 40 ಸಾವಿರಕ್ಕೂ ಅಧಿಕ ಸೋಂಕು ಪರೀಕ್ಷೆ ಮಾಡುತ್ತಿದ್ದು, ಇದರಲ್ಲಿ ಖಚಿತ ಪ್ರಕರಣ ಸಂಖ್ಯೆ ಶೇ.1.59ರಷ್ಟಿದೆ. ಆದರೆ, ಸಾವಿನ ಪ್ರಮಾಣ ಶೇ.1ಕ್ಕಿಂತ ಹೆಚ್ಚಾಗಿರುವುದು ಭೀತಿ ದುಪ್ಪಟ್ಟುಗೊಂಡಿದೆ.

ಮೊದಲು ಕೊರೋನಾ ಆರಂಭಗೊಂಡಾಗ ಕಳೆದ ಏಪ್ರಿಲ್‌ನಿಂದ ಆಗಸ್ಟ್‌ವರೆಗೂ ಪ್ರತಿನಿತ್ಯ ಕೋವಿಡ್ ಸಾವಿನ ಪ್ರಮಾಣ ಶೇ.2ರಿಂದ 5ರಷ್ಟಿತ್ತು. ಸೆಪ್ಟೆಂಬರ್‌ನಲ್ಲಿ ಶೇ.0.95, ಆಕ್ಟೋಬರ್‌ನಲ್ಲಿ ಶೇ.0.89 ಹಾಗೂ ನವೆಂಬರ್‌ನಲ್ಲಿ ಶೇ.0.85ರಷ್ಟು ಸಾವಿನ ಪ್ರಕರಣಗಳು ದಾಖಲಾಗುವ ಮೂಲಕ ಸೋಂಕಿತರ ಸಾವಿನ ಪ್ರಮಾಣ ಶೇ.1ಕ್ಕಿಂತ ಕಡಿಮೆ ಆಗಿತ್ತು. ಇದೀಗ ಡಿ.1ರಿಂದ 4ರ ತನಕ ಅಂದರೆ 4 ದಿನಗಳಲ್ಲಿ 1,74,850 ಮಂದಿಗೆ ಕೋವಿಡ್ ಪರೀಕ್ಷೆ ಮಾಡಲಾಗಿದ್ದು, ಅದರಲ್ಲಿ 2,799 ಮಂದಿಗೆ ಸೋಂಕು ದೃಢವಾಗಿದೆ. ಈ ಮೂಲಕ ಸೋಂಕು ಖಚಿತತೆ ಪ್ರಮಾಣ ಶೇ.1.59 ರಷ್ಟಿದ್ದು, ಸಾವಿನ ಪ್ರಮಾಣ ಪುನಃ ಶೇ.1.07ಕ್ಕೆ ಏರಿಕೆಯಾಗಿದೆ ಎಂದು ಬಿಬಿಎಂಪಿ ಮಾಹಿತಿ ನೀಡಿದೆ.

## ಸೋಂಕಿತರ ಪತ್ತೆಯಲ್ಲೂ ಏರಿಕೆ



ಕಳೆದ 15 ದಿನಗಳ ಸರಾಸರಿ 500 ಕ್ಕಿಂತ ಕಡಿಮೆಯಿದ್ದ ಸೋಂಕು ಪ್ರಕರಣಗಳ ಸಂಖ್ಯೆ ಡಿ.1ರಿಂದ ಡಿ.4ರ ನಾಲ್ಕು ದಿನಗಳಲ್ಲಿ ಸರಾಸರಿ ಸಂಖ್ಯೆ 700ಕ್ಕಿಂತ ಅಧಿಕವಾಗಿ ಪತ್ತೆಯಾಗುತ್ತಿವೆ. ಇದರಿಂದ ಎರಡನೇ ಅಲೆಯ ಆತಂಕ ಹೆಚ್ಚಾಗಿದೆ. ಆರೋಗ್ಯ ತಜ್ಞರು ಚಳಿಗಾಲದಲ್ಲಿ ಕೊರೋನಾ ಸೋಂಕಿನ ಜೀವತಾವಧಿ ಹೆಚ್ಚಾಗಲಿದ್ದು, ಹೆಚ್ಚು ಜನರಿಗೆ ಸೋಂಕು ಹರಡುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ. ಅದೇ ಮಾದರಿಯಲ್ಲಿ ಕೊರೋನಾ ಸೋಂಕು ಪತ್ತೆ ಪ್ರಮಾಣದ ಜೊತೆಗೆ ಸಾವಿನ ಪ್ರಮಾಣವೂ ಹೆಚ್ಚಾಗಿರುವುದರಿಂದ ನಗರದಲ್ಲಿ ಭೀತಿ ಮನೆ ಮಾಡಿದೆ. ಸೋಂಕು ನಿಯಂತ್ರಣಕ್ಕೆ ಸಾರ್ವಜನಿಕರು ಕೋವಿಡ್ ಮುನ್ನೆಚ್ಚರಿಕಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿದೆ.

# ಬೆಂಗಳೂರಿನಲ್ಲಿ 3.50 ಲಕ್ಷ ದಾಟಿದ ಗುಣಮುಖರ ಸಂಖ್ಯೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜಧಾನಿ ಬೆಂಗಳೂರಿನಲ್ಲಿ ಭಾನುವಾರ 733 ಹೊಸ ಕೊರೋನಾ ಸೋಂಕು ಪ್ರಕರಣ ಪತ್ತೆಯಾಗಿದ್ದು, 275 ಮಂದಿ ಸೋಂಕಿನಿದ ಗುಣಮುಖರಾಗಿದ್ದಾರೆ. ಏಳು ಮಂದಿ ಸೋಂಕಿನಿಂದ ಮೃತಪಟ್ಟ ವರದಿಯಾಗಿದೆ.

ಈ ಮೂಲಕ ನಗರದ ಒಟ್ಟು ಕೊರೋನಾ ಸೋಂಕಿತರ ಸಂಖ್ಯೆ 3,74,024 ಏರಿಕೆಯಾಗಿದ್ದು, ಗುಣಮುಖರ ಸಂಖ್ಯೆ 3,50,204ಕ್ಕೆ ತಲುಪಿದೆ. ಇನ್ನು ಸಕ್ರಿಯ ಪ್ರಕರಣಗಳ ಸಂಖ್ಯೆ 19,636ಕ್ಕೆ ಏರಿಕೆಯಾಗಿದ್ದು, ಈ ಪೈಕಿ 143 ಸೋಂಕಿತರ ಆರೋಗ್ಯ ಪರಿಸ್ಥಿತಿ ಗಂಭೀರವಾದ ಹಿನ್ನೆಲೆಯಲ್ಲಿ ನಗರದ ವಿವಿಧ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಭಾನುವಾರ ಏಳು ಮಂದಿ ಕೊರೋನಾ ಸೋಂಕಿನಿಂದ ಮೃತಪಟ್ಟ ವರದಿಯಾಗಿದ್ದು, ಮೃತರ ಸಂಖ್ಯೆ 4,183 ಕ್ಕೆ ಏರಿಕೆಯಾಗಿದೆ.

ಕನ್ನಡಪ್ರಭ

| Date | 07-12-2020 |
|---|---|
| Page No | 2 |

# ಗ್ರಾಹಕರು ಮಾಸ್ಕ್ ಧರಿಸದಿದ್ರೆ ನಮಗೇಕೆ ದಂಡ?

## ಇತರರಿಗೆ ಇರದ ಕಾನೂನು ನಮಗೆ ಮಾತ್ರ ಏಕೆ? | ವ್ಯಾಪಾರಿಗಳು, ಹೋಟೆಲ್, ಮಾಲ್, ಮಳಿಗೆಗಳ ಮಾಲೀಕರ ಪ್ರಶ್ನೆ ಬಿಬಿಎಂಪಿ ವಿರುದ್ಧ ಕಿಡಿ | ಕೂಡಲೇ ಸುತ್ತೋಲೆ ಹಿಂಪಡೆಯುವಂತೆ ಆಗ್ರಹ | ಇಲ್ಲವಾದರೆ ಉಗ್ರ ಹೋರಾಟದ ಎಚ್ಚರಿಕೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸಾರ್ವಜನಿಕರು ಮಾಸ್ಕ್ ಧರಿಸದಿದ್ದರೆ, ಸಾಮಾಜಿಕ ಅಂತರ ಕಾಯ್ದುಕೊಳ್ಳದಿದ್ದರೆ ಸಂಬಂಧಪಟ್ಟ ವ್ಯಾಪಾರಿ ಸ್ಥಳದ ಮಾಲೀಕರಿಗೆ ದಂಡ ವಿಧಿಸುವ ಬಿಬಿಎಂಪಿ ಸುತ್ತೋಲೆಗೆ ತೀವ್ರ ವಿರೋಧ ವ್ಯಕ್ತವಾಗಿದ್ದು, ಸುತ್ತೋಲೆ ಹಿಂಪಡೆಯದಿದ್ದರೆ ಪ್ರತಿಭಟನೆ ನಡೆಸುವುದಾಗಿ ವಿವಿಧ ಸಂಘಟನೆಗಳು ಎಚ್ಚರಿಸಿವೆ.

ಕೊರೋನಾದಿಂದ ಈಗಾಗಲೇ ವ್ಯಾಪಾರಿಗಳು ತತ್ತರಿಸಿದ್ದಾರೆ. ಇಂತಹ ಸನ್ನಿವೇಶದಲ್ಲಿ ಕೋವಿಡ್-19 ತಡೆಗಟ್ಟುವ ನೆಪದಲ್ಲಿ ಅಧಿಕ ಮೊತ್ತದ ದಂಡ ವಿಧಿಸಿ ತನ್ನ ಖಜಾನೆ ಭರ್ತಿಗೊಳಿಸುವ ಕಾರ್ಯಕ್ಕೆ ಇಳಿದಿದೆ ಎಂದು ಬಿಬಿಎಂಪಿ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ.

ಕೊರೋನಾ ಸೋಂಕು ತಡೆಯುವುದು ಪ್ರತಿಯೊಬ್ಬರ ಜವಾಬ್ದಾರಿ. ಗ್ರಾಹಕರು ಮಾಸ್ಕ್ ಧರಿಸದಿದ್ದರೆ ಸಂಬಂಧಪಟ್ಟ ಮಾಲೀಕರಿಗೆ ದಂಡ ವಿಧಿಸಬೇಕೇ?, ಕೋವಿಡ್ ನೆಪದಲ್ಲಿ ನಿರೀಕ್ಷೆಗೂ ಮೀರಿ ದಂಡ ವಸೂಲಿಗೆ ಇಳಿದಿರುವುದು ಎಷ್ಟು ಸರಿ?, ಬಿಬಿಎಂಪಿ ಈ ಸುತ್ತೋಲೆ ಹಿಂಪಡೆಯಬೇಕು. ಇಲ್ಲದಿದ್ದರೆ ಬೃಹತ್ ಹೋರಾಟ ಮಾಡಲಾಗುವುದು ಎಂದು ವಿವಿಧ ಸಂಘಟನೆಗಳ ಮುಖಂಡರು ಸರ್ಕಾರಕ್ಕೆ ಎಚ್ಚರಿಕೆಯ ಸಂದೇಶ ರವಾನಿಸಿದ್ದಾರೆ.

ಕೋವಿಡ್-19 ಬಂದಾಗಿನಿಂದಲೂ ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತಾ ಬಂದಿದ್ದೇವೆ. ಹೋಟೆಲ್‌ಗಳು, ಚಿತ್ರಮಂದಿರ, ಮಾಲ್‌ಗಳು, ರೆಸ್ಟೋರೆಂಟ್‌ಗಳು ಒಳಗೊಂಡಂತೆ ಜನಸಂದಣಿ ಹೆಚ್ಚಿರುವ ವ್ಯಾಪಾರ ಕೇಂದ್ರಗಳಲ್ಲಿ ವಿವಿಧ ಮುನ್ನೆಚ್ಚರಿಕೆಗಳನ್ನು ವಹಿಸಲಾಗುತ್ತಿದೆ. ಹೀಗಿದ್ದರೂ ಬಿಬಿಎಂಪಿ ದಂಡ ವಸೂಲಿಗೆ ಇಳಿದಿರುವುದು ನ್ಯಾಯಸಮ್ಮತವಲ್ಲ ಎಂದು ಹೋಟೆಲ್ ಮಾಲೀಕರ ಸಂಘ, ಚಿತ್ರಮಂದಿರ ಮಾಲೀಕರ ಸಂಘ, ಕಲ್ಯಾಣ ಮಂಟಪಗಳ ಮಾಲೀಕರ ಸಂಘ, ಮಾಲ್‌ಗಳು, ಬೀದಿ ಬದಿ ವ್ಯಾಪಾರಿಗಳ ಸಂಘಟನೆಗಳು ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಬಿಬಿಎಂಪಿ ನಡೆಯನ್ನು ವಿರೋಧಿಸಿದ್ದಾರೆ.

**ಗ್ರಾಹಕರು ಮಾಸ್ಕ್ ಹಾಕದಿದ್ದರೆ ವ್ಯಾಪಾರಿಗಳಿಗೆ 5 ಸಾವಿರ ರು. ದಂಡ ಹಾಕುವುದು ಯಾವ ರೀತಿ ನ್ಯಾಯ? ಬೀದಿ ಬದಿ ವ್ಯಾಪಾರಿಗಳು ಕೇವಲ 100ರಿಂದ 300 ರು. ವ್ಯಾಪಾರ ಮಾಡುವುದೇ ಕಷ್ಟವಾಗಿದೆ. ಇಂಥ ಸಂದರ್ಭದಲ್ಲಿ ಹೆಚ್ಚಿನ ದಂಡ ಕಟ್ಟಲು ಆಗುತ್ತದೆಯೇ? ಸರ್ಕಾರ ಹಾಗೂ ಬಿಬಿಎಂಪಿ ಈ ಸುತ್ತೋಲೆ ಹಿಂಪಡೆಯಬೇಕು.**

• **ರಂಗಸ್ವಾಮಿ** ರಾಜ್ಯಾಧ್ಯಕ್ಷ, ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ ಸಂಘಟನೆಗಳ ಒಕ್ಕೂಟ

**ಇತರರಿಗೆ ಇರದ ಕಾನೂನು ನಮಗೆ ಮಾತ್ರ ಏಕೆ? ಸಚಿವ ವಿ.ಸೋಮಣ್ಣನವರ ಕಚೇರಿ ಉದ್ಘಾಟನೆ ಕಾರ್ಯಕ್ರಮದಲ್ಲಿ ನೂರಾರು ಜನರು ಸೇರಿದ್ದರು. ಕರ್ನಾಟಕ ಬಂದ್ ದಿನ ಪ್ರತಿಭಟನಾಕಾರರು ಕೋವಿಡ್ ನಿಯಮಗಳನ್ನು ಗಾಳಿಗೆ ತೂರಿದ್ದರು. ಅವರಿಗೆಲ್ಲ ಯಾವ ಕಾನೂನು ಇಲ್ಲವೇ? ಆಗ ಸೋಂಕು ಹರಡುವ ನೆನಪಾಗಲಿಲ್ಲವೇ?**

• **ಪಿ.ಸಿ.ರಾವ್** ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ

ಬಿಬಿಎಂಪಿ ಸುತ್ತೋಲೆ ಕುರಿತಂತೆ ಆಯುಕ್ತರೊಂದಿಗೆ ಈಗಾಗಲೇ ಚರ್ಚಿಸಿದ್ದೇವೆ. ದಂಡ ಹಾಕುವುದಕ್ಕೂ ಒಂದು ಕ್ರಮವಿರುತ್ತದೆ. 25 ಸಾವಿರ, 50 ಸಾವಿರ ದಂಡ ಹಾಕಲು ಲೆಕ್ಕಾಚಾರವಿಲ್ಲವೇ?. ಹೋಟೆಲ್ ಮಾಲೀಕರ ಸಂಘದ ನೇತೃತ್ವದಲ್ಲಿ ಡಿ.7ರ ಸೋಮವಾರ ಎಲ್ಲಾ ಸಂಘಟನೆಗಳ ಮುಖಂಡರು ಆಯುಕ್ತರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಿದ್ದೇವೆ ಎಂದು ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದ್ದಾರೆ.

## 2ನೇ ಅಲೆ ತಡೆಗೆ ಕಠಿಣ ಕ್ರಮ ಅಗತ್ಯ: ಆಯುಕ್ತ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಚಳಿಗಾಲದಲ್ಲಿ ಕೊರೋನಾ ಸೋಂಕು ಹೆಚ್ಚಳವಾಗುವ ಸಾಧ್ಯತೆ ಇದೆ. ಈ ಬಗ್ಗೆ ತಜ್ಞರು ಎಚ್ಚರಿಕೆ ನೀಡಿದ್ದಾರೆ. ಜನವರಿಯಿಂದ ಕೊರೋನಾ 2ನೇ ಅಲೆ ಶುರುವಾಗಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಈಗಲೇ ಕೆಲವು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದು ಪಾಲಿಕೆ ಆಯುಕ್ತ ಮಂಜುನಾಥ ಪ್ರಸಾದ್ ಹೇಳಿದ್ದಾರೆ.



ಈ ಮೂಲಕ ನಗರದ ಹೋಟೆಲ್, ರೆಸ್ಟೋರೆಂಟ್ ಸೇರಿದಂತೆ ವ್ಯಾಪಾರಸ್ಥರಿಗೆ ಭಾರೀ ದಂಡ ವಿಧಿಸುವುದನ್ನು ಆಯುಕ್ತರು ಸಮರ್ಥಿಸಿಕೊಂಡಿದ್ದಾರೆ.

ಈ ಕುರಿತು ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದಲ್ಲಿ ನಡೆಯುವ ಎಲ್ಲ ಮದುವೆ ಸಮಾರಂಭದಲ್ಲಿ ಮಾರ್ಗಸೂಚಿ ಪಾಲನೆ ಆಗುತ್ತಿದೆಯೇ ಎಂಬುದನ್ನು ಪರೀಕ್ಷಿಸಲು ಮಾರ್ಷಲ್‌ಗಳನ್ನು ನೇಮಕ ಮಾಡಲು ಆಗುವುದಿಲ್ಲ. ಇದರ ಹೊಣೆ ಛತ್ರ ಮಾಲೀಕರದ್ದಾಗಿರುತ್ತದೆ. ಅವರು ಮದುವೆ ಮಾಡುವವರಲ್ಲಿ ಜಾಗೃತಿ ಮೂಡಿಸಬೇಕು. ಮಾಲ್‌ಗಳಲ್ಲಿ ಒಮ್ಮೊಮ್ಮೆ ಹೆಚ್ಚು ಜನ ಬರುತ್ತಾರೆ. ಕೆಲವರು ಕಾಟಾಚಾರಕ್ಕೆ ಮಾಸ್ಕ್ ಧರಿಸಿರುತ್ತಾರೆ. ಇವರಿಗೆಲ್ಲ ಮಾರ್ಷಲ್‌ಗಳು ತಿಳಿ ಹೇಳಲು ಸಾಧ್ಯವಿಲ್ಲ. ಮಾಲೀಕರು ಈ ಬಗ್ಗೆ ಗಮನ ನೀಡಬೇಕಾಗುತ್ತದೆ. ಇದೇ ರೀತಿ ಸಭೆಗಳ ಆಯೋಜಕರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದರು.

ಕನ್ನಡಪ್ರಭ

| Date | 07-12-2020 |
| --- | --- |
| Page No | 2 |

# ನಗರದಲ್ಲಿ ಮುಂದುವರಿದ ಪಿರಿಪಿರಿ ಮಳೆ, ಚಳಿಗಾಳಿ

## ನಿನ್ನೆ ಸಂಜೆ ಬಿರುಸಿನ ಮಳೆ | ಇನ್ನೂ 3 ದಿನ ಸಿಲಿಕಾನ್ ಸಿಟಿ ಗಡಗಡ



• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ಭಾನುವಾರವೂ ಚಳಿ ಹಾಗೂ ಮೋಡ ಕವಿದ ವಾತಾವರಣ ಮುಂದುವರೆದಿದ್ದು, ಸಂಜೆ ಜೋರು ಮಳೆ ಸುರಿಯಿತು. ಕನ್ಯಾಕುಮಾರಿ ಭಾಗದಲ್ಲಿರುವ ಚಂಡಮಾರುತದ ಪ್ರಭಾವ ಸಂಪೂರ್ಣ ತಗ್ಗದ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಬಿಸಿಲಿನ ದರ್ಶನವಾಗಿಲ್ಲ. ಮೋಡ ಕವಿದ ವಾತಾವರಣ ಕಂಡು ಬಂದಿದ್ದು, ಸಿಗೇಹಳ್ಳಿ ಮತ್ತು ದೊಮ್ಮಲೂರಿನಲ್ಲಿ ಅಧಿಕ ಮಳೆ ಬಿದ್ದಿದೆ.

ಬೆಳಗ್ಗೆಯಿಂದ ತೇವಾಂಶ ಸಹಿತ ಗಾಳಿ ಕಂಡು ಬಂತು. ಮೆಜೆಸ್ಟಿಕ್, ಶೇಷಾದ್ರಿಪುರಂ, ಶಿವಾನಂದವೃತ್ತ, ಜಯನಗರ, ಜೆ.ಪಿ.ನಗರ, ರಾಜಾಜಿನಗರ, ಮಲ್ಲೇಶ್ವರಂ, ವಿಜಯನಗರ ಸೇರಿದಂತೆ ವಿವಿಧೆಡೆ ಸಂಜೆ 4.30ರ ವೇಳೆಗೆ ಏಕಾಏಕಿ ಜೋರು ಮಳೆ ಸುರಿಯಿತು.

**ಇನ್ನೂ 3 ದಿನ ಇದೇ ವಾತಾವರಣ:** ನಗರದಲ್ಲಿ ಗರಿಷ್ಠ 24, ಕನಿಷ್ಠ 19 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಡಿ.9ರವರೆಗೂ ನಗರದಲ್ಲಿ ಚಳಿ ಹಾಗೂ ಮೋಡ ಕವಿದ ವಾತಾವರಣ ಮುಂದುವರಿಯಲಿದೆ. ಹಲವು ಪ್ರದೇಶಗಳಲ್ಲಿ ತುಂತುರು ಮಳೆ ನಿರೀಕ್ಷೆ ಇದೆ ಎಂದು ಉಸ್ತುವಾರಿ ಕೇಂದ್ರ ಮುನ್ಸೂಚನೆ ನೀಡಿದೆ.

ಕನ್ನಡಪ್ರಭ

| Date | 07-12-2020 |
|---|---|
| Page No | 2 |

# ಸ್ವತಃ ಕಸ ಸಂಗ್ರಹಿಸಿ ಸ್ವಚ್ಛತೆ ಬಗ್ಗೆ ಆಯುಕ್ತರ ಜಾಗೃತಿ



ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಅವರು ಭಾನುವಾರ ವಸಂತನಗರದಲ್ಲಿ ಕಸ ಸಂಗ್ರಹಿಸಿ, ಸ್ವಚ್ಛತೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

**ಬೆಂಗಳೂರು:** ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ಅವರು ಭಾನುವಾರ ವಸಂತ ನಗರದ ರಸ್ತೆಯಲ್ಲಿ ಬಿದ್ದಿದ್ದ ಕಸವನ್ನು ಸಂಗ್ರಹಿಸುವ ಮೂಲಕ ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸಿದರು. ವಸಂತನಗರದ ನೋಡಲ್ ಅಧಿಕಾರಿಯಾಗಿರುವ ಎನ್.ಮಂಜುನಾಥ್ ಪ್ರಸಾದ್ ಭಾನುವಾರ ಬೆಳಗ್ಗೆ ಕೈಗೆ ಗ್ಲೌಸ್‌ಗಳನ್ನು ಹಾಕಿಕೊಂಡು ಗೋಣಿ ಚೀಲ ಹಿಡಿದು ರಸ್ತೆಯಲ್ಲಿ ಬಿದ್ದಿದ್ದ ಕಸವನ್ನು ಸಂಗ್ರಹಿಸುವ ಮೂಲಕ ಸ್ವಚ್ಛತಾ ಕಾರ್ಯ ಮಾಡಿದರು.

ಈ ಕುರಿತು ಮಾತನಾಡಿದ ಅವರು, ನಮ್ಮ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಂಡರೆ ನಮ್ಮ ಆರೋಗ್ಯ ಉತ್ತಮವಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಸಾಂಕ್ರಾಮಿಕ ರೋಗಗಳು ಹರಡುತ್ತಿದ್ದು, ಅದನ್ನು ತಡೆಗಟ್ಟಲು ಸಾರ್ವಜನಿಕರು ಸ್ವಚ್ಛತೆ ಕಡೆಗೆ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಕನ್ನಡಪ್ರಭ

| Date | 07-12-2020 |
| --- | --- |
| Page No | 4 |


# ಆಪ್‌ನಿಂದ ಗೊರಕೆ ಸಾಕು, ಪೊರಕೆ ಬೇಕು ಅಭಿಯಾನ

ಬೆಂಗಳೂರು: ಮುಂಬರುವ ಬಿಬಿಎಂಪಿ ಚುನಾವಣೆ ಹಿನ್ನೆಲೆಯಲ್ಲಿ ಆಮ್ ಆದ್ಮಿ ಪಕ್ಷವು (ಆಪ್) ಬಿಬಿಎಂಪಿ ಹಾಗೂ ರಾಜ್ಯ ಸರ್ಕಾರದ ವೈಫಲ್ಯಗಳನ್ನು ಜನರಿಗೆ ತಲುಪಿಸುವ ಉದ್ದೇಶದಿಂದ 'ಗೊರಕೆ ಸಾಕು-ಪೊರಕೆ ಬೇಕು' ಅಭಿಯಾನಕ್ಕೆ ಚಾಲನೆ ನೀಡಿದೆ. ವರನಟ ಡಾ.ರಾಜ್ ಕುಮಾರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಮಂಜುನಾಥ್ ನಗರದ ನಿವಾಸಿಗಳಿಗೆ ಪಕ್ಷದ ಬಾವುಟ ನೀಡಿ ಅಭಿಯಾನಕ್ಕೆ ಚಾಲನೆ ನೀಡಿದ ಪಕ್ಷದ ರಾಜ್ಯ ಸಂಚಾಲಕ ಪೃಥ್ವಿರೆಡ್ಡಿ ಮಾತನಾಡಿ, ಕೆಲವು ವಾರಗಳಲ್ಲಿ ಬಿಬಿಎಂಪಿ ಚುನಾವಣೆ ನಡೆಯಲಿದೆ. ಬೆಂಗಳೂರಿಗರು ಮೂರು ಪಕ್ಷಗಳ ಆಡಳಿತದಿಂದ ಬೇಸತ್ತಿದ್ದಾರೆ. ರಾಜ್ಯ ಬಿಜೆಪಿ ಸರ್ಕಾರ ಹಾಗೂ ಬಿಬಿಎಂಪಿ ಆಡಳಿತ ವೈಫಲ್ಯಗಳನ್ನು ಮನೆ ಮನೆಗೂ ತಲುಪಿಸಲು ಹಮ್ಮಿಕೊಂಡ ಈ ಅಭಿಯಾನವನ್ನು ಯಶಸ್ವಿಗೊಳಿಸುತ್ತೇವೆ ಎಂದರು. ರಾಜ್ಯ ಸಹ ಸಂಚಾಲಕ ವಿಜಯ್ ಶರ್ಮಾ, ಸಹ ಸಂಚಾಲಕಿ ಶಾಂತಲಾ ದಾಮ್ಲೆ, ಕಾರ್ಯದರ್ಶಿ ಸಂಚಿತ್ ಸಹಾನಿ, ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ ಸದಂ, ಪಕ್ಷದ ಬೆಂಗಳೂರು ನಗರಾಧ್ಯಕ್ಷ ಮೋಹನ್ ದಾಸರಿ, ರಾಜಾಜಿನಗರ ವಿಧಾನಸಭಾ ಕ್ಷೇತ್ರ ಅಧ್ಯಕ್ಷ ಗುರುಮೂರ್ತಿ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.



| Date | 07-12-2020 |
|---|---|
| Page No | 7 |

# ಹೊಸ ಕಾಯಿದೆ ಅನ್ವಯವೇ ಬಿಬಿಎಂಪಿ ಚುನಾವಣೆ

**ಮರು ವಿಂಗಡಣೆ ಕಾಯಿದೆ ವಿಧೇಯಕ ಇಂದು ಮಂಡನೆ**

**ಹೈಕೋರ್ಟ್ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವ ಸೂಚನೆ**

**ಬೆಂಗಳೂರು:** ಬಿಬಿಎಂಪಿ ಆಡಳಿತ ನಿರ್ವಹಣೆಗಾಗಿ ವಿಶೇಷ ಕಾಯಿದೆ ಜಾರಿಗೆ ಸರಕಾರ ನಿರ್ಧರಿಸಿದೆ. ಆ ಕಾಯಿದೆ ಅನ್ವಯವೇ ಚುನಾವಣೆ ನಡೆಸುವಂತೆ ಕಾನೂನು ತಜ್ಞರು ಸಲಹೆ ನೀಡಿದ್ದಾರೆ ಎಂದು ಕಂದಾಯ ಸಚಿವ ಆರ್. ಅಶೋಕ್ ಹೇಳಿದ್ದಾರೆ. ಈ ಮೂಲಕ ಬಿಬಿಎಂಪಿ ಚುನಾವಣೆ ನಡೆಸುವಂತೆ ಹೈಕೋರ್ಟ್ ನೀಡಿದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವ ಮುನ್ಸೂಚನೆಯನ್ನು ಅವರು ನೀಡಿದ್ದಾರೆ.



ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಜತೆಗೆ ಪ್ರತ್ಯೇಕ ಚರ್ಚೆ ನಡೆಸಿದ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿ,'' ಬಿಬಿಎಂಪಿ ವಿಧೇಯಕವನ್ನು ಸೋಮವಾರ ವಿಧಾನಸಭೆಯಲ್ಲಿ ಮಂಡಿಸುತ್ತೇವೆ. ವಿಧಾನಮಂಡಲದ ಉಭಯ ಸದನಗಳಲ್ಲಿ ಒಪ್ಪಿಗೆ ದೊರೆತರೆ ಚಿತ್ರಣ ಬದಲಾಗುತ್ತದೆ,'' ಎಂದು ಹೇಳಿದರು. ''ಬೆಂಗಳೂರಿನಲ್ಲಿ ಹೆಚ್ಚು ವಾರ್ಡ್ ರಚನೆಯಾಗಬೇಕಿದೆ. ಸದನ ಸಮಿತಿ ಇದೇ ಅಭಿಪ್ರಾಯ ನೀಡಿದೆ. ಹೀಗಾಗಿ 243 ವಾರ್ಡ್ ರಚನೆ ಮಾಡುವುದಕ್ಕೆ ನಿರ್ಧರಿಸಲಾಗಿದೆ. ಕಾನೂನು ತಜ್ಞರು ಸಲಹೆ ಆಧರಿಸಿ ರಚಿಸಿದ ಹೊಸ ಕಾಯಿದೆ ಪ್ರಕಾರವೇ ನಾವು ಮುಂದುವರಿಯುತ್ತೇವೆ,'' ಎಂದು ಹೇಳಿದರು.

VK ವಿಜಯ ಕರ್ನಾಟಕ

| Date | 07-12-2020 |
| --- | --- |
| Page No | 8 |

ಪ್ರದರ್ಶಕರಿಂದ ಅಭೂತಪೂರ್ವ ಪ್ರತಿಕ್ರಿಯೆ । ಫೆಬ್ರವರಿಯಲ್ಲಿ ನಡೆಯಲಿದೆ ಪ್ರದರ್ಶನ

## ಕೋವಿಡ್ ಆತಂಕದ ನಡುವೆಯೂ 488 ಕಂಪನಿಗಳಿಂದ ನೋಂದಣಿ

# ಏರೋ ಇಂಡಿಯಾ ಸ್ಥಳ ಶೇ.94ರಷ್ಟು ಬುಕ್!

■ **ಮಂಜುನಾಥ ನಾಗಲೀಕರ್** ಬೆಂಗಳೂರು

manjunath.naglikar@timesgroup.com

ಏಷ್ಯಾದ ಅತಿ ದೊಡ್ಡ ರಕ್ಷಣಾ ಉತ್ಪನ್ನಗಳ ಪ್ರದರ್ಶನವಾಗಿರುವ 'ಏರೋ ಇಂಡಿಯಾ-2021'ಕ್ಕೆ ಪ್ರದರ್ಶಕರಿಂದ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಪ್ರದರ್ಶನಕ್ಕೆ ಎರಡು ತಿಂಗಳು ಇರುವಾಗಲೇ ಶೇ.94ರಷ್ಟು ಪ್ರದರ್ಶನ ಸ್ಥಳ ಬುಕ್ಕಿಂಗ್ ಆಗಿದೆ !

ಇನ್ನು ಬಾಕಿ ಇರುವ ಶೇ.6ರಷ್ಟು ಸ್ಥಳದ ಪೈಕಿ ಶೇ.5ರಷ್ಟು ಈಗಾಗಲೇ ಅನೌಪಚಾರಿಕವಾಗಿ ಬುಕ್ಕಿಂಗ್ ಆಗಿದ್ದು, ನೈಜವಾಗಿ ಉಳಿದಿರುವುದು ಶೇ.1ರಷ್ಟು ಮಾತ್ರ. 2019ರ ಏರೋ ಇಂಡಿಯಾ ಪ್ರದರ್ಶನದ ವೇಳೆ ಒಟ್ಟು 28,386 ಚದರ ಮೀಟರ್‌ನಷ್ಟು ಸ್ಥಳ ಬುಕ್ಕಿಂಗ್ ಆಗಿತ್ತು. ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆ, ಭಾರತದ ಬೇಡಿಕೆಯನ್ನು ದೇಶೀಯ ಕಂಪನಿಗಳು ಪೂರೈಸಬೇಕು ಎಂಬ 'ಆತ್ಮನಿರ್ಭರ ಭಾರತ'ಕ್ಕೆ ಉತ್ತೇಜನ ನೀಡುವ ಉದ್ದೇಶ ಹೊಂದಲಾಗಿದೆ. ಆದಕ್ಕೆ ತಕ್ಕಂತೆ ನೋಂದಣಿ ಮಾಡಿರುವ 488 ಪ್ರದರ್ಶಕ ಕಂಪನಿಗಳ ಪೈಕಿ 430 ಭಾರತೀಯ ಕಂಪನಿಗಳೇ ಆಗಿವೆ. ಉಳಿದ 58 ವಿದೇಶಿ ಕಂಪನಿಗಳಾಗಿವೆ. ವಿಶೇಷವೆಂದರೆ, ಕಳೆದ ಬಾರಿ 404 ಪ್ರದರ್ಶಕ ಕಂಪನಿಗಳು ಭಾಗವಹಿಸಿದ್ದವು. ಈ ಬಾರಿ ಕೋವಿಡ್ ಆತಂಕದ ನಡುವೆಯೂ 488ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸುತ್ತಿವೆ.

ಏರೋ ಇಂಡಿಯಾದಲ್ಲಿ ಭಾಗವಹಿಸಲು 14 ರಾಷ್ಟ್ರಗಳ ಕಂಪನಿಗಳು ಮತ್ತು ಪ್ರತಿನಿಧಿಗಳು ಆಸಕ್ತಿ ತೋರಿಸಿ ನೋಂದಣಿ ಮಾಡಿಕೊಂಡಿವೆ. ಅದರಲ್ಲಿ ಫ್ರಾನ್ಸ್, ಅಮೆರಿಕ, ಯು.ಕೆ, ಇಸ್ರೇಲ್‌ನ ಕಂಪನಿಗಳು ಕೂಡ ಸೇರಿವೆ. ಪ್ರಮುಖವಾಗಿ ಯುದ್ಧ ವಿಮಾನ ಉತ್ಪಾದಕ ಕಂಪನಿ ರಫೇಲ್, ರಕ್ಷಣಾ ಮತ್ತು ನಾಗರಿಕ ವಿಮಾನಗಳ ಉತ್ಪಾದಕ ಕಂಪನಿ ಏರ್‌ಬಸ್‌ಗಳು ಮತ್ತು ರಕ್ಷಣಾ ವಿಭಾಗಕ್ಕೆ ಸಂಬಂಧಿಸಿದ ಕಂಪನಿಗಳು ಕೂಡ ಭಾಗವಹಿಸುತ್ತಿವೆ.

ಕಳೆದ ಆವೃತ್ತಿಯಲ್ಲಿ ಆಕರ್ಷಣೆಯ ಕೇಂದ್ರವಾಗಿದ್ದ ರಫೇಲ್ ಯುದ್ಧವಿಮಾನ, ಈ ಬಾರಿ ಭಾರತೀಯ ಸೇನೆಯ ಭಾಗವಾಗಿ ಪ್ರದರ್ಶನದಲ್ಲಿ ಭಾಗವಹಿಸುವುದು ಖಚಿತವಾಗಿದೆ.




### ಕೋವಿಡ್ ಸುರಕ್ಷತೆಗೆ ಅತಿ ಹೆಚ್ಚಿನ ಆದ್ಯತೆ

ಕೊರೊನಾ ವೈರಸ್ ಭೀತಿ ಇರುವುದರಿಂದ ವೈಮಾನಿಕ ಪ್ರದರ್ಶನದ ವೇಳೆ ಸುರಕ್ಷತೆಗೆ ಅತಿ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಕೋವಿಡ್ ಸುರಕ್ಷತಾ ಕ್ರಮವಾಗಿ ದೈಹಿಕ ಅಂತರ ಕಾಪಾಡಲು ಮಾರ್ಕಿಂಗ್, ಪ್ರವೇಶದ ವೇಳೆ ಪ್ರತಿಯೊಬ್ಬ ಸಂದರ್ಶಕರ ದೇಹದ ಉಷ್ಣತೆ ತಪಾಸಣೆ, ಪ್ರವೇಶ ದ್ವಾರದಲ್ಲಿ ಕಾಂಟ್ಯಾಕ್ಟ್ ಚೆಕ್ಕಿಂಗ್, ಪತ್ರಿಕಾಗೋಷ್ಠಿ ಮತ್ತು ಕಾರ್ಯಕ್ರಮಗಳಲ್ಲಿ ಸಾಕಷ್ಟು ಅಂತರ ಕಾಪಾಡಿಕೊಳ್ಳುವುದು, ಸ್ಯಾನಿಟೈಸರ್ ವ್ಯವಸ್ಥೆ ಪಾಲಿಸಲಾಗುತ್ತದೆ. ಏರೋ ಇಂಡಿಯಾ ವೈಮಾನಿಕ ಪ್ರದರ್ಶನದ ಆವರಣದಲ್ಲಿ ಕಡ್ಡಾಯವಾಗಿ ಐಸೋಲೇಷನ್ ಕೇಂದ್ರವನ್ನು ಕೂಡ ತೆರೆಯಲಾಗುತ್ತದೆ.

### ಕಾಂಟ್ಯಾಕ್ಟ್‌ಲೆಸ್ ಚೆಕ್ಕಿಂಗ್

ವಿವಿಐಪಿಗಳು ಆಗಮಿಸುವುದರ ಜತೆಗೆ, ಮಹತ್ವದ ರಕ್ಷಣಾ ಆಸ್ತಿಗಳಿರುವ ಕಾರಣ ಏರೋ ಇಂಡಿಯಾ ಪ್ರವೇಶ ದ್ವಾರ ಮತ್ತು ಎಲ್ಲ ಕಡೆಗಳಲ್ಲೂ ಪರೀಕ್ಷೆ ಮಾಡಿಯೇ ಬಿಡಲಾಗುತ್ತದೆ. ಈ ವೇಳೆ ಸಂದರ್ಶಕರ ಅಧಿಕೃತತೆ ಪರಿಶೀಲನೆಗೆ ಕಾಂಟ್ಯಾಕ್ಟ್‌ಲೆಸ್ ಚೆಕ್ಕಿಂಗ್ ಇರುತ್ತದೆ.

VK ವಿಜಯ ಕರ್ನಾಟಕ

| Date | 07-12-2020 |
| --- | --- |
| Page No | 8 |

ಮತದಾರರಿಗೆ ಮಾಹಿತಿ ಇಲ್ಲದೆ ನೂರಾರು ಹೆಸರು ಬೇರೆ ವಾರ್ಡ್‌ಗೆ ವರ್ಗಾವಣೆ | ಅಧಿಕಾರಿ, ಸಿಬ್ಬಂದಿ ನಕಲಿ ಸಹಿ ಬಳಕೆ

# ಗ್ರಾಪಂ ಗದ್ದುಗೆಗಾಗಿ ಗೋಲ್‌ಮಾಲ್

**ಬೆಂಗಳೂರು ದಕ್ಷಿಣ:** ಗ್ರಾಮ ಪಂಚಾಯಿತಿ ಚುನಾವಣೆ ಇನ್ನು ಕೆಲವೇ ದಿನ ಬಾಕಿ ಉಳಿದಿರುವಂತೆ ಸರಣಿ ಗೋಲ್‌ಮಾಲ್‌ಗಳು ಬೆಳಕಿಗೆ ಬರುತ್ತಿವೆ.

## ಹೆನ್ನಾಗರ ಗ್ರಾಪಂ ವ್ಯಾಪ್ತಿಯಲ್ಲಿ ಅಕ್ರಮ

## ದಾಖಲೆ ಪರಿಶೀಲಿಸಲು ಬಂದ ಅಧಿಕಾರಿಗಳಿಗೆ ತರಾಟೆ

ಹೆನ್ನಾಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಚನಾಯಕನಹಳ್ಳಿಯಲ್ಲಿ ಸುಮಾರು 230ಕ್ಕೂ ಹೆಚ್ಚು ಜನ ಮತದಾರರನ್ನು ಚುನಾವಣಾ ಸಿಬ್ಬಂದಿಯ ನಕಲಿ ಸಹಿ ಬಳಸಿ ಬೇರೊಂದು ವಾರ್ಡ್‌ಗೆ ವರ್ಗಾವಣೆ ಮಾಡಿರುವುದು ಬೆಳಕಿಗೆ ಬಂದಿದೆ. ನಕಲಿ ಮತದಾರರನ್ನು ಸೃಷ್ಟಿಸಿದ ಆರೋಪಗಳು ಕೇಳಿ ಬಂದಿವೆ.

**ಮತದಾರರಿಗೆ ಮಾಹಿತಿ ಇಲ್ಲ:** ಹೆನ್ನಾಗರದ ಕಾಚನಾಯಕನಹಳ್ಳಿಯಲ್ಲಿ 467 ಹಾಗೂ 468ನೇ ವಾರ್ಡಿನಿಂದ 200 ಕ್ಕೂ ಹೆಚ್ಚು ಮತದಾರರ ಹೆಸರನ್ನು 473ನೇ ವಾರ್ಡಿಗೆ ಅಕ್ರಮವಾಗಿ ವರ್ಗಾಯಿಸಲಾಗಿದೆ.

ಮತದಾರರು ಮನವಿ ಮಾಡದೆ ಹಲವರ ಹೆಸರನ್ನು ಬೇರೆ ವಾರ್ಡ್‌ಗೆ ವರ್ಗಾಯಿಸಲಾಗಿದೆ. ವಾರ್ಡ್ ಬದಲಾವಣೆ ಸಂಬಂಧ ಮತದಾರರೇ ಮನವಿ ಮಾಡಿರುವಂತೆ ದಾಖಲೆ ಸೃಷ್ಟಿಸಲಾಗಿದೆ. ದಾಖಲೆಗಳಲ್ಲಿ ಅಂಗನವಾಡಿ ಸಿಬ್ಬಂದಿ, ಬಿಎಲ್‌ಒ ಸಹಿಯನ್ನು ನಕಲು ಮಾಡಲಾಗಿದೆ. ಮತದಾರರ ಪಟ್ಟಿಯಲ್ಲಿ ಗೋಲ್‌ಮಾಲ್ ಆಗಿರುವ ವಿಷಯ ತಿಳಿದು ಸ್ಥಳೀಯರು ಅಂಗನವಾಡಿ ಕೇಂದ್ರದ ಎದುರು ಭಾನುವಾರ ಜಮಾಯಿಸಿದ್ದರು. ಅಂಗನವಾಡಿ ಕಾರ್ಯಕರ್ತೆ ತಾನು ಸಹಿ ಮಾಡಿಲ್ಲ ಎಂದು ಈ ವೇಳೆ ದೃಢಪಡಿಸಿದರು.

ಮಾಹಿತಿ ತಿಳಿದು ಸ್ಥಳಕ್ಕೆ ಆಗಮಿಸಿದ ಬಮೂಲ್ ಮಾಜಿ ಅಧ್ಯಕ್ಷ ಆರ್.ಕೆ. ರಮೇಶ್ ''ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಗೆಲುವು ಸಾಧಿಸಲು ಬಿಜೆಪಿಯವರು ಅಡ್ಡದಾರಿ ಹಿಡಿದಿದ್ದಾರೆ,'' ಎಂದು ಆರೋಪಿಸಿದರು.



ಹೆನ್ನಾಗರ ಅಂಗನವಾಡಿ ಕಾರ್ಯಕರ್ತೆಯಿಂದ ಸಾರ್ವಜನಿಕರು ಮಾಹಿತಿ ಪಡೆದರು.

### ನಕಲಿ ಮತದಾರರು ಸೃಷ್ಟಿ ಆರೋಪ

ಹೆನ್ನಾಗರ ಗ್ರಾಪಂ ವ್ಯಾಪ್ತಿಯ ಹಿನ್ನಕ್ಕಿ ಗ್ರಾಮದಲ್ಲಿ ಹೊರರಾಜ್ಯದ ಹಾಗೂ ಪಂಚಾಯಿತಿಗೆ ಸೇರದ ಜನರನ್ನು ನಕಲಿ ಮತದಾರರನ್ನಾಗಿ ಸೃಷ್ಟಿಸಲು ಯತ್ನಿಸಲಾಗಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ತಮಿಳುನಾಡಿನಿಂದ ಹಾಗೂ ವಾರ್ಡಿಗೆ ಸಂಬಂಧ ಪಡೆದವರ ನೂರಕ್ಕೂ ಹೆಚ್ಚು ಜನರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಲು ತಂತ್ರ ರೂಪಿಸಲಾಗಿದೆ ಎಂದು ಅಧಿಕಾರಿಗಳ ಮುಂದೆ ಗ್ರಾಮಸ್ಥರು ದೂರಿದರು. ದಾಖಲೆಗಳನ್ನು ಪರಿಶೀಲನೆಗೆಂದು ಬಂದ ಅಧಿಕಾರಿಗಳನ್ನು ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡರು.

## ಚುನಾವಣೆ ರದ್ದು

**ಬೆಂಗಳೂರು:** ಬಿಬಿಎಂಪಿ ಗಡಿಗೆ ಹೊಂದಿಕೊಂಡಿರುವ ಐದು ಗ್ರಾಮ ಪಂಚಾಯಿತಿಗಳನ್ನು ನಗರ ಸ್ಥಳೀಯ ಸಂಸ್ಥೆಯಾಗಿ ಮೇಲ್ದರ್ಜೆಗೇರಿಸಿದ ಹಿನ್ನೆಲೆಯಲ್ಲಿ ಹೊಸದಾಗಿ ನಡೆಸಬೇಕಿದ್ದ ಚುನಾವಣೆಯನ್ನು ರದ್ದು ಮಾಡಲಾಗಿದೆ. ಈ ಸಂಬಂಧ ರಾಜ್ಯ ಚುನಾವಣಾ ಆಯೋಗ ಅಧಿಕೃತ ಆದೇಶ ಹೊರಡಿಸಿದೆ.

### ಗ್ರಾಪಂಗಳನ್ನು ಮೇಲ್ದರ್ಜೆಗೆ ಏರಿಸಿರುವುದರಿಂದ ಕ್ರಮ

ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಈ ಗ್ರಾಪಂಗಳನ್ನು ಮೇಲ್ದರ್ಜೆಗೇರಿಸಿ ಹೊಸದಾಗಿ ಪುರಸಭೆಯನ್ನಾಗಿ ಮಾಡ ಲಾಗಿದೆ. ಸೋಮಶೆಟ್ಟಿಹಳ್ಳಿ ಹಾಗೂ ಚಿಕ್ಕಬಾಣಾವರ ಗ್ರಾಪಂ ಪ್ರದೇಶಗಳನ್ನು ಸೇರಿಸಿ ಚಿಕ್ಕ ಬಾಣಾವರ ಪುರಸಭೆಯಾಗಿ ರಚಿಸಲಾಗಿದೆ. ಯಲಹಂಕ ತಾಲೂಕಿಗೆ ಸೇರಿದ ಹುಣಸಮಾರನಹಳ್ಳಿ, ಸೊಣ್ಣಪ್ಪನಹಳ್ಳಿ ಗ್ರಾಪಂ ಪ್ರದೇಶವನ್ನು ಸೇರಿಸಿ ಹುಣಸಮಾರನಹಳ್ಳಿ ಪುರಸಭೆಯಾಗಿ ಮೇಲ್ದರ್ಜೆಗೇರಿಸಲಾಗಿದೆ. ಬೆಂಗಳೂರು ದಕ್ಷಿಣ ತಾಲೂಕಿಗೆ ಸೇರಿದ ಕಗ್ಗಲೀಪುರ ಗ್ರಾಪಂ ವ್ಯಾಪ್ತಿಯನ್ನು ಬಿಬಿಎಂಪಿಗೆ ಸೇರ್ಪಡೆಗೊಳಿಸಲಾಗಿದೆ. ಈ 5 ಗ್ರಾಪಂಗಳಿಗೆ ಘೋಷಿಸಿದ್ದ ಚುನಾವಣೆಯನ್ನು ಆಯೋಗವು ರದ್ದುಪಡಿಸಿದೆ.

## ಜನಪ್ರತಿನಿಧಿಗಳಿಂದಲೇ ಚುನಾವಣೆ ಬಹಿಷ್ಕಾರ !

**ಪೀಣ್ಯದಾಸರಹಳ್ಳಿ:** ಆಲೂರು ಗ್ರಾಮ ಪಂಚಾಯಿತಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸುವ ಬೇಡಿಕೆ ಮುಂದಿರಿಸಿ ಈ ಬಾರಿ ಪಂಚಾಯಿತಿ ಚುನಾವಣೆಯಲ್ಲಿ ಯಾರೊಬ್ಬರೂ ಸ್ಪರ್ಧಿಸದಿರಲು ನಾನಾ ಪಕ್ಷಗಳ ಮುಖಂಡರು ತೀರ್ಮಾನ ಕೈಗೊಂಡಿದ್ದಾರೆ.

ಆಲೂರು ಗ್ರಾಮ ಪಂಚಾಯತಿ ಕಚೇರಿ ಆವರಣದಲ್ಲಿ ಭಾನುವಾರ ಸಭೆ ಸೇರಿದ್ದ ಮಾಜಿ ಸದಸ್ಯರು ಸೇರಿದಂತೆ ಮುಖಂಡರು ಒಮ್ಮತದಿಂದ ನಿರ್ಣಯ ಕೈಗೊಂಡರು. ಪುರಸಭೆಯಾಗಿ ಮೇಲ್ದರ್ಜೆಗೆ ಏರಿಸುವವರೆಗೆ ಚುನಾವಣೆ ನಡೆಸದಿರಲು ಪಟ್ಟು ಹಿಡಿಯಲು ತೀರ್ಮಾನಿಸಲಾಯಿತು.

ಈ ಬಗ್ಗೆ ಪ್ರತಿಕ್ರಿಯಿಸಿದ ಜಿಪಂ ಸದಸ್ಯ ರವಿಕುಮಾರ್, ''ಚುನಾವಣೆಯಲ್ಲಿ ಸ್ಪರ್ಧಿಸದಿರಲು ನಾನಾ ಪಕ್ಷಗಳ ಮುಖಂಡರು ಸಮ್ಮತಿಸಿದ್ದಾರೆ,'' ಎಂದರು.

''ಆಲೂರು ಗ್ರಾಮಪಂಚಾಯತಿ ಸುತ್ತಮುತ್ತ ರೆವೆನ್ಯೂ ಸೈಟ್‌ಗಳಲ್ಲಿ, ಬಡಾವಣೆಗಳಲ್ಲಿ ಸಾವಿರಾರು ಜನರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಪಂಚಾಯಿತಿಯಿಂದ ಯಾವುದೇ ದಾಖಲಾತಿ ಸಿಗುತ್ತಿಲ್ಲ. ಪುರಸಭೆಯಾಗಿ ಮೇಲ್ದರ್ಜೆಗೇರಿದಲ್ಲಿ ದಾಖಲೆ ಸಿಗಲಿದೆ,'' ಎಂದು ಬಿಜೆಪಿ ಮುಖಂಡ ಅರುಣ್‌ಕುಮಾರ್ ಹೇಳಿದರು.




### ಚುನಾವಣೆಯಲ್ಲಿ ಸ್ಪರ್ಧಿಸದಿರಲು ಸರ್ವ ಪಕ್ಷ ಮುಖಂಡರ ತೀರ್ಮಾನ

### ಪುರಸಭೆಯಾಗಿ ಮೇಲ್ದರ್ಜೆಗೇರಿಸಲು ಆಲೂರು ಗ್ರಾಪಂ ಸದಸ್ಯರ ಪಟ್ಟು

VK ವಿಜಯ ಕರ್ನಾಟಕ

| Date | 07-12-2020 |
| --- | --- |
| Page No | 8 |

# ನಗರದಲ್ಲಿ ಮುಂದುವರಿದ ಚಳಿ, ಮಳೆ

■ **ವಿಕ ಸುದ್ದಿಲೋಕ** ಬೆಂಗಳೂರು

ನಗರದಲ್ಲಿ ಭಾನುವಾರವೂ ಚಳಿ ಜತೆ ಮಳೆ ಮುಂದುವರಿದಿದೆ. ಇದೇ ಸ್ಥಿತಿ ಇನ್ನೂ ಕೆಲ ದಿನ ಇರ ಲಿದೆ. ಮಳೆ ನಿಂತರೂ, ಮೋಡ ಕವಿದ ವಾತಾವರಣ ಇರುತ್ತದೆ ಎಂದು ಹವಾ ಮಾನ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ವಾಡಿಕೆಯಂತೆ ಡಿಸೆಂಬರ್ ತಿಂಗಳಲ್ಲಿ ಚಳಿ ಹೆಚ್ಚಿರುತ್ತದೆ. ಈ ಬಾರಿ ಸತತ ಮಳೆಯಿಂದ ತೇವಾಂಶದ ಮಟ್ಟ ಅಧಿಕಗೊಂಡಿದೆ. ಇದರಿಂದ ದಿನದ ಹೆಚ್ಚು ಸಮಯ ಚಳಿಯ ಅನುಭವವಾಗುತ್ತಿದೆ. ಆದರೆ, ಬಂಗಾಳ ಕೊಲ್ಲಿಯಲ್ಲಿ ಮತ್ತೆ ಮತ್ತೆ ವಾಯುಭಾರ ಕುಸಿತ ಉಂಟಾಗಿ ಬಿಟ್ಟು ಬಿಟ್ಟು ಮಳೆಯಾಗುತ್ತಿದೆ. ಇದು ಚಳಿಯ ತೀವ್ರತೆ ತಗ್ಗಿಸಿದೆ. ಕಳೆದ ವಾರ ಒಮ್ಮೆ ಮಾತ್ರ 16.7 ಡಿಗ್ರಿ ಸೆ. ಇತ್ತಾದರೂ, ಭಾನುವಾರ 18 ಡಿಗ್ರಿ ಮಾತ್ರ ಕನಿಷ್ಠ ಉಷ್ಣಾಂಶ ದಾಖಲಾಗಿದೆ.


ನೃಪತುಂಗ ರಸ್ತೆ

ವಿಜಯವಾಣಿ
ಕನ್ನಡಿಗರ ಧ್ವನಿ

| Date | 07-12-2020 |
| --- | --- |
| Page No | 2 |

### ಕಸದ ತಾಣ ಸ್ವಚ್ಛತೆಗೆ ನೆರವು | ಕಸದ ಫೋಟೋ ತೆಗೆದು ಆ್ಯಪ್‌ಗೆ ಅಪ್‌ಲೋಡ್

# ಕಸದ ರಾಶಿ ಮುಕ್ತಿಗೆ ಬ್ಲ್ಯಾಕ್‌ಸ್ಪಾಟ್ ಆ್ಯಪ್

■ ಸತೀಶ್ ಕಂದಗಲ್‌ಪುರ ಬೆಂಗಳೂರು

ರಾಜಧಾನಿಯಲ್ಲಿ ತ್ಯಾಜ್ಯ ಸಮಸ್ಯೆ ನಿರ್ವಹಣೆ ಹಾಗೂ ಬ್ಲ್ಯಾಕ್‌ಸ್ಪಾಟ್‌ಗಳ ನಿವಾರಣಗೆ ಹೊಸ ಪರಿಹಾರೋಪಾಯವಾಗಿ ಬಿಬಿಎಂಪಿ 'ಬ್ಲ್ಯಾಕ್‌ಸ್ಪಾಟ್ ಆ್ಯಪ್' ಅಭಿವೃದ್ಧಿಪಡಿಸಿ ಬಳಸುತ್ತಿದೆ.

ಸಿಲಿಕಾನ್ ಸಿಟಿ ಎಷ್ಟೇ ಅಂತಾರಾಷ್ಟ್ರೀಯವಾಗಿ ಬೆಳೆದರೂ, ಜನರು ಎಲ್ಲೆಂದರಲ್ಲಿ ಕಸ ಎಸೆಯುವುದು ಕಂಡುಬರುತ್ತಿದೆ. ಹಲವೆಡೆ ಅಳವಡಿಸಿರುವ ಡಸ್ಟ್‌ಬಿನ್‌ಗಳಿಗೆ ಸರಿಯಾಗಿ ತ್ಯಾಜ್ಯ ಸುರಿಯದೆ, ಆ ಭಾಗದ ಸುತ್ತಮುತ್ತ ಕಸ ಎಸೆದು ಕಸದ ರಾಶಿ ನಿರ್ಮಾಣ ಮಾಡುತ್ತಿದ್ದಾರೆ. ಅಂಥ ಬ್ಲ್ಯಾಕ್‌ಸ್ಪಾಟ್‌ಗಳನ್ನು ಗುರುತಿಸಲು, ಸ್ವಚ್ಛತೆ ಮಾಡಿ ಅಲ್ಲಿ ಮತ್ತೊಮ್ಮೆ ಕಸ ಹಾಕದಂತೆ ನಿರ್ವಹಣೆ ಮಾಡಲು ಈ ಆ್ಯಪ್' ನೆರವಾಗುತ್ತಿದೆ.

ಈ ಆ್ಯಪ್ ಬಿಬಿಎಂಪಿಯ ಆಂತರಿಕ ವಿಭಾಗಕ್ಕೆ ಸೀಮಿತವಾಗಿದ್ದು, ಪಾಲಿಕೆ ಸಿಬ್ಬಂದಿ ಮಾತ್ರ ಬಳಸಬಹುದು. ನಗರದೆಲ್ಲೆಡೆ ಎಲ್ಲೆಂದರಲ್ಲಿ ಬೀಳುವ ಕಸದ ರಾಶಿಯನ್ನು ವಾರ್ಡ್‌ವಾರು ನಿಯೋಜನೆಗೊಂಡ ಮಾರ್ಷಲ್‌ಗಳು ಫೋಟೋ

ವಿಜಯವಾಣಿ ಚಿತ್ರ



ತೆಗೆದು ಆ್ಯಪ್‌ಗೆ ಅಪ್‌ಲೋಡ್ ಮಾಡುತ್ತಾರೆ. ಎಲ್ಲ 198 ವಾರ್ಡ್‌ಗಳಲ್ಲಿ ಎಷ್ಟು ಬ್ಲ್ಯಾಕ್‌ಸ್ಪಾಟ್‌ಗಳಿವೆ ಎಂಬ ಮಾಹಿತಿ ಆಧರಿಸಿ ಆಯಾ ವಾರ್ಡ್‌ಗಳ ಸಹಾಯಕ ಆರೋಗ್ಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪೌರಕಾರ್ಮಿಕರ ನೆರವಿನೊಂದಿಗೆ ಕಸ ಸ್ವಚ್ಛಗೊಳಿಸಬೇಕು. ಬಳಿಕ, ಅಲ್ಲಿ ರಂಗೋಲಿ ಬಿಡಿಸಿ ಕಸ ಹಾಕದಂತೆ ಜಾಗೃತಿ ಫಲಕ ಅಳವಡಿಸಬೇಕು.

**1,500 ಬ್ಲ್ಯಾಕ್‌ಸ್ಪಾಟ್:** ಬಿಬಿಎಂಪಿ ವ್ಯಾಪ್ತಿಯ ಕೇಂದ್ರ ಭಾಗದ ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯಗಳಲ್ಲಿ ಬ್ಲ್ಯಾಕ್‌ಸ್ಪಾಟ್‌ಗಳ ಸಂಖ್ಯೆ ಕಡಿಮೆಯಿದೆ. ಉಳಿದಂತೆ 2008ರಿಂದ ಇತ್ತೀಚೆಗೆ ಪಾಲಿಕೆ ವ್ಯಾಪ್ತಿಗೆ ಸೇರ್ಪಡೆಗೊಂಡ 110 ಹಳ್ಳಿಗಳನ್ನು ಒಳಗೊಂಡ ಮಹದೇವಪುರ, ಬೊಮ್ಮನಹಳ್ಳಿ, ಯಲಹಂಕ, ದಾಸರಹಳ್ಳಿ ಹಾಗೂ ಆರ್.ಆರ್.ನಗರ ವಲಯಗಳಲ್ಲಿ ಹೆಚ್ಚು ಬ್ಲ್ಯಾಕ್‌ಸ್ಪಾಟ್‌ಗಳಿವೆ. ಕೆಲವು ಸರ್ಕಾರಿ ಸಂಸ್ಥೆಗಳ ಕಾಂಪೌಂಡ್ ಹಾಗೂ ರಸ್ತೆಯುದ್ದಕ್ಕೂ ಕಸದ ರಾಶಿ ಕಾಣಿಸುತ್ತದೆ. ಈ ಎಲ್ಲ ತ್ಯಾಜ್ಯದ ಸಮರ್ಪಕ ನಿರ್ವಹಣೆಗೆ ಬ್ಲ್ಯಾಕ್‌ಸ್ಪಾಟ್ ಆ್ಯಪ್ ನೆರವಾಗಲಿದೆ.

## ಮಾರ್ಷಲ್‌ಗಳಿಂದ ಬಳಕೆ

**ಪಾಲಿಕೆಯಲ್ಲಿ ಕಳೆದ ವಾರ ಬ್ಲ್ಯಾಕ್‌ಸ್ಪಾಟ್ ಆ್ಯಪ್ ಅಭಿವೃದ್ಧಿ ಮಾಡಿ ಆಂತರಿಕ ಬಳಕೆಯನ್ನು ಜಾರಿಗೊಳಿಸಲಾಗಿದೆ. ಎಲ್ಲಿ, ಎಷ್ಟು ಬ್ಲ್ಯಾಕ್‌ಸ್ಪಾಟ್ ನಿರ್ಮಾಣವಾಗುತ್ತಿವೆ ಎಂಬ ಬಗ್ಗೆ ಸರ್ಕಾರ ಅಥವಾ ನ್ಯಾಯಾಲಯಕ್ಕೆ ಮಾಹಿತಿ ನೀಡಲು ಈ ಆ್ಯಪ್‌ನಿಂದ ಅಧಿಕಾರಿಗಳಿಗೆ ತಕ್ಷಣದ ಮಾಹಿತಿ ಲಭ್ಯವಾಗಲಿದೆ. ಮುಂದಿನ ವಾರದ ಹೊತ್ತಿಗೆ ನಗರದಲ್ಲಿ ಎಷ್ಟು ಬ್ಲ್ಯಾಕ್‌ಸ್ಪಾಟ್‌ಗಳಿವೆ ಎಂಬ ಮಾಹಿತಿ ಸಿಗುತ್ತದೆ ಎಂದು ಬಿಬಿಎಂಪಿ ವಿಶೇಷ ಆಯುಕ್ತ ಡಿ. ರಂದೀಪ್ ತಿಳಿಸಿದ್ದಾರೆ.**

ವಿಜಯವಾಣಿ
ಕನ್ನಡಿಗರ ಧ್ವನಿ

| Date | 07-12-2020 |
|---|---|
| Page No | 3 |

### ಮಾಸಾಂತ್ಯದಲ್ಲಿ ಅನುಷ್ಠಾನಕ್ಕೆ ಬಿಬಿಎಂಪಿ ಚಿಂತನೆ | ವಾರಾಂತ್ಯಗಳಲ್ಲಿ ವಾಹನಗಳಿಗೆ ನೋ ಎಂಟ್ರಿ

# ಗಾಂಧಿಬಜಾರ್‌ನಲ್ಲೂ ವಾಹನ ಸಂಚಾರ ಬಂದ್

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ವಾಹನಗಳಿಂದ ಗಿಜಿಗುಡುವ ಗಾಂಧಿ ಬಜಾರ್ ಇನ್ನು ಮುಂದೆ ವಾರಾಂತ್ಯದ ದಿನಗಳಂದು ಜನರ ಓಡಾಟಕ್ಕೆ ಮಾತ್ರ ಮೀಸಲಾಗಲಿದೆ. ಆ ಮೂಲಕ ಗಾಂಧಿ ಬಜಾರ್ ವಾತಾವರಣವನ್ನು ಸ್ವಚ್ಛಗೊಳಿಸಲು ನಿರ್ಧರಿಸಲಾಗಿದೆ.

» **ಬಿಬಿಎಂಪಿ, ಸಂಚಾರ ಪೊಲೀಸರ ನೆರವು ಪಡೆಯಲಿರುವ ಡಲ್ಟ್**

ವಾಯುಮಾಲಿನ್ಯ ತಡೆಗೆ ಸಂಬಂಧಿಸಿದಂತೆ ರೂಪಿಸಲಾಗಿರುವ ಸ್ವಚ್ಛ ವಾಯುರಸ್ತೆ (ಕ್ಲೀನ್ ಏರ್ ಸ್ಟ್ರೀಟ್) ಪರಿಕಲ್ಪನೆ ಯಶ ಕಂಡಿದೆ. ಚರ್ಚ್ ಸ್ಟ್ರೀಟ್‌ನಲ್ಲಿ ಬರುವ ಫೆಬ್ರವರಿ ಅಂತ್ಯದವರೆಗೆ ವಾರಾಂತ್ಯ ಹಾಗೂ ಸರ್ಕಾರಿ ರಜಾ ದಿನಗಳಂದು ವಾಹನ ಸಂಚಾರ ನಿಷೇಧಿಸಲಾಗಿದೆ. ಅದರಿಂದಾಗಿ ಜನರು ಚರ್ಚ್‌ಸ್ಟ್ರೀಟ್ ಅನ್ನು ಪಿಕ್‌ನಿಕ್ ಸ್ಪಾಟ್ ಮಾಡಿಕೊಂಡಿದ್ದಾರೆ.

ಅದೇ ಮಾದರಿಯನ್ನು ಗಾಂಧಿ ಬಜಾರ್‌ನಲ್ಲೂ ಜಾರಿಗೆ ತರಲು ನಗರ ಭೂ ಸಾರಿಗೆ ನಿರ್ದೇಶನಾಲಯ (ಡಲ್ಟ್) ಮುಂದಾಗಿದ್ದು, ಬಿಬಿಎಂಪಿ ಮತ್ತು ಸಂಚಾರ ಪೊಲೀಸರ ನೆರವು ಪಡೆಯಲಿದೆ.

ಗಾಂಧಿಬಜಾರ್‌ನಲ್ಲಿ ಪ್ರತಿದಿನ ಸಾವಿರಾರು ವಾಹನಗಳು ಸಂಚರಿಸುತ್ತವೆ. ಅವುಗಳಿಂದ ವಾಯುಮಾಲಿನ್ಯ ಹೆಚ್ಚುತ್ತಿದೆ. ಅದಕ್ಕಾಗಿ ರಾಮಕೃಷ್ಣ ಆಶ್ರಮದಿಂದ ಬಸವನಗುಡಿ ಪೊಲೀಸ್ ಠಾಣೆಗೆ ಸಂಪರ್ಕಿಸುವ ರಸ್ತೆವರೆಗೆ ಕ್ಲೀನ್ ಏರ್ ಸ್ಟ್ರೀಟ್ ಅನುಷ್ಠಾನಗೊಳಿಸುವ ಬಗ್ಗೆ ಚರ್ಚಿಸಲಾಗಿದೆ. ಅಂದು ವಾಹನ ಪ್ರವೇಶವನ್ನು ಸಂಪೂರ್ಣ ನಿಷೇಧಿಸಲಾಗುತ್ತದೆ. ಸದ್ಯ ಗಾಂಧಿಬಜಾರ್‌ನಲ್ಲಿ ಕ್ಲೀನ್ ಏರ್‌ಸ್ಟ್ರೀಟ್ ವ್ಯವಸ್ಥೆಯನ್ನು ಡಿಸೆಂಬರ್ ಅಂತ್ಯ ಅಥವಾ ಜನವರಿ ಮೊದಲ ವಾರಾಂತ್ಯದಿಂದ ಅನುಷ್ಠಾನಗೊಳಿಸುವ ಕುರಿತು ಚರ್ಚಿಸಲಾಗುತ್ತಿದೆ. ಡಲ್ಟ್, ಬಿಬಿಎಂಪಿ ಮತ್ತು ಸಂಚಾರ ಪೊಲೀಸರು ಈ ಕುರಿತು ಅಂತಿಮ ನಿರ್ಧಾರ ತೆಗೆದುಕೊಳ್ಳಲಿದ್ದಾರೆ

## ಜಾತ್ರೆ ಬೀದಿ ಆಗಿರುವ ಚರ್ಚ್‌ಸ್ಟ್ರೀಟ್

**ಚ**ರ್ಚ್‌ಸ್ಟ್ರೀಟ್‌ನಲ್ಲಿ ಅನುಷ್ಠಾನಗೊಂಡಿರುವ ಕ್ಲೀನ್ ಏರ್ ಸ್ಟ್ರೀಟ್ ಉಪಕ್ರಮ ಯಶಸ್ವಿಯಾಗಿದೆ. ವಾರಾಂತ್ಯದ ದಿನಗಳಂದು ವಾಯು, ಶಬ್ದಮಾಲಿನ್ಯ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದೆ. ವಾಹನ ಸವಾರರಷ್ಟೆ ಅಲ್ಲದೆ, ಚರ್ಚ್‌ಸ್ಟ್ರೀಟ್‌ನಲ್ಲಿನ ವ್ಯಾಪಾರಿಗಳು ಈ ಉಪಕ್ರಮಕ್ಕೆ ಬೆಂಬಲ ಸೂಚಿಸಿದ್ದಾರೆ. ವಾರಾಂತ್ಯದ ದಿನಗಳಂದು ವಾಹನಗಳು ಸಂಚರಿಸದ ಕಾರಣ ಸ್ಥಳೀಯ ನಿವಾಸಿಗಳು ಸೇರಿ ಹಲವರು ಜಾತ್ರೆ ರೀತಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಸ್ಥಳದಲ್ಲೇ ಸಂಗೀತ ಕಾರ್ಯಕ್ರಮ, ಪಾದಚಾರಿ ಮಾರ್ಗದಲ್ಲಿ ಪುಸ್ತಕ ಸೇರಿ ಇನ್ನಿತರ ವ್ಯಾಪಾರಗಳು ನಡೆಯುತ್ತಿವೆ.

ವಿಜಯವಾಣಿ
ದಿಗ್ವಿಜಯ 24X7 NEWS
ಇವರ ಸಹಯೋಗದೊಂದಿಗೆ
kannada matrimony
ಕನ್ನಡಿಗರ ನಂ.1 ವಧು ವರರ ಅನ್ವೇಷಣಾ ಸೇವೆಗಾಗಿ
ಉಚಿತ ನೋಂದಣಿಗಾಗಿ ಕರೆ ಮಾಡಿ: 70928 77888
ಲಕ್ಷಾನು ಲಕ್ಷ ಕನ್ನಡ ವಧು-ವರರು

ವಿಜಯವಾಣಿ
ಕನ್ನಡಿಗರ ಧ್ವನಿ

| Date | 07-12-2020 |
| --- | --- |
| Page No | 3 |

## ಸುದ್ದಿ ಕಾರ್ನರ್

# ತ್ಯಾಜ್ಯ ಸಂಗ್ರಹಿಸಿದ ಬಿಬಿಎಂಪಿ ಆಯುಕ್ತ

ವಿಜಯವಾಣಿ ಚಿತ್ರ




ವಸಂತನಗರದ ರಸ್ತೆಯಲ್ಲಿ ಭಾನುವಾರ ತ್ಯಾಜ್ಯ ಸಂಗ್ರಹಿಸಿದ ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್.

**ಬೆಂಗಳೂರು:** ವಸಂತನಗರದಲ್ಲಿ ಭಾನುವಾರ ಬೆಳಗ್ಗೆ ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ರಸ್ತೆಯಲ್ಲಿ ಬಿದ್ದಿದ ತ್ಯಾಜ್ಯವನ್ನು ಸಂಗ್ರಹಿಸುವ ಮೂಲಕ ಸ್ವಚ್ಛತೆ ಕಾಪಾಡುವ ಬಗ್ಗೆ ಸ್ಥಳೀಯರಲ್ಲಿ ಜಾಗೃತಿ ಮೂಡಿಸಿದರು. ವಸಂತನಗರದ ನೋಡಲ್ ಅಧಿಕಾರಿಯೂ ಆಗಿರುವ ಮಂಜುನಾಥ ಪ್ರಸಾದ್ ವಾಯುವಿಹಾರಕ್ಕೆ ಹೋಗುವ ವೇಳೆ ರಸ್ತೆಯಲ್ಲಿ ಬಿದ್ದಿದ್ದ ಕಸವನ್ನು ಚೀಲದೊಳಗೆ ತುಂಬುವ ಮೂಲಕ ಸ್ವಚ್ಛತಾ ಕಾರ್ಯ ಮಾಡಿದರು. ನಮ್ಮ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಂಡರೆ ಆರೋಗ್ಯ ಉತ್ತಮವಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಸಾಂಕ್ರಾಮಿಕ ರೋಗಗಳು ಹೆಚ್ಚಾಗಿದ್ದು, ತಡೆಗಟ್ಟಲು ಸಾರ್ವಜನಿಕರು ಸ್ವಚ್ಛತೆ ಕಡೆಗೆ ಗಮನ ಹರಿಸಬೇಕು ಎಂದು ಅವರು ಸಲಹೆ ನೀಡಿದರು.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 07-12-2020 |
| --- | --- |
| Page No | 3 |

# ದುಬಾರಿ ದಂಡಕ್ಕೆ ವಿರೋಧ

## ಕೋವಿಡ್ ನಿಯಮ ಉಲ್ಲಂಘನೆ ಆದೇಶ ವಾಪಸ್‌ಗೆ ಮಾಲೀಕರ ಪಟ್ಟು

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯಲ್ಲಿ ಹೋಟೆಲ್, ರೆಸ್ಟೋರೆಂಟ್, ಅಂಗಡಿ ಮುಂಗಟ್ಟು, ಶಾಪಿಂಗ್ ಮಾಲ್ ಹಾಗೂ ಬೀದಿ ಬದಿ ವ್ಯಾಪಾರ, ಸಭೆ-ಸಮಾರಂಭಗಳಲ್ಲಿ ಜನರು ಕೋವಿಡ್ ನಿಯಮ ಉಲ್ಲಂಘಿಸಿದಲ್ಲಿ ಮಾಲೀಕರು ಅಥವಾ ಆಯೋಜಕರಿಗೆ 5 ಸಾವಿರ ರೂ.ಗಳಿಂದ 1 ಲಕ್ಷ ರೂ.ವರೆಗೆ ದಂಡ ವಿಧಿಸುವ ಪಾಲಿಕೆ ಆದೇಶಕ್ಕೆ ತೀವ್ರ ವಿರೋಧ ವ್ಯಕ್ತವಾಗಿದೆ.

» **ಸೋಂಕು ತಡೆಗಟ್ಟಲು ಕಠಿಣ ಕ್ರಮ ಅಗತ್ಯವೆಂದ ಆಯುಕ್ತರು**

ನಗರದಲ್ಲಿ ಕರೊನಾ ಸೋಂಕು ಹರಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ವಿವಿಧ ಕ್ರಮಗಳನ್ನು ಪಾಲಿಕೆ ತೆಗೆದುಕೊಳ್ಳುತ್ತಿದೆ. ಚಳಿಗಾಲದಲ್ಲಿ ಸೋಂಕಿನ ಜೀವಿತಾವಧಿ ಹೆಚ್ಚಿರಲಿದ್ದು, ಒಬ್ಬರಿಂದೊಬ್ಬರಿಗೆ ಸೋಂಕು ಹರಡುವ ಸಾಧ್ಯತೆ ಹೆಚ್ಚಾಗಿದೆ. ಇದೇ ವೇಳೆ ಮದುವೆ, ಜಾತ್ರೆ, ಶುಭ ಸಮಾರಂಭಗಳು ಹೆಚ್ಚಾಗಿ ನಡೆಯಲಿದ್ದು, ಜನರು ನಿರ್ಲಕ್ಷ್ಯ ತೋರುವ ಮೂಲಕ ಸೋಂಕು ಹರಡಲು ಕಾರಣವಾಗಲಿದ್ದಾರೆ ಎಂಬ ಆತಂಕ ಎದುರಾಗಿದೆ. ಹೀಗಾಗಿ ಹೋಟೆಲ್, ರೆಸ್ಟೋರೆಂಟ್, ಶಾಪಿಂಗ್ ಮಾಲ್‌ಗಳು, ಕಲ್ಯಾಣ ಮಂಟಪ ಬೀದಿಬದಿ ವ್ಯಾಪಾರದ ಸ್ಥಳದಲ್ಲಿ ಜನರು ಮಾಸ್ಕ್ ಧರಿಸದ ಅಥವಾ ವ್ಯಕ್ತಿಗತ ಅಂತರ ಕಾಪಾಡದ ವೇಳೆ ಮಾಲೀಕರಿಗೆ ದುಬಾರಿ ದಂಡ ವಿಧಿಸಲು ಪಾಲಿಕೆ ಅಧಿಕಾರಿಗಳು ಮುಂದಾಗಿದ್ದಾರೆ.

ಆದರೆ ಪಾಲಿಕೆ ಆದೇಶಕ್ಕೆ ಬೀದಿ ಬದಿ ವ್ಯಾಪಾರಿಗಳು, ಹೋಟೆಲ್ ಉದ್ಯಮಿಗಳು, ಕಲ್ಯಾಣ ಮಂಟಪಗಳು ಮತ್ತು ಶಾಪಿಂಗ್ ಮಾಲ್‌ಗಳ ಮಾಲೀಕರಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಜನರೇ ಸ್ವಯಂ ಆಗಿ ಕೋವಿಡ್ ನಿಯಮ ಪಾಲಿಸಬೇಕು. ಎಲ್ಲವನ್ನು ಮಾಲೀಕರು ತಿಳಿಸಲಾಗುವುದಿಲ್ಲ. ಹೀಗಾಗಿ, ದುಬಾರಿ ದಂಡದ ಆದೇಶವನ್ನು ಬಿಬಿಎಂಪಿ ವಾಪಸ್ ಪಡೆದು ಪರಾಮರ್ಶಿಸಬೇಕು ಎಂದು ವಿವಿಧ ಉದ್ಯಮಗಳ ಮಾಲೀಕರು ಆಗ್ರಹಿಸಿದ್ದಾರೆ.

ಬೀದಿಬದಿ ವ್ಯಾಪಾರಿಗಳು ಪ್ರತಿನಿತ್ಯ 200 ರೂ.ನಿಂದ 1 ಸಾವಿರ ರೂ. ದುಡಿಮೆ ಮಾಡುತ್ತಾರೆ. ಆದರೆ, ಬಿಬಿಎಂಪಿ ಕೋವಿಡ್ ನಿಯಮ ಉಲ್ಲಂಘನೆಗೆ 5 ಸಾವಿರ ರೂ. ದಂಡ ವಿಧಿಸುವ ಕ್ರಮ ಅಸಮಂಜಸವಾಗಿದೆ. ಕೆಲವೊಮ್ಮೆ ಗ್ರಾಹಕರು ಮಾಸ್ಕ್ ಧರಿಸದೇ ಬಂದಲ್ಲಿ ಅವರನ್ನು ವಾಪಸ್ ಕಳುಹಿಸಲು ಸಾಧ್ಯವಿಲ್ಲ. ಹೀಗಾಗಿ, ಮಾಸ್ಕ್ ಧರಿಸದವರಿಗೆ ಮಾರ್ಷಲ್‌ಗಳು ನೇರವಾಗಿ ದಂಡ ವಿಧಿಸಬೇಕು. ವ್ಯಾಪಾರಿಗಳಿಗೆ ತೊಂದರೆ ಉಂಟು ಮಾಡುವ ದಂಡ ವಿಧಿಸುವ ನಿರ್ಧಾರ ಕೈಬಿಡಬೇಕು ಎಂದು ರಾಜ್ಯ ಬೀದಿಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ರಂಗಸ್ವಾಮಿ ಒತ್ತಾಯಿಸಿದ್ದಾರೆ.


ಸಾಂದರ್ಭಿಕ ಚಿತ್ರ

### ಆಯೋಜಕರೇ ಜಾಗೃತಿ ಮೂಡಿಸಲಿ

ಚಳಿಗಾಲದಲ್ಲಿ ಕರೊನಾ ಸೋಂಕು ಹೆಚ್ಚಾಗುವ ಮತ್ತು ಜನವರಿಯಿಂದ ಕೋವಿಡ್ 2ನೇ ಅಲೆ ಶುರುವಾಗುವ ಸಾಧ್ಯತೆಗಳ ಬಗ್ಗೆ ತಜ್ಞರು ಎಚ್ಚರಿಕೆ ನೀಡಿದ್ದಾರೆ. ಹೀಗಾಗಿ, ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿದೆ. ಡಿಸೆಂಬರ್‌ನಿಂದ ಫೆಬ್ರವರಿವರೆಗೆ ಮದುವೆ, ಜಾತ್ರೆ, ಶುಭ ಸಮಾರಂಭ ಹೆಚ್ಚಾಗಿದ್ದು, ಬಹುತೇಕರು ಮಾಸ್ಕ್ ಧರಿಸದೆ, ವ್ಯಕ್ತಿಗತ ಅಂತರ ಪಾಲಿಸದೆ ನಿರ್ಲಕ್ಷ್ಯ ವಹಿಸಿದ್ದಾರೆ. ಎಲ್ಲೆಡೆ ಮಾರ್ಷಲ್‌ಗಳನ್ನು ನೇಮಕ ಮಾಡಲು ಸಾಧ್ಯವಿಲ್ಲದಿರುವ ಕಾರಣ ಮಾಲೀಕರು ಮತ್ತು ಆಯೋಜಕರೇ ಜಾಗೃತಿ ಮೂಡಿಸಬೇಕು. ನಿಯಮ ಪಾಲಿಸಿದಲ್ಲಿ ದಂಡದ ಬಗ್ಗೆ ವಿರೋಧ ವ್ಯಕ್ತಪಡಿಸುವ ಅಗತ್ಯವಿಲ್ಲ ಎಂದು ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಸಮರ್ಥನೆ ಮಾಡಿಕೊಂಡಿದ್ದಾರೆ.

**ಹೋ**ಟೆಲ್ ಪ್ರವೇಶಕ್ಕೆ ಮುನ್ನ ಮಾಸ್ಕ್ ಇದ್ದವರಿಗೆ ಅವಕಾಶ ನೀಡುತ್ತೇವೆ. ಆದರೆ, ಊಟ, ತಿಂಡಿ ಸೇವಿಸುವಾಗ ಮಾಸ್ಕ್ ಧರಿಸುವಂತೆ, ಒಂದೇ ಕುಟುಂಬದವರು ಒಟ್ಟಿಗೆ ಕುಳಿತಾಗ ವ್ಯಕ್ತಿಗತ ಅಂತರ ಕಾಯ್ದುಕೊಳ್ಳುವಂತೆ ಹೇಳುವುದು ಅಸಾಧ್ಯ.

| **ಚಂದ್ರಶೇಖರ್ ಹೆಬ್ಬಾರ್** ರಾಜ್ಯ ಹೋಟೆಲ್‌ಗಳ ಮಾಲೀಕರ ಸಂಘದ ಅಧ್ಯಕ್ಷ

ವಿಜಯವಾಣಿ
ಕನ್ನಡಿಗರ ಧ್ವನಿ

| Date | 07-12-2020 |
| --- | --- |
| Page No | 5 |



ಡಾ.ಬಿ.ಆರ್. ಅಂಬೇಡ್ಕರ್ 64ನೇ ವರ್ಷದ ಪರಿನಿರ್ವಾಣ ದಿನಾಚರಣೆ ಅಂಗವಾಗಿ ಪಾಲಿಕೆ ಆಡಳಿತಾಧಿಕಾರಿ ಗೌರವ್‌ಗುಪ್ತ ಮತ್ತು ಆಯುಕ್ತ ಮಂಜುನಾಥಪ್ರಸಾದ್ ಭಾನುವಾರ ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 07-12-2020 |
| --- | --- |
| Page No | 7 |

# ಪ್ರತ್ಯೇಕ ಕಾಯ್ದೆ ಬಳಿಕವೇ ಬಿಬಿಎಂಪಿ ಚುನಾವಣೆ

**ಬೆಂಗಳೂರು:** ಬಿಜೆಪಿ ಚುನಾವಣೆ ಪ್ರಣಾಳಿಕೆಯಲ್ಲಿ ನೀಡಿದ ಭರವಸೆ ಪ್ರಕಾರ ಬೆಂಗಳೂರು ಮಹಾನಗರಕ್ಕೆ ಪ್ರತ್ಯೇಕ ಕಾಯ್ದೆ ಜಾರಿಗೆ ಬದ್ಧವಾಗಿದ್ದು, ನಂತರವೇ ಬಿಬಿಎಂಪಿಗೆ ಚುನಾವಣೆ ನಡೆಯಲಿದೆ ಎಂದು ಕಂದಾಯ ಸಚಿವ ಆರ್. ಅಶೋಕ್ ಸ್ಪಷ್ಟಪಡಿಸಿದ್ದಾರೆ.

**» ಸಚಿವ ಅಶೋಕ್ ಸ್ಪಷ್ಟ ನುಡಿ**

ಅಧಿವೇಶನದಲ್ಲಿ ಮಸೂದೆ ಮಂಡಿಸಲಾಗುವುದು. ಕಾನೂನುತಜ್ಞರು ಹೇಳಿದ ಪ್ರಕಾರ ಪ್ರತ್ಯೇಕ ಕಾಯ್ದೆ ಅಂಗೀಕಾರವಾದರೆ ಹೈಕೋರ್ಟ್ ನೀಡಿದ ಆದೇಶದ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಪ್ರತ್ಯೇಕ ಕಾಯ್ದೆಗೆ ಒಪ್ಪಿಗೆ ಪಡೆದಾದ ಬಳಿಕ ಕೋರ್ಟ್‌ಗೆ ಮನವರಿಕೆ ಮಾಡಿಕೊಡುವ ವಿಷಯದಲ್ಲಿ ಹೆಜ್ಜೆಯಿಡುತ್ತೇವೆ. ವಾರ್ಡ್‌ಗಳ ವೈಜ್ಞಾನಿಕ ಮರುವಿಂಗಡಣೆ, ಜನಸಂಖ್ಯೆಗೆ ಅನುಗುಣವಾಗಿ ವಾರ್ಡ್‌ಗಳ ಸಂಖ್ಯೆ 198 ರಿಂದ 243ಕ್ಕೆ ಏರಿಕೆಯಾಗಬೇಕಿದೆ. ವಾರ್ಡ್‌ವಾರು ಜನಸಂಖ್ಯೆಯನ್ನು ಸಮಾನ ಪ್ರಮಾಣದಲ್ಲಿ ಹಂಚಬೇಕಿದೆ. ಇದೆಲ್ಲವನ್ನು ಸರಿಪಡಿಸಿದ ಬಳಿಕ ಚುನಾವಣೆ ನಡೆಸಬೇಕು ಎನ್ನುವುದು ಸರ್ಕಾರದ ಇಚ್ಛೆಯಾಗಿದೆ ಎಂದು ಅಶೋಕ್ ತಿಳಿಸಿದ್ದಾರೆ.

**ಬಿಬಿಎಂಪಿ ಚುನಾವಣೆಗೆ ಪೂರ್ವಭಾವಿ ಸಭೆಗಳನ್ನು ಮಾಡುತ್ತಿದ್ದೇವೆ. ಕಾನೂನಿಗಿಂತ ಯಾರೂ ದೊಡ್ಡವರಲ್ಲ. ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್ ಹೋಗಬೇಕೋ ಚುನಾವಣೆ ನಡೆಸಬೇಕೋ ಎಂಬ ಬಗ್ಗೆ ಒಟ್ಟಾಗಿ ಚರ್ಚಿಸಿ ನಿರ್ಧರಿಸಬೇಕಾಗುತ್ತದೆ.**

| ವಿ. ಸೋಮಣ್ಣ ವಸತಿ ಸಚಿವ

ವಿಶ್ವವಾಣಿ

| Date | 07-12-2020 |
| --- | --- |
| Page No | 1 |

# ಲಕ್ಷದವರೆಗೆ ದಂಡ; ಜನ ಗರಂ

**ಬೆಂಗಳೂರು:** ಕರೋನಾ ಎರಡನೇ ಅಲೆಯ ಭೀತಿಯಿಂದ ಬಿಬಿಎಂಪಿ ತೆಗೆದುಕೊಂಡಿರುವ ನಿರ್ಣಯಕ್ಕೆ ಇದೀಗ ಹೋಟೆಲ್ ಉದ್ದಿಮೆದಾರರು ಗರಂ ಆಗಿದ್ದಾರೆ. ಮಾಸ್ಕ್ ಧರಿಸದೇ, ಹೋಟೆಲ್‌ಗೆ ಬರುವ ಗ್ರಾಹಕರನ್ನು ಒಳಗೆ ಬಿಟ್ಟರೆ ಒಂದು ಲಕ್ಷದವರೆಗೆ ದಂಡ ವಿಧಿಸುವ ಎಚ್ಚರಿಕೆಯನ್ನು ಬಿಬಿಎಂಪಿ ನೀಡಿದೆ. ಬಿಬಿಎಂಪಿಯ ಈ ನಿರ್ಧಾರವನ್ನು ಹೋಟೆಲ್ ಉದ್ದಿಮೆದಾರರು ವಿರೋಧಿಸಿದ್ದು, ಈ ರೀತಿಯ ನಿರ್ಣಯದಿಂದ ಹೋಟೆಲ್ ಮುಚ್ಚಿಕೊಂಡು ಹೋಗುವ ಸ್ಥಿತಿ ಎದುರಾದರೂ ಅಚ್ಚರಿಯಿಲ್ಲ ಎಂದಿದ್ದಾರೆ. ಶನಿವಾರ ಹೊರಡಿಸಿರುವ ಸುತ್ತೋಲೆಯ ಪ್ರಕಾರ, ಹೋಟೆಲ್, ಮಳಿಗೆಗಳ ಒಳಪ್ರವೇಶಿಸುವ ಗ್ರಾಹಕರು ಮಾಸ್ಕ್ ಧಾರಣೆ ಹಾಗೂ ಸ್ಯಾನಿಟೈಸರ್‌ನಲ್ಲಿ ಕೈ ತೊಳೆದುಕೊಳ್ಳಬೇಕು. ಈ ನಿಯಮಗಳನ್ನು ಉಲ್ಲಂಘಿಸಿದರೆ ಹೋಟೆಲ್ ಹಾಗೂ ಉದ್ದಿಮೆಗಳಿಗೆ 5 ಸಾವಿರ ರು.ದಿಂದ ಲಕ್ಷ ರುವರೆಗೆ ದಂಡ ವಿಧಿಸಲು ನಿರ್ಧರಿಸಿದೆ. ಸಮಾರಂಭದಲ್ಲಿ, ಹೋಟೆಲ್ ಅಥವಾ ಕಲ್ಯಾಣ ಮಂಟಪಗಳ ಒಟ್ಟು ಆಸನ ಸಾಮರ್ಥ್ಯದ ಶೇ 50ರಷ್ಟು ಮಂದಿ ಅಥವಾ ಗರಿಷ್ಠ 200 ಮಂದಿ ಭಾಗವಹಿಸುವುದಕ್ಕೆ ಮಾತ್ರ ಷರತ್ತುಬದ್ಧ ಅನುಮತಿ ನೀಡಲಾಗುತ್ತಿದೆ.

ವಿವರಪುಟ → 3

ವಿಶ್ವವಾಣಿ

| Date | 07-12-2020 |
|---|---|
| Page No | 2 |


ಮೂರು ವಾರದಿಂದ ಅಭಿಯಾನ ಆರಂಭ । ಸೆಲೆಬ್ರೆಟಿಗಳಿಗೆ ನೇಲ್ಸ್ ಫ್ರೀ ಟ್ರೀಸ್ ಸವಾಲು । ವಾರಾಂತ್ಯದಲ್ಲಿ ಪರಿಸರದ ಕೆಲಸ

# ಪೋಸ್ಟರ್ ತೆಗೆಯಲು ನೇಲ್ ಫ್ರೀ ಟ್ರೀ ಅಭಿಯಾನ

**ಅಪರ್ಣಾ ಎ ಎಸ್** ಬೆಂಗಳೂರು

ಡಿಆರ್‌ಡಿಒದ ಸಹಾಯಕ ವಿಜ್ಞಾನಿ ವಿನೋದ್ ಕರ್ತವ್ಯ ಅವರು ತನ್ನ ಸ್ನೇಹಿತರೊಂದಿಗೆ ಬೆಂಗಳೂರಿನಲ್ಲಿ ಮರಗಳಿಗೆ ಅಂಟಿಸಲಾದ ಭಿತ್ತಿಫಲಕ ಹಾಗೂ ಮೊಳೆಗಳನ್ನು ತೆಗೆದುಹಾಕುವ ಅಭಿಯಾನ ಕೈಗೊಂಡಿದ್ದಾರೆ.

ಮರಗಳ ರಕ್ಷಣೆಗಾಗಿ ಪಣ ತೊಟ್ಟು, ಪ್ರತಿ ಭಾನುವಾರ ನಗರದ ಒಂದೊಂದು ಪ್ರದೇಶದಲ್ಲಿ ಮರಕ್ಕೆ ಹೊಡೆಯಲಾದ ಮೊಳೆ, ಪಿನ್ ತೆಗೆಯುವ ಕಾಯಕದಲ್ಲಿ ತೊಡಗಿದ್ದು, ಮರಗಳಿಗೆ ಮೊಳೆಗಳನ್ನು ಹೊಡೆಯುವುದನ್ನು ತಡೆಯಲು ಹಾಗೂ ಸೇವೆಯಲ್ಲಿ ಪ್ರತಿಯೊಬ್ಬ ನಾಗರಿಕನೂ ಭಾಗವಹಿಸಲು ಈ ಕಾರ್ಯದೆಡೆಗೆ ಸೆಳೆಯಲು 'ನೇಲ್ಸ್ ಫ್ರೀ ಟ್ರೀಸ್' ಅಭಿಯಾನ ಪ್ರಾರಂಭಿಸಿದ್ದಾರೆ. ಮೊದಲಿಗೆ ವಿನೋದ್ ಒಬ್ಬರೇ ಇಂತಹ ಸೇವೆಯಲ್ಲಿ ತೊಡಗಿದ್ದರು. ಬಳಿಕ ಇವರ 5 ಸ್ನೇಹಿತರೂ ಈ ಕಾರ್ಯಕ್ಕೆ ಕೈ ಜೋಡಿಸಿದ್ದಾರೆ.

ಕೆಲಸ ನಿಮಿತ್ತ ಮರವೊಂದರ ಬಳಿ ನಿಂತಿದ್ದಾಗ ತಲೆಗೆ ತಾಗಿದ ಮೊಳೆಯೊಂದರಿಂದ ಈ ಯೋಚನೆ ಪ್ರಾರಂಭವಾಗಿದೆ. ನ.15, 2020ಕ್ಕೆ ಈ ಕಾರ್ಯ ಪ್ರಾರಂಭಿಸಿದ್ದು, ಸ್ನೇಹಿತರೊಂದಿಗೆ ಸೇರಿ ಪ್ರಸ್ತುತ 60ರಿಂದ 80 ಮರಗಳಿಗೆ ಹೊಡೆದಿರುವ ಮೊಳೆಗಳು, ಪಿನ್ ತೆಗೆಯುವ ಕ್ರಮ ನಡೆಸಿದ್ದಾರೆ. ಇನ್ನು ಪ್ರಾರಂಭದ ಹಂತದಲ್ಲಿರುವ ಈ ಯೋಜನೆ ಕುರಿತಂತೆ ಸಾಮಾಜಿಕ ಜಾಲತಾಣಗಳಲ್ಲಿ ಹೊಸ ಅಲೆ ಹುಟ್ಟುಹಾಕಿದೆ.

ಮರ ಸಂರಕ್ಷಣಾ ಕಾಯ್ದೆ ಮತ್ತು ಬೆಂಗಳೂರು ಮುನ್ಸಿಪಲ್ ಕಾಯ್ದೆಯ ಪ್ರಕಾರ ಮರಗಳಿಗೆ ಬಿತ್ತಿ ಫಲಕಗಳನ್ನು ಅಂಟಿಸುವುದು ಕಾನೂನು ಬಾಹಿರವಾಗಿದೆ. ಆದರೂ ಇಲ್ಲಿರುವ ಪ್ರತಿಯೊಂದು ಮರಗಳ ಮೇಲೆ ಈ ರೀತಿ ಪೋಸ್ಟರ್, ಮೊಳೆಗಳನ್ನು ಹೊಡೆಯುವುದು ಸಾಮಾನ್ಯವಾಗಿದೆ.

ಪ್ರತಿ ಭಾನುವಾರ ವಿನೋದ್, ಪ್ರೇಮ್, ಭರತ್, ಪ್ರಜ್ವಲ್ ಹಾಗೂ ನವೀನ್ ನಗರದ ಒಂದೊಂದು ಪ್ರದೇಶಕ್ಕೆ ತೆರಳಿ ಅಲ್ಲಿರುವ ಮರಗಳಿಗೆ ಹೊಡೆಯಲಾದ ಸಾವಿರಕ್ಕೂ ಅಧಿಕ ಮೊಳೆ ಹಾಗೂ ಪಿನ್‌ಗಳನ್ನು ತೆಗೆಯುತ್ತಿದ್ದು, ಸಂಪಂಗಿ ರಾಮನಗರ ರಸ್ತೆ ಬದಿಯ 40 ಮರಗಳು ಈಗಾಗಲೇ ನೈಲ್ ಫ್ರೀ ಟ್ರೀಗಳಾಗಿವೆ. ಕಾರ್ಪೋರೇಷನ್ ಸರ್ಕಲ್, ಕಂಠೀರವ ಕ್ರೀಡಾಂಗಣ, ವಿಠಲ್ ಮಲ್ಯ ರಸ್ತೆ, ಮೆಜೆಸ್ಟಿಕ್ ಸುತ್ತಮುತ್ತಲಿನ 30ರಿಂದ 40 ಮರಗಳಲ್ಲೂ ಪಿನ್ ಹೊಡೆದಿದ್ದರು. ಈ ಎಲ್ಲಾ ಮರಗಳಲ್ಲಿದ್ದ ಪಿನ್‌ಗಳನ್ನು ತೆಗೆಯಲಾಗಿದೆ.



ಸ್ನೇಹಿತರೊಂದಿಗೆ ಮರದಿಂದ ಮೊಳೆ ತೆಗೆಯುತ್ತಿರುವ ವಿನೋದ್

## ಸೆಲೆಬ್ರೆಟಿಗಳಿಗೆ ನೇಲ್ಸ್ ಫ್ರೀ ಟ್ರೀಸ್ ಸವಾಲು

**ವಿನೋದ್ ಅವರು ಮೊಳೆ ತೆಗೆಯುವ ಕಾರ್ಯದ ಫೋಟೋಗಳನ್ನು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಬಿಬಿಎಂಪಿ ಆಯುಕ್ತರು ಹಾಗೂ ಚಲನಚಿತ್ರ ನಟರಿಗೆ ಟ್ಯಾಗ್ ಮಾಡಿದ್ದು ಅವರೂ ಈ ಅಭಿಯಾನದಲ್ಲಿ ಭಾಗವಹಿಸುವಂತೆ ಕರೆ ನೀಡಿದ್ದಾರೆ. ಅಲ್ಲದೇ ಇತರ ಸವಾಲುಗಳಿರುವಂತೆ ನಗರದಲ್ಲಿ ಮರಗಳಿಗೆ ಹೊಡೆದಿರುವ ಮೊಳೆಗಳನ್ನು ಕೀಳುವ ಫೋಟೋಗಳೊಂದಿಗೆ ಟ್ಯಾಗ್ ಮಾಡುವಂತೆ ಕೋರಿದ್ದು ಈ ಮೂಲಕ ನಗರದ ಮರಗಳನ್ನು ಉಳಿಸುವ ಉಪಯುಕ್ತ ಚಾಲೆಂಜ್ ಒಂದನ್ನು ಪ್ರಾರಂಭಿಸಿದ್ದಾರೆ.**

**ಬೆಂಗಳೂರಿನ ಹೆಚ್ಚಿನ ಎಲ್ಲಾ ಪ್ರದೇಶದ ಮರಗಳ ಮೇಲೂ ಸಾವಿರಕ್ಕೂ ಅಧಿಕ ಪಿನ್, ಮೊಳೆಗಳನ್ನು ಹೊಡೆದಿದ್ದು ನೋಡಿ ಬೇಸರವಾಯಿತು. ನಾವು ಅನೇಕ ಮರಗಳಿಂದ ಮೊಳೆಗಳನ್ನು ತೆಗೆದಿದ್ದು, ಇನ್ನೂ ಅನೇಕ ಕಡೆಗಳಲ್ಲಿ ಮೊಳೆಗಳನ್ನು ತೆಗೆಯಲು ಪ್ರೋತ್ಸಾಹಿಸುವಂತೆ ಸಾಮಾಜಿಕ ಮಾಧ್ಯಮದಲ್ಲಿ 'ನೈಲ್ಸ್ ಫ್ರೀ ಟ್ರೀಸ್' ಸವಾಲನ್ನು ಆರಂಭಿಸಿದ್ದೇವೆ.**

**- ವಿನೋದ್ ಕರ್ತವ್ಯ,**
**ಸಹಾಯಕ ವಿಜ್ಞಾನಿ, ಡಿಆರ್‌ಡಿಒ**

## 3 ವಾರಗಳಿಂದ ಕ್ಯಾಂಪೇನ್ ಆರಂಭ

**3 ವಾರಗಳಿಂದ ಅಭಿಯಾನ ಪ್ರಾರಂಭವಾಗಿದ್ದು, 60ರಿಂದ 90 ಮರಗಳಿಂದ ಪಿನ್‌ಗಳನ್ನು ತೆಗೆದಿದ್ದು, 2 ಸಾವಿರಕ್ಕೂ ಅಧಿಕ ಪಿನ್ ಮೊಳೆಗಳನ್ನು ತೆಗೆಯಲಾಗಿದೆ. ಇದಕ್ಕೆ ವಿನೋದ್ ಅವರ ಸ್ನೇಹಿತರೂ ಕೈ ಜೋಡಿಸಿದ್ದಾರೆ. ಸಂಪಂಗಿರಾಮ ನಗರ, ವಿಠಲ್ ಮಲ್ಯ ರೋಡ್, ರಾಜಾರಾಮ್‌ಮೋಹನ್ ರಾಯ್ ರಸ್ತೆ, ಕುಮಾರಪಾರ್ಕ್ ರೈಲ್ವೆ ಬ್ರಿಡ್ಜ್, ಕಾರ್ಪೋರೇಷನ್‌ನಿಂದ ಮೈಸೂರ್ ಬ್ಯಾಂಕ್‌ವರೆಗೂ ನೈಲ್ ಫ್ರೀ ಟ್ರೀಸ್‌ಗಳನ್ನಾಗಿ ಮಾಡಿದ್ದು, ಇನ್ನು ಮುಂದೆ ಮಲ್ಲೇಶ್ವರ, ಕೆಜಿ ರೋಡ್, ಶೇಷಾದ್ರಿಪುರ, ನ್ಯೂ ತಿಪ್ಪಸಂದ್ರದಲ್ಲೂ ಇರುವ ಮರಗಳನ್ನು ಮೊಳೆಮುಕ್ತ ಮರಗಳನ್ನಾಗಿ ಮಾಡುವ ಉದ್ದೇಶವಿದೆ.**

| Date | 07-12-2020 |
| --- | --- |
| Page No | 3 |

## ಮಾಸ್ಕ್ ಇಲ್ಲದೆ ಒಳಬಿಡುವ ಹೋಟೆಲ್, ಮಳಿಗೆ ಮಾಲೀಕರಿಗೆ 1 ಲಕ್ಷದವರೆಗೆ ದಂಡ

## ಸಾರ್ವಜನಿಕ ಸ್ಥಳಗಳಲ್ಲಿ ಕೋವಿಡ್ ಹರಡದಂತೆ ತಡೆಯಲು ಈ ಕ್ರಮ: ಬಿಬಿಎಂಪಿ

# ಲಕ್ಷ ದಂಡ ಎಚ್ಚರಿಕೆ: ಭಾರಿ ವಿವಾದ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಕರೋನಾ 2ನೇ ಅಲೆಯ ಭೀತಿಯಿಂದ ಬಿಬಿಎಂಪಿ ಕೋವಿಡ್ ನಿಯಮಗಳನ್ನು ಮತ್ತಷ್ಟು ಕಠಿಣಗೊಳಿಸುವ ನೆಪದಲ್ಲಿ, ಲಕ್ಷ ರುಪಾಯಿ ದಂಡ ಎನ್ನುವ ನಿಯಮ ಜಾರಿಗೊಳಿಸಲು ಹೊರಟಿರುವ ಕ್ರಮಕ್ಕೆ ಸಾರ್ವಜನಿಕ ವಲಯದಲ್ಲಿ ಭಾರಿ ಟೀಕೆ ವ್ಯಕ್ತವಾಗಿದೆ.

ಮಾಸ್ಕ್ ಧರಿಸದೆ, ಹೋಟೆಲ್‌ಗೆ ಬರುವ ಗ್ರಾಹಕರನ್ನು ಒಳಗೆ ಬಿಟ್ಟರೆ ಐದು ಸಾವಿರದಿಂದ ಒಂದು ಲಕ್ಷದವರೆಗೆ ದಂಡ ವಿಧಿಸುವ ಎಚ್ಚರಿಕೆಯನ್ನು ಬಿಬಿಎಂಪಿ ನೀಡಿದೆ. ಬಿಬಿಎಂಪಿಯ ಈ ನಿರ್ಧಾರವನ್ನು ಹೋಟೆಲ್ ಉದ್ದಿಮೆದಾರರು ವಿರೋಧಿಸಿದ್ದು, ಈ ರೀತಿಯ ನಿರ್ಣಯದಿಂದ ಹೋಟೆಲ್ ಮುಚ್ಚಿಕೊಂಡು ಹೋಗುವ ಸ್ಥಿತಿ ಎದುರಾದರೂ ಅಚ್ಚರಿಯಿಲ್ಲ ಎಂದಿದ್ದಾರೆ.

**5 ಸಾವಿರ ರು.ನಿಂದ ಲಕ್ಷವರೆಗೆ:** ಶನಿವಾರ ಹೊರಡಿಸಿರುವ ಸುತ್ತೋಲೆಯ ಪ್ರಕಾರ, ಹೋಟೆಲ್, ಮಳಿಗೆಗಳ ಒಳಪ್ರವೇಶಿಸುವ ಗ್ರಾಹಕರು ಮಾಸ್ಕ್ ಧಾರಣೆ ಹಾಗೂ ಸ್ಯಾನಿಟೈಸರ್‌ನಲ್ಲಿ ಕೈ ತೊಳೆದುಕೊಳ್ಳಬೇಕು. ಈ ನಿಯಮಗಳನ್ನು ಉಲ್ಲಂಘಿಸಿದರೆ ಹೋಟೆಲ್ ಹಾಗೂ ಉದ್ದಿಮೆಗಳಿಗೆ 5 ಸಾವಿರ ರು.ನಿಂದ ಲಕ್ಷವರೆಗೆ ದಂಡ ವಿಧಿಸಲು ನಿರ್ಧರಿಸಿದೆ.

ಚಳಿಗಾಲದಲ್ಲಿ ಕೋವಿಡ್ ಹರಡುವ ಸಾಧ್ಯತೆ ಹೆಚ್ಚು ಎಂದು ತಜ್ಞರು ತಿಳಿಸಿದ್ದರಿಂದ ಈ ತೀರ್ಮಾನ ಕೈಗೊಳ್ಳಲಾಗಿದ್ದು, ಹೆಚ್ಚು ಜನ ಸೇರುವ ಹೋಟೆಲ್, ಮಾಲ್, ಚಿತ್ರಮಂದಿರ, ಸಭಾಂಗಣಗಳು, ಕಲ್ಯಾಣಮಂಟಪಗಳಲ್ಲಿ ಕೋವಿಡ್ ನಿಯಂತ್ರಣ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತಾರದೇ ಹೋದರೆ, ಸೋಂಕನ್ನು ವ್ಯಾಪಕವಾಗಿ ಹಬ್ಬುವ ಅಪಾಯವಿದೆ. ಆದ್ದರಿಂದ ಈ ಕಠಿಣ ನಿಯಮ ಜಾರಿಗೊಳಿಸಲಾಗಿದೆ ಎಂದು ಬಿಬಿಎಂಪಿ ಹೇಳಿದೆ.

**ಕೋವಿಡ್ ನಿಯಮ ಪಾಲಿಕೆಯಾಗುತ್ತಿಲ್ಲ:** ಮಾಲ್‌ಗಳ ಪ್ರವೇಶದ್ವಾರದಲ್ಲಿ ಮಾತ್ರ ಸ್ಯಾನಿಟೈಸರ್ ನೀಡುವ ಹಾಗೂ ಗ್ರಾಹಕರ ಉಷ್ಣಾಂಶ ತಪಾಸಣೆ ನಡೆಸಲಾಗುತ್ತಿದೆ. ಗ್ರಾಹಕರು ಮಾಲ್ ಒಳಪ್ರವೇಶಿಸಿದ ಮೇಲೆ ಮಾಸ್ಕ್, ಸ್ಯಾನಿಟೈಸರ್ ಬಳಸುವಿಕೆ, ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಕಡೆ ಗಮನಹರಿಸುತ್ತಿಲ್ಲ, ಹೋಟೆಲ್, ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲೂ ಗ್ರಾಹಕರು ಸಾಮಾಜಿಕ ಅಂತರ ಕಾಯ್ದುಕೊಳ್ಳಲು ವ್ಯವಸ್ಥೆ ಕಲ್ಪಿಸುವುದಿಲ್ಲ ಎನ್ನುವ ಆರೋಪವನ್ನು ಬಿಬಿಎಂಪಿ ಅಧಿಕಾರಿಗಳು ಮಾಡಿದ್ದಾರೆ.



### ದಂಡ ಪ್ರಮಾಣ

- ಸ್ವಸಹಾಯ ಪದ್ಧತಿಯ ಹೋಟೆಲ್, ದರ್ಶಿನಿ, ಆಹಾರ ಮಳಿಗೆ, ಸಣ್ಣ ಅಂಗಡಿ, ಮಳಿಗೆ, ಬೀದಿಬದಿಯಲ್ಲಿ ತ್ವರಿತ ಆಹಾರ ಪೂರೈಸುವ ಮಳಿಗೆಗಳಲ್ಲಿ ನಿಯಮ ಉಲ್ಲಂಘನೆ ಮಾಡಿದರೆ 5 ಸಾವಿರ ರು. ದಂಡ
- ಎಸಿ ಇಲ್ಲದ ರೆಸ್ಟೋರೆಂಟ್, ಪಾರ್ಟಿಹಾಲ್, ಅಂಗಡಿ/ಮಳಿಗೆ, ಡಿಪಾರ್ಟ್‌ಮೆಂಟಲ್ ಸ್ಟೋರ್, ಖಾಸಗಿ ಬಸ್‌ನಿಲ್ದಾಣ, ಇತರ ಸಾರ್ವಜನಿಕ ಸ್ಥಳಗಳಲ್ಲಿ 25 ಸಾವಿರ ರು.
- ಎಸಿ ರೆಸ್ಟೋರೆಂಟ್, ಪಾರ್ಟಿ ಹಾಲ್, ಅಂಗಡಿ/ಮಳಿಗೆ, ಡಿಪಾರ್ಟ್‌ಮೆಂಟಲ್ ಸ್ಟೋರ್, ಬ್ರ್ಯಾಂಡೆಡ್ ಮಳಿಗೆ, ಚಿತ್ರಮಂದಿರ, ಮಲ್ಟಿಪ್ಲೆಕ್ಸ್, ಶಾಪಿಂಗ್ ಮಾಲ್ ಮತ್ತು ಇತರ ಸಾರ್ವಜನಿಕ ಸ್ಥಳಗಳಿಗೆ 50 ಸಾವಿರ ರು. ದಂಡ
- ತ್ರೀ ಸ್ಟಾರ್‌ಗಿಂತ ಮೇಲ್ಪಟ್ಟ ಹೋಟೆಲ್, 500 ಅಥವಾ ಅದಕ್ಕಿಂತ ಹೆಚ್ಚು ಆಸನ ವ್ಯವಸ್ಥೆ ಇರುವ ಕಲ್ಯಾಣ ಮಂಟಪ, ಸಮುದಾಯ ಭವನ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ನಿಯಮ ಉಲ್ಲಂಘಿಸಿದರೆ 1 ಲಕ್ಷ ರು.ಗಳವರೆಗೆ ದಂಡ.
- ಸಾರ್ವಜನಿಕ ಸಭೆ, ಸಮಾರಂಭ, ಕಾರ್ಯಕ್ರಮ, ರ‍್ಯಾಲಿ ಕೂಟ, ಆಚರಣೆಗಳ ಆಯೋಜಕರಿಗೆ 50 ಸಾವಿರ ರು. ದಂಡ



ಬಹುತೇಕ ಭಾಗದಲ್ಲಿ ಕೋವಿಡ್ ನಿಯಮಗಳು ಕಟ್ಟುನಿಟ್ಟಾಗಿ ಪಾಲನೆ ಆಗುತ್ತಿಲ್ಲ, ಇದುವರೆಗೆ ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸದವರಿಗೆ ಹಾಗೂ ಸುರಕ್ಷಿತ ಅಂತರ ಕಾಪಾಡದವರಿಗೆ ವ್ಯಕ್ತಿಗತವಾಗಿ ದಂಡ ಹಾಕಲಾಗುತ್ತಿತ್ತು. ಮುಂದಿನ ದಿನದಲ್ಲಿ ಉದ್ದಿಮೆಗಳು ಹಾಗೂ ಸಂಸ್ಥೆಗಳ ಮಾಲೀಕರಿಗೂ ದಂಡ ವಿಧಿಸಲು ಬಿಬಿಎಂಪಿ ಆರೋಗ್ಯ ನಿರೀಕ್ಷಕರು ಹಾಗೂ ಮಾರ್ಷಲ್‌ಗಳು ಕ್ರಮಕ್ಕೆಗೊಳ್ಳಲಿದ್ದಾರೆ.

– **ಮಂಜುನಾಥ್ ಪ್ರಸಾದ್** ಬಿಬಿಎಂಪಿ ಆಯುಕ್ತ



ಈಗಷ್ಟೇ ಹೋಟೆಲ್ ಉದ್ಯಮದಲ್ಲಿ ಚೇತರಿಕೆ ಕಾಣಿಸುತ್ತಿದೆ. ಈ ಸಮಯದಲ್ಲಿ ಇಷ್ಟು ದೊಡ್ಡ ಪ್ರಮಾಣದ ದಂಡವನ್ನು ಹಾಕಿದರೆ, ಉದ್ಯಮಿಗಳು ಮತ್ತೆ ನಷ್ಟ ಅನುಭವಿಸುತ್ತಾರೆ. ಹೋಟೆಲ್‌ಗೆ ಬರುವ ಗ್ರಾಹಕರಿಗೆ ಜಾಗೃತಿ ಮೂಡಿಸಬಹುದೇ ಹೊರತು, ಒತ್ತಡ ಹೇರಲು ಸಾಧ್ಯವಿಲ್ಲ.

– **ಸದಾನಂದ ಮಯ್ಯ** ಮಯ್ಯಾಸ್ ಸಂಸ್ಥೆ ಮುಖ್ಯಸ್ಥರು

ಉದಯವಾಣಿ
ಜನಮನದ ಜೀವನಾಡಿ

| Date | 07-12-2020 |
| --- | --- |
| Page No | 3 |


# ಚುಮು ಚುಮು ಚಳಿಯ ಜತೆ ವರ್ಷಧಾರೆ

**ಬೆಂಗಳೂರು:** ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ ಹಿನ್ನೆಲೆಯಲ್ಲಿ ಬೆಂಗಳೂರಿನ ಹಲವು ಕಡೆಗಳಲ್ಲಿ ತುಂತುರು ಮಳೆಯಾಗಿದ್ದು ಇಡೀ ದಿನ ಚಳಿ ವಾತಾವರಣವಿತ್ತು. ದೊಮ್ಮಲೂರಿನಲ್ಲಿ 9.5 ಮಿಲಿ ಮೀಟರ್, ಸಿಗೇಹಳ್ಳಿಯಲ್ಲಿ 9.4 ಮಿಲಿ ಮೀಟರ್ ಮಳೆ ಸುರಿದಿದೆ. ಹಾಗೆಯೇ ಮಹಾದೇವ ಪುರದಲ್ಲಿ 8.5 ಮಿಲಿ ಮೀಟರ್ ಕೆ.ಆರ್.ಪುರ ಮತ್ತು ಲಕ್ಕಸಂದ್ರ ಮತ್ತು ಆವಲಹಳ್ಳಿಯಲ್ಲಿ ತಲಾ 8 ಮಿಲಿ ಮೀಟರ್ ಮಳೆ ಬಿದ್ದಿದೆ.

ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ವ್ಯಾಪ್ತಿಯಲ್ಲಿ 6 ಮಿಲಿ ಮೀಟರ್ ಮತ್ತು ಬಸವನಗುಡಿ ವ್ಯಾಪ್ತಿಯಲ್ಲಿ 5 ಮಿಲಿ ಮೀಟರ್ ಮಳೆ ಸುರಿದಿದೆ. ದಯಾನಂದನಗರ, ಹಂಪಿನಗರ, ರಾಜರಾಜೇಶ್ವರಿ ನಗರ ವ್ಯಾಪ್ತಿಯಲ್ಲಿ ತಲಾ 3 ಮಿಲಿ ಮೀಟರ್ ಮಳೆ ಬಿದ್ದಿದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಕಂಡು ಬಂದ ಹಿನ್ನೆಲೆಯಲ್ಲಿ ಮುಂದಿನ ಎರಡು ದಿನಗಳ ಕಾಲ ಬೆಂಗಳೂರು ಸುತ್ತಮುತ್ತ ತುಂತುರು ಮಳೆ ಬೀಳಲಿದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.







**ಉದಯವಾಣಿ**

ಜನಮನದ ಜೀವನಾಡಿ

| Date | 07-12-2020 |
| --- | --- |
| Page No | 4 |

# ವಾರ್ ರೂಂನಲ್ಲೇ ವ್ಯಾಕ್ಸಿನ್ ಕಂಟ್ರೋಲ್ ರೂಂ

## ಪ್ರಕರಣಗಳ ಮಾಹಿತಿ ಕ್ರೋಢೀಕರಣವನ್ನು ಸಮರ್ಪಕ ನಿರ್ವಹಣೆಗೆ ಸಜ್ಜು

**ಬೆಂಗಳೂರು:** ರಾಜ್ಯಮಟ್ಟದಲ್ಲಿ ಕೊರೊನಾ ಸೋಂಕು ನಿರ್ವಹಣೆ ನಿಟ್ಟಿನಲ್ಲಿ ಸಮನ್ವಯ ಮತ್ತು ದಾಖಲೆ ಕ್ರೋಢೀಕರಣಕ್ಕೆ ಸ್ಥಾಪಿಸಿದ್ದ ಕೊರೊನಾ ವಾರ್ ರೂಂ ಇನ್ನು ಮುಂದೆ ವ್ಯಾಕ್ಸಿನ್ ಕಂಟ್ರೋಲ್ ರೂಂ ಆಗಿಯೂ ಕಾರ್ಯನಿರ್ವಹಿಸಲಿದೆ.

ಈ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸುತ್ತೋಲೆ ಹೊರಡಿಸಿದೆ. ಇದರಲ್ಲಿ ವಾರ್ ರೂಂ ಸೋಂಕಿತರಿಗೆ ಚಿಕಿತ್ಸೆ, ಕ್ವಾರಂಟೈನ್ ಸೌಲಭ್ಯ ಒದಗಿಸಲು ಸಮನ್ವಯ ಸಾಧಿಸುವ ಜತೆಗೆ ಪ್ರಕರಣಗಳ ಮಾಹಿತಿ ಕ್ರೋಢೀಕರಣವನ್ನು ಸಮರ್ಪಕವಾಗಿ ನಿಭಾಯಿಸಿದೆ. ಈ ಬೆನ್ನಲ್ಲೇ ಕೊರೊನಾ ಲಸಿಕೆ ಅಭಿಯಾನ ವಿದ್ದು ಆ ಕಾರ್ಯಕ್ರಮದ ಸಮನ್ವಯಕ್ಕೆ ಕೊರೊನಾ ವಾರ್ ರೂಮ್ ಜತೆಗೆ ವ್ಯಾಕ್ಸಿನ್ ಕಂಟ್ರೋಲ್ ರೂಂ ಆಗಿಯು ಕೆಲಸ ನಿರ್ವಹಿಸಬೇಕು ಎಂದು ತಿಳಿಸಲಾಗಿದೆ.

ಸದ್ಯ ಸೋಂಕು ಪ್ರಕರಣಗಳ ಕಡಿಮೆಯಾದ ಹಿನ್ನೆಲೆ ಈ ಹೆಚ್ಚುವರಿಗೆ ಜವಾಬ್ದಾರಿಯನ್ನು ನೀಡಲಾಗಿದೆ. ಸದ್ಯ ಕೆಲಸ ಮಾಡುತ್ತಿರುವ ಸಿಬ್ಬಂದಿಯನ್ನು ವಾರ್ ರೂಂ, ಕಂಟ್ರೋಲ್ ರೂಂ ಎಂಬ ಪ್ರತ್ಯೇಕ ಎರಡು ತಂಡಗಳನ್ನಾಗಿ ಮಾಡಲಾಗುತ್ತದೆ. ಅಗತ್ಯವಿದ್ದರೆ ಹೆಚ್ಚುವರಿ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗುತ್ತದೆ. ಸದ್ಯ ವಾರ್ ರೂಂ ಹೊಣೆಹೊತ್ತಿರುವ ಐಎಎಸ್ ಅಧಿಕಾರಿ ಮನೀಶ್ ಮೌದ್ಗಿಲ್ ಅವರೇ ವಾಕ್ಸಿನ್ ಕಂಟ್ರೋಲ್ ರೂಂ ಜವಾಬ್ದಾರಿ ನಿಭಾಹಿಸುವ ಸಾಧ್ಯತೆಗಳಿವೆ ಎಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ.

**ಭಾನುವಾರ ಕೊರೊನಾ ಮಾಹಿತಿ**

| | | |
| --- | --- | --- |
| 733 ಹೊಸ ಪ್ರಕರಣಗಳು | 275 ಗುಣಮುಖರು | 07 ಸೋಂಕಿತರ ಸಾವು |
| 3.74 ಲಕ್ಷ ಒಟ್ಟಾರೆ ಪ್ರಕರಣ | 3.50 ಲಕ್ಷ ಒಟ್ಟಾರೆ ಗುಣಮುಖರು | |
| 4,183 ಒಟ್ಟಾರೆ ಸಾವು | 19636 ಸಕ್ರಿಯ ಪ್ರಕರಣಗಳು | |

**ಕಂಟ್ರೋಲ್ ರೂಂನಲ್ಲಿ ಏನೆಲ್ಲಾ ಮಾಹಿತಿ?:** ಕೊರೊನಾ ವಾರ್ ರೂಂ ಈವರೆಗೂ ಬೆಂಗಳೂರು ನಗರ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ, ಗುಣಮುಖರಾದವರ ಸಂಖ್ಯೆ ಸೇರಿದಂತೆ ವಿವಿಧ ಮಾಹಿತಿಯನ್ನು ಕಲೆ ಹಾಕುತ್ತಿತ್ತು. ವಾಕ್ಸಿನ್ ಕಂಟ್ರೋಲ್ ರೂಂ ಇನ್ನು ಮುಂದೆ ಲಸಿಕೆಗಾಗಿ ಎಷ್ಟು ಹೆಸರುಗಳು ದಾಖಲಾಗಿವೆ. ಪ್ರತಿ ದಿನ ಎಷ್ಟು ಜನರಿಗೆ ಲಸಿಕೆ ವಿತರಿಸಲಾಗಿದೆ. ಲಸಿಕೆ ನೀಡಿದವರ ಪೈಕಿ ಎಷ್ಟು ಮಂದಿ ಗುಣಮುಖರಾಗಿದ್ದಾರೆ. ಬಾಕಿ ಎಷ್ಟು ಲಸಿಕೆಗಳು ಉಳಿದಿವೆ ಎಂಬೆಲ್ಲಾ ಮಾಹಿತಿಯನ್ನು ಕೋವಿಡ್ ವಾಕ್ಸಿನ್ ರೂಂ ಸಂಗ್ರಹಿಸಲಿದೆ ಎಂದು ಮೂಲಗಳು ತಿಳಿಸಿವೆ.

ಉದಯವಾಣಿ
ಜನಮನದ ಜೀವನಾಡಿ

| Date | 07-12-2020 |
| --- | --- |
| Page No | 5 |

# ಪಾಲಿಕೆ ಎಲೆಕ್ಷನ್: ನ್ಯಾಯಾಲಯದ ತೀರ್ಪಿಗೆ ಬದ್ಧ

## ಕಾನೂನಿಗಿಂತ ಯಾರೂ ದೊಡ್ಡವರಲ್ಲ: ವಿ ಸೋಮಣ್ಣ ■ ಚುನಾವಣೆ ಕುರಿತು ವರಿಷ್ಠರ ಚರ್ಚೆ ಮಾಡಿ ನಿರ್ಧಾರ

**ಬೆಂಗಳೂರು:** ಬಿಬಿಎಂಪಿ ಚುನಾವಣೆಗೆ ಪೂರ್ವಭಾವಿ ಸಭೆಗಳನ್ನು ಮಾಡುತ್ತಿದ್ದೇವೆ. ಕಾನೂನಿಗಿಂತ ಯಾರೂ ದೊಡ್ಡವರಲ್ಲ, ಕಾನೂನು ಪರಿಪಾಲನೆ ಮಾಡಬೇಕಿರುವುದು ನಮ್ಮ ಕರ್ತವ್ಯ ಎಂದು ಸಚಿವ ವಿ.ಸೋಮಣ್ಣ ಹೇಳಿದರು.

ತಮ್ಮ ನೂತನ ಕಚೇರಿ ಉದ್ಘಾಟನೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಹೈಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಯಾವ ರೀತಿ ಮಾಡಬೇಕು ಎನ್ನುವ ಕುರಿತು ಚರ್ಚೆ ನಡೆಯುತ್ತಿದೆ. ಸುಪ್ರೀಂಕೋರ್ಟ್‌ಗೆ ಹೋಗಬೇಕೋ ಅಥವಾ ಚುನಾವಣೆ ಮಾಡಬೇಕೋ ಎನ್ನುವ ಬಗ್ಗೆ ಯಾವುದೇ ಮಾಹಿತಿಯಿಲ್ಲ, ಅದನ್ನೆಲ್ಲ ಕುಳಿತು ಚರ್ಚೆ ಮಾಡಿ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ವಿ.ಸೋಮಣ್ಣ ಹೇಳಿದರು.

ಕಂದಾಯ ಸಚಿವ ಆರ್.ಅಶೋಕ ಮಾತನಾಡಿ, ಬಿಬಿಎಂಪಿ ಚುನಾವಣೆ ಸಂಬಂಧ ನಡೆದ ಸಭೆಯಲ್ಲಿ ಯಾವುದೇ ಒಡಕು ಸೃಷ್ಟಿಯಾಗಿಲ್ಲ, ಕೋರ್ ಕಮಿಟಿ ಸದಸ್ಯರಾದ ಕಾರಣ ನಾನು ಬೆಳಗಾವಿಯಲ್ಲಿದ್ದೆ, ಹಾಗಾಗಿ ಸಭೆಯಲ್ಲಿ ಭಾಗಿಯಾಗಿರಲಿಲ್ಲ, ಚುನಾವಣೆ ಮಾಡುವ ದೃಷ್ಟಿಯಿಂದ ಈಗಾಗಲೇ ಹಲವಾರು ಸಭೆಗಳನ್ನು ಮಾಡಲಾಗಿದೆ. ಯಾವ ರೀತಿಯ ಗೊಂದಲಗಳು ಇಲ್ಲ, ಬಿಜೆಪಿ ಬಿಬಿಎಂಪಿಯಲ್ಲಿ ಗೆಲ್ಲಬೇಕು ಎನ್ನುವುದಷ್ಟೇ ನಮ್ಮ ಮುಂದಿರುವ ವಿಷಯ. ನಮ್ಮಲ್ಲಿ ಯಾವುದೇ ಒಡಕಿಲ್ಲ ಎಂದರು.

### ಕಾಂಗ್ರೆಸ್ ಕಥೆ ಗೋವಿಂದ

ಕಾಂಗ್ರೆಸ್ ಯಾವತ್ತಿದ್ದರೂ ಒಂದು ರೀತಿಯ ವಿಷ. ವಿಷವನ್ನು ಸ್ವಲ್ಪ ಕುಡಿದರೂ ನಿಧಾನವಾಗಿ ಏರುತ್ತದೆ ಜಾಸ್ತಿ ಕುಡಿದರೆ ಬೇಗ ಸಾಯುತ್ತಾರೆ. ಆ ರೀತಿ ಜೆಡಿಎಸ್ ಕಾಂಗ್ರೆಸ್‌ನ ಸಹವಾಸ ಮಾಡಿ ಒಂದು ವರ್ಷಕ್ಕೆ ಪತನಗೊಂಡಿದೆ. ಕಾಂಗ್ರೆಸ್‌ನವರ ವಿಷ ಸ್ವಲ್ಪ ಜಾಸ್ತಿಯಾಗಿತ್ತು. ಅದಕ್ಕಾಗಿ ಬೇಗ ಸರ್ಕಾರ ಬಿದ್ದುಹೋಯಿತು. ಕಾಂಗ್ರೆಸ್ಸಿನ ಸರ್ಜಿಕಲ್ ಸ್ಟ್ರೈಕ್‌ಗೆ ಕುಮಾರಸ್ವಾಮಿ ಬಲಿಪಶುವಾದರು ಎಂದು ಸಚಿವ ಅಶೋಕ್ ತಿಳಿಸಿದರು. ಈಗ ಅವರಿಗೆ ಜ್ಞಾನೋದಯವಾಗಿದೆ. ಹಿಂದೆ ಮೈತ್ರಿ ಸರ್ಕಾರ ಬಿಜೆಪಿ ಜತೆಯಲ್ಲಿ ಇದ್ದಾಗ ಕುಮಾರಸ್ವಾಮಿಗೆ ವರ್ಚಸ್ಸು ಸಿಕ್ಕಿತ್ತು. ನಾವೆಲ್ಲಾ ಅಂದು ಸಹಕಾರ ಕೊಟ್ಟಿದ್ದೆವು. ಆದರೆ ಕಾಂಗ್ರೆಸ್ ದಿನನಿತ್ಯ ಕಿರುಕುಳ ನೀಡಿತು ಮಾನಸಿಕ ಹಿಂಸೆ ಎಲ್ಲವನ್ನು ಕೊಟ್ಟು ವಿಷವನ್ನು ಹಾಕಿ ಸರ್ಕಾರವನ್ನೇ ಪತನಗೊಳಿಸಿತು. ಹಾಗಾಗಿ ಸರ್ಕಾರ ಬಿದ್ದಿದ್ದು ಕಾಂಗ್ರೆಸ್ ನಿಂದ ಎಂದು ಜಗಜ್ಜಾಹೀರಾಗಿದೆ. ಹೀಗಾಗಿ ಕಾಂಗ್ರೆಸ್ಸಿನ ಕಥೆ ಗೋವಿಂದಾ ಎಂದು ವ್ಯಂಗ್ಯವಾಡಿದರು.



ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಶಾಸಕರ ನೂತನ ಕಚೇರಿಯನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಉದ್ಘಾಟಿಸಿದರು. ಸಚಿವ ವಿ.ಸೋಮಣ್ಣ, ರಾಜ್ಯ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಇತರರಿದ್ದರು.

### ಬಿಬಿಎಂಪಿಗೆ ವಿಶೇಷ ಕಾಯ್ದೆ : ಆರ್. ಅಶೋಕ್

ಬೆಂಗಳೂರಿಗೆ ವಿಶೇಷವಾದ ಕಾಯಿದೆ ಜಾರಿಗೆ ತರಲು ಸರ್ಕಾರ ತೀರ್ಮಾನಿಸಿದೆ ಎಂದು ಕಂದಾಯ ಸಚಿವ ಆರ್. ಅಶೋಕ್ ಹೇಳಿದ್ದಾರೆ.ಸುದ್ದಿಗಾರರ ಜತೆ ಮಾತನಾಡಿ, ಬಿಬಿಎಂಪಿಗೆ ವಿಶೇಷ ಕಾಯ್ದೆ ಮಾಡುವುದಾಗಿ ನಾವು ಪ್ರಣಾಳಿಕೆಯಲ್ಲಿಯೇ ಹೇಳಿದ್ದೇವೆ. ಅದನ್ನು ಅಧಿವೇಶನದಲ್ಲಿ ಮಂಡಿಸಿ ಪಾಸ್ ಮಾಡುತ್ತೇವೆ ಎಂದರು.ವಿಧಾನಸಭೆಯಲ್ಲಿ ಕಾಯಿದೆಗೆ ಒಪ್ಪಿಗೆ ದೊರೆತರೆ ಬೆಂಗಳೂರಿನ ಸ್ವರೂಪವೇ ಬದಲಾಗಲಿದೆ. ಹೆಚ್ಚು ವಾರ್ಡ್ ಗಳ ಮೂಲಕವೇ ಚುನಾವಣೆಗೆ ಹೋಗಬೇಕು ಎಂಬ ಉದ್ದೇಶ ನಮ್ಮದು, ಆ ದೃಷ್ಟಿಯಲ್ಲಿ 243 ವಾರ್ಡ್ ಗಳನ್ನು ಮಾಡಿದ್ದೇವೆ. ಕಾನೂನು ತಜ್ಞರ ಜೊತೆ ಚರ್ಚಿಸಿ ಮುಂದುವರೆಯುತ್ತೇವೆ ಎಂದರು.

### ಶಾಸಕ ಕಚೇರಿ ಉದ್ಘಾಟಿಸಿದ ಮುಖ್ಯಮಂತ್ರಿ

**ಬೆಂಗಳೂರು:** ರಾಜ್ಯದ ಶಾಸಕರು ಹಾಗೂ ಮಂತ್ರಿಗಳು ಹೇಗೆ ಕಾರ್ಯ ನಿರ್ವಹಿಸಬೇಕು ಎಂಬುದಕ್ಕೆ ವಿ.ಸೋಮಣ್ಣ ಅವರು ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಶಾಸಕರ ನೂತನ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ಸೋಮಣ್ಣ ಏನೇ ಮಾಡಿದರೂ ವಿಶೇಷವಾದ ರೀತಿಯಲ್ಲಿ ಮಾಡುತ್ತಾರೆ. ಶಾಸಕರ ಕಚೇರಿಯನ್ನು ಶ್ರೀಸಾಮಾನ್ಯರ ಸಮಸ್ಯೆ ಕೇಳಲು ವಿಶೇಷ ರೀತಿಯಲ್ಲಿ ಮಾಡಿದ್ದಾರೆ ಎಂದರು. ವಿ.ಸೋಮಣ್ಣ ಮಾತನಾಡಿದರು.

# ಸಂಯುಕ್ತ ಕರ್ನಾಟಕ

| Date | 07-12-2020 |
| --- | --- |
| Page No | 9 |


ಚಳಿ-ಮಳೆಗೆ ನಡುಗಿದ ಬೆಂಗಳೂರಿಗರು । ರಜಾ ಹಾಕಿದ ಸೂರ್ಯ । ರಸ್ತೆಯಲ್ಲಿ ವಾಹನಗಳು ವಿರಳ

# ಜಿಟಿಜಿಟಿ ಮಳೆ–ಗಡಗಡ ಚಳಿ

ಸಂ.ಕ. ಸಮಾಚಾರ ಬೆಂಗಳೂರು

ಬುರೇವಿ ಚಂಡಮಾರುತದ ಪ್ರಭಾವದಿಂದಾಗಿ ಕಳೆದ ಮೂರುದಿನಗಳಿಂದ ಬೆಂಗಳೂರಿಗರು ಮಳೆ–ಚಳಿಯಿಂದ ಗಡಗಡ ನಡುಗುತ್ತಿದ್ದಾರೆ. ಶನಿವಾರ, ರವಿವಾರ ವಾರಂತ್ಯದ ಮೋಜು ಮಸ್ತಿಗೆ ಚಳಿ–ಮಳೆ ಕಡಿವಾಣ ಹಾಕಿದೆ. ಮುಂದಿನ ಮೂರುದಿನಗಳ ಕಾಲ ಮಳೆ–ಚಳಿಯಲ್ಲಿ ನಡುಗಬೇಕಾಗಿರುವ ಅನಿವಾರ್ಯತೆ ಬೆಂಗಳೂರು ಜನರಿಗೆ ಇದೆ.

- **3 ದಿನ ಜಿಟಿ ಜಿಟಿ- ಮಂಗಳವಾರದಿಂದ ಜೋರುಮಳೆ**
- **ಮನೆಯಲ್ಲಿದ್ದರೂ ಚಳಿಚಳಿ- ಮಂಕಿಕ್ಯಾಪ್ ಕಡ್ಡಾಯ**



ಸೂರ್ಯ ರಜಾಹಾಕಿದ್ದಾನೇನೋ ಎಂಬಂತೆ ಮುಂಜಾನೆ ಎಲ್ಲೆಡೆ ಮೋಡಕವಿದ ವಾತಾವರಣ. ಆಕಾಶಕ್ಕೆ ನೆಗಡಿಯಾಗಿದೆ ಎನ್ನುವ ಹಾಗೆ ಸಣ್ಣ ಹನಿಯ ಜಿಟಿಜಿಟಿ ಮಳೆ. ಮಳೆಯಿಂದ ಪಾರಾಗಲು ಸಾಧ್ಯವಿಲ್ಲವೇನೋ ಎಂಬಂತಹ ಬಿಟ್ಟುಬಿಡದೇ ಹುಯ್ಯುವ ಹನಿಗಳಿಂದ ಜನರು ಮನೆಯಿಂದ ಹೊರಗೆ ಬರುವುದು ಬೇಡ ಎಂದು ನಿರ್ಧರಿಸಿದಂತಿದೆ.

ರವಿವಾರ ಜಿಟಿಜಿಟಿ ಮಳೆಯಿಂದಾಗಿ ರಸ್ತೆಗಳೆಲ್ಲ ಬಹುತೇಕ ಖಾಲಿ, ಖಾಲಿ. ಅಲ್ಲೊಂದು ಇಲ್ಲೊಂದು ವಾಹನಗಳ ಸವಾರರು ಜಿಟಿಜಿಟಿ ಮಳೆಯಲ್ಲಿಯೇ ನೆನೆದುಕೊಂಡು ಹೋಗುತ್ತಿದ್ದರು. ಮನೆಯಿಂದ ಹೊರಬರುವ ಅನಿವಾರ್ಯತೆ ಇದ್ದವರು ಜರ್ಕಿನ್ ಧರಿಸಿ ಕೊಡೆ ಹಿಡಿದುಕೊಂಡು ಬರಲೇಬೇಕು. ಮಾರುಕಟ್ಟೆಗಳಲ್ಲಿ ಜಿಟಿಜಿಟಿ ಮಳೆಯಲ್ಲಿ ವ್ಯಾಪಾರ ಮಾಡುವ ತರಕಾರಿ ವ್ಯಾಪಾರಸ್ಥರು ಜಿಟಿಮಳೆಗೆ ಹಿಡಿಶಾಪ ಹಾಕುತ್ತಿದ್ದಾರೆ.

ಒಂದು ಏರಿಯಾದಲ್ಲಿ ಮಳೆಬಂದರೆ ಇನ್ನೊಂದು ಏರಿಯಾದಲ್ಲಿ ಕೊರೆಯುವ ಚಳಿ. ಮನೆಯ ಎಲ್ಲ ಕಿಟಕಿಗಳನ್ನು ಮುಚ್ಚುವುದು ಕಡ್ಡಾಯ ಎಂಬಂತೆ ಆಗಿದೆ. ಮನೆಯಲ್ಲಿ ಬೆಚ್ಚಗೇ ಕುಳಿತುಕೊಳ್ಳಲೂ ಆಗದಂತಹ ಕೊರೆತ. ಸದಾ ಮಂಕಿಕ್ಯಾಪ್ ಹಾಕಿಕೊಂಡರೆ ಮಾತ್ರ ಸ್ವಲ್ಪ ಬೆಚ್ಚನೆಯ ಅರಿವು ಬರಲು ಸಾಧ್ಯವಾಗುತ್ತದೆ ಎಂಬಂತಹ ಪರಿಸ್ಥಿತಿ ಎದುರಾಗಿದೆ.

ಚಳಿಅಷ್ಟೇ ಇದ್ದಿದ್ದರೆ ಸಂಜೆಹೊತ್ತಿಗೆ ಭಯ್ಯಾನ ಡಬ್ಬಾ ಅಂಗಡಿಗಳ ಮುಂದೆ ನಿಂತು ಪಾನಿಪುರಿ, ಸೇವ್‌ಪುರಿ ತಿನ್ನುವ ಯುವತಿಯರು ರವಿವಾರದ ದಿನ ಕಾಣಿಸಲಿಲ್ಲ. ಬೈಕ್‌ನಲ್ಲಿ ಜಾಲಿರೈಡ್ ಹೋಗುವ ಯುವಕರು ಮುದುರಿ ಮನೆಯಲ್ಲಿಯೇ ಇದ್ದಾರೆ. ವಯಸ್ಸಾದವರಂತೂ ಮನೆಬಿಟ್ಟು ಹೊರಬರುತ್ತಿಲ್ಲ. ವಿಶೇಷವಾಗಿ ರವಿವಾರ ಬೆಳಗ್ಗೆ ವಾಯುವಿಹಾರಿಗಳಿಂದ ತುಂಬಿ ತುಳುಕುತ್ತಿದ್ದ ಪಾರ್ಕುಗಳು ಬಿಕೋ ಎನ್ನುತ್ತಿದ್ದವು.



### ಮಂಗಳವಾರದಿಂದ ಮಳೆ...

ಮುಂದಿನ ಮೂರುದಿನಗಳ ಕಾಲ ಇದೇ ರೀತಿಯ ಜಿಟಿಜಿಟಿ ಮಳೆ–ಚಳಿ ಇರಲಿದೆ. ಮಂಗಳವಾರದಿಂದ ಬೆಂಗಳೂರಿನಲ್ಲಿ ಮೂರು ದಿನಗಳ ಕಾಲ ಜೋರಾದ ಮಳೆ ಬೀಳುವ ಸಂಭವವಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಸಂಯುಕ್ತ ಕರ್ನಾಟಕ

| Date | 07-12-2020 |
|---|---|
| Page No | 9 |




ಸೋಮವಾರದಿಂದ ಆರಂಭವಾಗಲಿರುವ ಅಧಿವೇಶನದಲ್ಲಿ ಬಿಬಿಎಂಪಿಗೆ ತಿದ್ದುಪಡಿ ಮಾಡಿರುವ ಕಾಯ್ದೆಯನ್ನು ವಿಧಾನ ಮಂಡಲದ ಸದನಗಳಲ್ಲಿ ಮಂಡಿಸಿ ಅಂಗೀಕಾರ ಪಡೆಯಲಿದ್ದೇವೆ.

■ ಆರ್. ಅಶೋಕ್

| ಕಂದಾಯ ಸಚಿವ

ಸಂಯುಕ್ತ ಕರ್ನಾಟಕ

| Date | 07-12-2020 |
| --- | --- |
| Page No | 9 |

# ಕೊರೊನಾ ದಂಡವಲ್ಲ, ಸುಲಿಗೆ

- ಪಾಲಿಕೆ ವಿರುದ್ಧ ಸಾರ್ವಜನಿಕರ ಆಕ್ರೋಶ
- ಸೋಂಕಿನ ವಿರುದ್ಧ ಜಾಗೃತಿ ಪಾಲಿಕೆ ಹೊಣೆ
- ಮಾಸ್ಕ್ ಧರಿಸಿ ಹೋಟೆಲ್‌ನಲ್ಲಿ ಊಟ ಸಾಧ್ಯವೇ..

**ಸಂ.ಕ. ಸಮಾಚಾರ ಬೆಂಗಳೂರು**

ಕೊರೊನಾ ತಡೆಗಟ್ಟಲು ಸಾರ್ವಜನಿಕರು ಸೇರುವ ಸ್ಥಳಗಳಲ್ಲಿ ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿದಲ್ಲಿ ದಂಡದ ಪ್ರಮಾಣ ಹೆಚ್ಚಿಸಿರುವ ಬಿಬಿಎಂಪಿ ಕ್ರಮಕ್ಕೆ ಸಾರ್ವಜನಿಕ ವಲಯದಲ್ಲಿ ಆಕ್ರೋಶ ವ್ಯಕ್ತವಾಗಿದ್ದು ಇದೊಂದು ರೀತಿಯ ಸುಲಿಗೆ ಎಂಬ ವಿರೋಧ ವ್ಯಕ್ತವಾಗಿದೆ.

ಕೊರೊನಾ ಹರಡುವಿಕೆಯನ್ನು ನಿಯಂತ್ರಿಸುವ ಸಲುವಾಗಿ ಬೆಂಗಳೂರಿನ ಹೋಟೆಲ್, ಕಲ್ಯಾಣ ಮಂಟಪ, ಚಿತ್ರ ಮಂದಿರ, ಮಾಲ್, ಸಮಾರಂಭ, ಅಂಗಡಿ ಮುಂಗಟ್ಟುಗಳಲ್ಲಿ ಜನರು ಮಾಸ್ಕ್ ಧರಿಸುವಂತೆ ನೋಡಿಕೊಳ್ಳದಿದ್ದರೆ ಅದರ ಮಾಲೀಕರು ದುಬಾರಿ ದಂಡ ಪಾವತಿಸಬೇಕಾಗುತ್ತದೆ. ಬೆಂಗಳೂರು ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯನಿರತ ಆರೋಗ್ಯ ನಿರೀಕ್ಷಕರು ಹಾಗೂ ವಾರ್ಡ್ ಮಾರ್ಷಲ್ ದಂಡ ವಿಧಿಸಬಹುದು. 5 ಸಾವಿರ ರೂ.ನಿಂದ 1 ಲಕ್ಷದವರೆಗೆ ದಂಡ ವಿಧಿಸಲು ಬಿಬಿಎಂಪಿ ಕಮಿಷನರ್ ಮಂಜುನಾಥ್ ಪ್ರಸಾದ್ ಆದೇಶ ಹೊರಡಿಸಿದ್ದಾರೆ. ಇದಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿದೆ.

ಸ್ವಸಹಾಯ ಪದ್ಧತಿ ದರ್ಶಿನಿ ಹೋಟೆಲ್, ಅಂಗಡಿ ಮುಂಗಟ್ಟುಗಳಲ್ಲಿ ಜನರು ಮಾಸ್ಕ್ ಧರಿಸದಿದ್ದರೆ 5,000 ರೂ. ದಂಡ, ಹವಾ ನಿಯಂತ್ರಿತವಲ್ಲದ ರೆಸ್ಟೋರೆಂಟ್, ಪಾರ್ಟಿ ಹಾಲ್, ಖಾಸಗಿ ಬಸ್ ನಿಲ್ದಾಣ, ಸಾರ್ವಜನಿಕ ಸ್ಥಳಗಳಲ್ಲಿ 25,000 ರೂ., ಹವಾನಿಯಂತ್ರಿತ ರೆಸ್ಟೋರೆಂಟ್, ಪಾರ್ಟಿ ಹಾಲ್, ಬ್ರಾಂಡೆಡ್ ಶಾಪ್, ಸಿನಿಮಾ ಹಾಲ್, ಮಲ್ಟಿಪ್ಲೆಕ್ಸ್, ಶಾಪಿಂಗ್ ಮಾಲ್‌ಗಳಲ್ಲಿ 50 ಸಾವಿರ ರೂ. ದಂಡ, ಸ್ಟಾರ್ ಹೋಟೆಲ್‌ಗಳಿಗೆ 1 ಲಕ್ಷ ರೂ. ದಂಡ, ಸಾರ್ವಜನಿಕ ಸಭೆ ಸಮಾರಂಭ, ರ್‍ಯಾಲಿ, ಕೂಟ ಆಚರಣೆಯ ಆಯೋಜಕರಿಗೆ – 50,000 ರೂ. ದಂಡ ವಿಧಿಸುವುದಾಗಿ ಆದೇಶದಲ್ಲಿ ತಿಳಿಸಲಾಗಿದೆ.

ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ಬಿಬಿಎಂಪಿ ಮಾಡಬೇಕು. ಮದುವೆಗೆ ಬಂದವರೆಲ್ಲರನ್ನೂ ನಾವು ಗಮನಿಸಲು ಸಾಧ್ಯವೇ ಎಂಬುದು ಕಲ್ಯಾಣ ಮಂಟಪ ಮಾಲೀಕರ ಬೇಸರಕ್ಕೆ ಕಾರಣವಾಗಿದೆ. ಇನ್ನು ಮಾಲ್‌ಗಳು, ಅಂಗಡಿ ಮಾಲೀಕರಂತೂ ಎಲ್ಲವನ್ನೂ ನಾವು ಗಮನಿಸಲು ಸಾಧ್ಯವೇ ಎಂದು ಪ್ರಶ್ನೆ ಮಾಡುತ್ತಾರೆ.

ವಿಶೇಷ ಎಂದರೆ ಹೋಟೆಲ್‌ಗೆ ತೆರಳುವವರು ಊಟ, ಉಪಾಹಾರ ಹಾಗೂ ಕಾಫಿ, ಟೀ ಸೇವನೆ ಮಾಡಲು ಬರುತ್ತಾರೆ. ಗ್ರಾಹಕರು ಮಾಸ್ಕ್ ಹಾಕಿಕೊಂಡು ಆಹಾರವನ್ನು ಸೇವಿಸಲು ಸಾಧ್ಯವೇ. ಈ ಬಗ್ಗೆ ಬಿಬಿಎಂಪಿ ಯೋಚನೆ ಮಾಡಬೇಕಿತ್ತಲ್ಲವೆ. ಹೋಟೆಲ್‌ಗೆ ಬಂದ ಗ್ರಾಹಕರಿಗೆ ಮಾಸ್ಕ್ ಹಾಕಿಕೊಂಡೇ ಉಪಾಹಾರ ಸೇವಿಸಿ ಎಂದು ಹೇಳಲು ಸಾಧ್ಯವೇ ಎಂಬ ಪ್ರಶ್ನೆ ಮುಂದಿಟ್ಟಿದ್ದಾರೆ.

ಸಂಯುಕ್ತ ಕರ್ನಾಟಕ

| Date | 07-12-2020 |
| --- | --- |
| Page No | 9 |

# ದಂಡ ಹೆಚ್ಚಳ ಅನಿವಾರ್ಯ

**ಸಂ.ಕ. ಸಮಾಚಾರ ಬೆಂಗಳೂರು**

ಚಳಿಗಾಲದಲ್ಲಿ ಕೊರೊನಾ ಸೋಂಕು ಹೆಚ್ಚಳವಾಗುವ ಸಾಧ್ಯತೆ ಇದೆ. ಇಂತಹ ಸಂದರ್ಭದಲ್ಲಿ ಜನತೆ ನಿರ್ಲಕ್ಷ್ಯ ವಹಿಸದಂತೆ ದಂಡ ಪ್ರಮಾಣ ಹೆಚ್ಚಳ ಮಾಡಲಾಗಿದೆ ಎಂದು ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಸಮರ್ಥನೆ ಮಾಡಿಕೊಂಡಿದ್ದಾರೆ.

ದಂಡದ ಪ್ರಮಾಣ ಹೆಚ್ಚಳ ಮಾಡಿರುವುದಕ್ಕೆ ಸಾರ್ವಜನಿಕ ವಲಯದಲ್ಲಿ ವಿರೋಧ ವ್ಯಕ್ತವಾಗುತ್ತಿರುವ ಕುರಿತಂತೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಜನವರಿಯಿಂದ ಸೋಂಕಿನ ಎರಡನೆ ಅಲೆ ಶುರುವಾಗಲಿದೆ ಎಂದು ತಜ್ಞರು ಎಚ್ಚರಿಕೆ ನೀಡಿರುವ ಹಿನ್ನೆಲೆಯಲ್ಲಿ ಈಗಲೇ ಕೆಲವು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದರು.

ಡಿಸೆಂಬರ್, ಜನವರಿ ಹಾಗೂ ಫೆಬ್ರವರಿಯಲ್ಲಿ ಮದುವೆ ಸೇರಿದಂತೆ ಕೆಲವು ಸಮಾರಂಭಗಳು ನಡೆಯುತ್ತವೆ. ಕೊರೊನಾ ಸೋಂಕು ನಿಯಂತ್ರಣದ ಮಾರ್ಗಸೂಚಿಯಂತೆ ಇಂತಹ ಸಭೆ ಸಮಾರಂಭಗಳಲ್ಲಿ ನೂರು ಜನರಿಗೆ ಮಾತ್ರ ಅವಕಾಶವಿರುತ್ತದೆ. ಆದರೆ, ನೂರಕ್ಕಿಂತ ಹೆಚ್ಚು ಮಂದಿ ಭಾಗಿಯಾಗುತ್ತಿದ್ದು ಬಹುತೇಕರು ಮಾಸ್ಕ್ ಧರಿಸಿರುವುದೇ ಇಲ್ಲ. ಸಾಮಾಜಿಕ ಅಂತರವನ್ನೂ ಕಾಯ್ದುಕೊಳ್ಳುವುದಿಲ್ಲ. ಈ ಪರಿಸ್ಥಿತಿಯಲ್ಲಿ ಯಾರಿಗಾದರೂ ಸೋಂಕು ಇದ್ದಲ್ಲಿ ಸೋಂಕು ಹರಡುವ ಸಾಧ್ಯತೆ ಇರುತ್ತದೆ. ಇದಕ್ಕೆ ಕಡಿವಾಣ ಹಾಕಲೇಬೇಕಾಗಿದೆ ಎಂದರು.

ಬೆಂಗಳೂರಿನಲ್ಲಿ ನಡೆಯುವ ಎಲ್ಲ ಮದುವೆ ಸಮಾರಂಭದಲ್ಲಿ ಮಾರ್ಗಸೂಚಿ ಪಾಲನೆಯಾಗುತ್ತಿದೆಯೇ ಎಂಬುದನ್ನು ಪರೀಕ್ಷಿಸಲು

- ಜನವರಿಯಿಂದ ಸೋಂಕಿನ ಎರಡನೇ ಅಲೆ
- ಕಲ್ಯಾಣಮಂಟಪಗಳಿಗೆ ಮಾರ್ಷಲ್ ನೇಮಕ ಅಸಾಧ್ಯ
- ಆಯೋಜಕರನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತಿದೆ

ಮಾರ್ಷಲ್‌ಗಳ ನೇಮಕ ಅಸಾಧ್ಯ. ಇದರ ಹೊಣೆ ಕಲ್ಯಾಣ ಮಂಟಪದ ಮಾಲೀಕರದ್ದು ಹಾಗೂ ಮದುವೆ ಮಾಡುವವರಿಗೆ ಮಾಲೀಕರು ಜಾಗೃತಿ ಮೂಡಿಸಬೇಕು. ಹಾಗೆಯೆ ಸಭೆ ಸಮಾರಂಭಗಳು, ಮಾಲ್‌ಗಳಲ್ಲಿ ಒಮ್ಮೊಮ್ಮೆ ಹೆಚ್ಚು ಜನ ಬರುತ್ತಿದ್ದು ಅವರಲ್ಲಿ ಕೆಲವರು ಕಾಟಾಚಾರಕ್ಕೆ ಮಾಸ್ಕ್ ಧರಿಸಿರುತ್ತಾರೆ. ಇವರಿಗೆಲ್ಲ ಬಿಬಿಎಂಪಿ ಮಾರ್ಷಲ್‌ಗಳು ಹೋಗಿ ತಿಳಿಹೇಳಲು ಸಾಧ್ಯವಿಲ್ಲ. ಆದ್ದರಿಂದ ಮಾಲ್ ಮಾಲೀಕರು ಗಮನ ನೀಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸಭೆ ಸಮಾರಂಭಗಳ ಆಯೋಜಕರನ್ನು ಹೊಣೆಗಾರರನ್ನಾಗಿ ಮಾಡಿ ಅವರಿಗೆ ದಂಡವನ್ನು ವಿಧಿಸಿ ಜವಾಬ್ದಾರಿ ಮೂಡಿಸುವ ಕಾರ್ಯ ಮಾಡಲಾಗುತ್ತಿದೆ ಎಂದರು.

ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಪಾಡಿಕೊಂಡಲ್ಲಿ ದಂಡ ಕಟ್ಟುವಂತಹ ಪ್ರಮೇಯ ಬರುವುದಿಲ್ಲ. ಈ ಬಗ್ಗೆ ಜನರೇ ತಮ್ಮನ್ನು ಕೊರೊನಾದಿಂದ ರಕ್ಷಿಸಿಕೊಳ್ಳುವತ್ತ ಗಮನ ನೀಡಬೇಕು ಎಂದರು.

ಸಂಯುಕ್ತ ಕರ್ನಾಟಕ

| Date | 07-12-2020 |
| --- | --- |
| Page No | 9 |




ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಏರ್ಪಡಿಸಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರ ಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮದಲ್ಲಿ ಆಯುಕ್ತ ಮಂಜುನಾಥ ಪ್ರಸಾದ್, ಆಡಳಿತಾಧಿಕಾರಿ ಗೌರವ್ ಗುಪ್ತ ಅಂಬೇಡ್ಕರ್ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು.

ಸಂಯುಕ್ತ ಕರ್ನಾಟಕ

| Date | 07-12-2020 |
| --- | --- |
| Page No | 9 |

# ವೃತ್ತಗಳಲ್ಲಿನ ಗಿಡಗಳ ನಿರ್ವಹಣೆಗೆ ತಾಕೀತು

**ಬೆಂಗಳೂರು:** ನಗರದ ಪ್ರಮುಖ ರಸ್ತೆಗಳು, ಹೊರವರ್ತುಲ ರಸ್ತೆಗಳಲ್ಲಿನ ವೃತ್ತಗಳು ಹಾಗೂ ರಸ್ತೆ ವಿಭಜಕಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದ ಬಗ್ಗೆ ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ತೋಟಗಾರಿಕೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ತೋಟಗಾರಿಕಾ ಹಾಗೂ ಅರಣ್ಯ ವಿಭಾಗಕ್ಕೆ ಸಂಬಂಧಿಸಿದಂತೆ ಸಂಬಂಧ ಪಟ್ಟ ಅಧಿಕಾರಿಗಳ ಜೊತೆ ಪರಿಶೀಲನಾ ಸಭೆ ನಡೆಸಿದ ಅವರು, ಬಿಬಿಎಂಪಿ ವ್ಯಾಪ್ತಿಯಲ್ಲಿ ಹೊರವರ್ತುಲ ರಸ್ತೆ ಹಾಗೂ ಪ್ರಮುಖ ರಸ್ತೆಗಳ ಮಾರ್ಗದಲ್ಲಿರುವ ಮೀಡಿಯನ್ಸ್ ಮತ್ತು ಪ್ರಮುಖ ವೃತ್ತಗಳಲ್ಲಿ ಗಿಡಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿ ಸುಂದರವಾಗಿ ಕಾಣುವ ಸಲುವಾಗಿ ಕೂಡಲೇ ಅಗತ್ಯ ಕ್ರಮಕೈಗೊಳ್ಳಬೇಕೆಂದರು.

ನಗರದ ರಸ್ತೆಗಳು ಸುಂದರವಾಗಿ ಕಾಣುವ ನಿಟ್ಟಿನಲ್ಲಿ ಮೀಡಿಯನ್ಸ್‌ಗಳಲ್ಲಿ ಗಿಡಗಳನ್ನು ಬೆಳೆಸಿ ಹಸಿರನ್ನು ಹೆಚ್ಚಿಸುವ ಹಿನ್ನೆಲೆಯಲ್ಲಿ ತೋಟಗಾರಿಕೆ ಇಲಾಖೆಯು ಬಹುಮುಖ್ಯ ಪಾತ್ರವಹಿಸುತ್ತದೆ. ಆದರೆ ತೋಟಗಾರಿಕಾ ಇಲಾಖೆಯಿಂದ ಯಾವುದೇ ರಸ್ತೆಗಳ ಮೀಡಿಯನ್‌ನಲ್ಲಿರುವ ಗಿಡಗಳ ನಿರ್ವಹಣೆ ಸಮರ್ಪಕವಾಗಿ ಮಾಡುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರಲ್ಲದೆ, ಇತ್ತೀಚೆಗೆ ಯಾವ ಉದ್ಯಾನವನಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲಾಗಿದೆ ಎಂಬ ಬಗ್ಗೆ ಮಾಹಿತಿ ನೀಡಿ ಎಂದು ಸೂಚನೆ ನೀಡಿದರು.

ಪಾಲಿಕೆ ಅರಣ್ಯ ವಿಭಾಗದಿಂದ ಏನೇನು ಯೋಜನೆಗಳನ್ನು ರೂಪಿಸಲಾಗಿದೆ. ಎಲ್ಲೆಲ್ಲಿ ಸಸಿಗಳನ್ನು ನೆಡಲಾಗುತ್ತಿದೆ, ಎಲ್ಲೆಲ್ಲಿ ಕಿರು ಉದ್ಯಾನ ಇದೆ, ರಸ್ತೆ ಮಾರ್ಗಗಳಲ್ಲಿ ಎಲ್ಲೆಲ್ಲಿ ಸಸಿಗಳನ್ನು ನೆಡಲಾಗಿದೆ ಎಂಬ ಮಾಹಿತಿ ಕೊಡುವಂತೆ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಸೂಚನೆ ನೀಡಿದರು.


IN THE COURT OF THE X ADDITIONAL CITY CIVIL JUDGE, BANGALORE
CITY CIVIL COURT AT BANGALORE CITY CCCH-26
P & SC No. 184/2020
Between
Smt. K.V.Vedavathi W/o. Late M.K.Puttalingaiah, Aged about 86 years. Resident of No: 176, 44th Cross, 8th Block, Jayanagar, Bangalore-560082.
...Petitioner
And:
Nil ...Respondents
PUBLIC NOTICE

ಸಂಯುಕ್ತ ಕರ್ನಾಟಕ

| Date | 07-12-2020 |
|---|---|
| Page No | 10 |

# ಪಾಲಿಕೆ ಚುನಾವಣೆ ಮುಂದೂಡಿಕೆ ಸುಳಿವು

**ಸಂ.ಕ. ಸಮಾಚಾರ ಬೆಂಗಳೂರು**

ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆಗೆ ವಿಶೇಷವಾದ ಕಾಯ್ದೆ ಜಾರಿ ಮಾಡಲಿದ್ದು, ನೂತನ ಕಾಯ್ದೆ ಅನ್ವಯವೇ ಚುನಾವಣೆ ನಡೆಯಲಿದೆ ಎಂದು ಪರೋಕ್ಷವಾಗಿ ಬಿಬಿಎಂಪಿ ಚುನಾವಣೆಯನ್ನು ಸರ್ಕಾರ ಮುಂದೂಡುವ ಸುಳಿವನ್ನು ಕಂದಾಯ ಸಚಿವ ಆರ್. ಅಶೋಕ್ ನೀಡಿದ್ದಾರೆ.

ಸೋಮವಾರದಿಂದ ಆರಂಭವಾಗಲಿರುವ ಅಧಿವೇಶನದಲ್ಲಿ ಬಿಬಿಎಂಪಿಗೆ ತಿದ್ದುಪಡಿ ಮಾಡಿರುವ ಕಾಯ್ದೆಯನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡಿಸಿ ಅಂಗೀಕಾರ ಪಡೆಯಲಿದ್ದೇವೆ ಎನ್ನುವ ಮೂಲಕ ಚುನಾವಣೆ ಮುಂದೂಡಿಕೆಯಾಗುವ ಸುಳಿವು ಕೊಟ್ಟರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಬಿಎಂಪಿಗೆ ಹಾಲಿ ಇರುವ ಕಾಯ್ದೆಯನ್ನು ತಿದ್ದುಪಡಿ ಮಾಡಲಾಗಿದ್ದು, ಈಗಿರುವ 198 ವಾರ್ಡುಗಳ ಬದಲಿಗೆ 243 ವಾರ್ಡ್‌ಗಳಾಗಿ ಬದಲಾಗಲಿವೆ. ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಸೂದೆ ಅಂಗೀಕಾರವಾದರೆ ಪಾಲಿಕೆಗೆ ಈಗಿರುವ ಸ್ಥಾನ–ಮಾನ ಬದಲಾಗಲಿದೆ. ತಿದ್ದುಪಡಿ ಮಾಡಲು ರಚನೆಯಾಗಿದ್ದ ಸಮಿತಿಯು



ಈಗಾಗಲೇ ಸರ್ಕಾರಕ್ಕೆ ವರದಿಯನ್ನು ಹಸ್ತಾಂತರ ಮಾಡಿದೆ. ಪುಸ್ತಕ ಅಧಿವೇಶನದಲ್ಲಿ ಇದು ಮಂಡನೆಯಾಗಿ ಕಾರ್ಯರೂಪಕ್ಕೆ ಬಂದರೆ ಹೊಸ ಕಾಯ್ದೆಯಂತೆ ಚುನಾವಣೆಗೆ ಹೋಗಬೇಕಾಗುತ್ತದೆ ಎಂದು ತಿಳಿಸಿದರು.

ಬಿಬಿಎಂಪಿ ಚುನಾವಣೆಯನ್ನು ಸರ್ಕಾರ ಮುಂದೂಡುತ್ತದೆಯೇ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಈ ಸಂಬಂಧ ಕಾನೂನು ತಜ್ಞರ ಜತೆ ಚರ್ಚೆ ಮಾಡಲಾಗುವುದು. ಕಾಯ್ದೆ ಅಂಗೀಕಾರವಾದರೆ ಆ ಪ್ರಕಾರವೇ ಚುನಾವಣೆ ನಡೆಸಬೇಕು. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷರು, ಮುಖಂಡರು, ಬೆಂಗಳೂರು ಭಾಗದ ಸಚಿವರು, ಶಾಸಕರೊಂದಿಗೆ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಿದ್ದೇವೆ ಎಂದು

- ಬೆಂಗಳೂರಿಗೆ ಪ್ರತ್ಯೇಕ ಕಾಯ್ದೆ ಜಾರಿಗೆ ಸಿದ್ಧತೆ
- ಉಭಯಸದನಗಳಲ್ಲಿ ಮಸೂದೆ ಮಂಡನೆಗೆ ಚಿಂತನೆ
- ವಾರ್ಡ್‌ಗಳ ಸಂಖ್ಯೆ 243ಕ್ಕೇರಿಸಲು ಕಾಯ್ದೆಗೆ ತಿದ್ದುಪಡಿ

ಹೇಳಿದರು. ಬಿಬಿಎಂಪಿ ಚುನಾವಣೆ ಸಂಬಂಧ ಎರಡು ದಿನಗಳ ಹಿಂದೆಯಷ್ಟೇ ರಾಜ್ಯ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ದ್ವಿಸದಸ್ಯ ಪೀಠ ನಾಲ್ಕು ವಾರದೊಳಗೆ ಮೀಸಲಾತಿ ಹೊರಡಿಸಿ ಆರು ವಾರದೊಳಗೆ ಚುನಾವಣೆ ನಡೆಸಬೇಕೆಂದು ಆದೇಶ ನೀಡಿದೆ. ಇದರ ಬೆನ್ನಲ್ಲೇ ಬೆಂಗಳೂರಿಗೆ ಹೊಸ ಕಾಯ್ದೆ ಜಾರಿಗೆ ತರುವ ಅವಶ್ಯಕತೆಯನ್ನು ಸರ್ಕಾರ ತಿಳಿಸಿರುವುದರಿಂದ ರಾಜ್ಯ ಸರ್ಕಾರ ಹೈಕೋರ್ಟ್ ನೀಡಿರುವ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಮೆಟ್ಟಿಲೇರಿರುವುದು ಖಚಿತವಾಗಿದೆ.

ಹೊಸ ದಿಗಂತ

| Date | 07-12-2020 |
| --- | --- |
| Page No | 12 |


### ಪಾಲಿಕೆಯಿಂದ ಹಗಲುದರೋಡೆ: ಸಾರ್ವಜನಿಕರ ಆರೋಪ

# ಕೋವಿಡ್‌ನಿಂದ ಹೈರಾಣಾದ ಜನರ ಮೇಲೆ ಆರ್ಥಿಕ ಹೊರೆ

**ಬೆಂಗಳೂರು:** ಕೊರೋನಾ ಲಾಕ್‌ಡೌನ್ ನಂತರದಲ್ಲಿ ವ್ಯಾಪಾರ ವಹಿವಾಟು ಇಲ್ಲದೇ ಹೈರಾಣಾಗಿರುವ ನಗರ ಜನರ ಮೇಲೆ ವಿದ್ಯುತ್ ದರ ಏರಿಕೆ, ತೈಲ ಬೆಲೆ ಹೆಚ್ಚಳ, ಮಾಸ್ಕ್ ಧರಿಸದ್ದಕ್ಕೆ ದಂಡ ಸೇರಿದಂತೆ ಆರ್ಥಿಕ ಹೊರೆ ಹೆಚ್ಚುತ್ತಲೇ ಇದ್ದು, ಬಿಬಿಎಂಪಿಯಿಂದ ದಂಡದ ಹೆಸರಿನಲ್ಲಿ ಹಗಲು ದರೋಡೆಗಿಳಿದಿದೆ ಎಂದು ಸಾರ್ವಜನಿಕ ವಲಯದಲ್ಲಿ ಆಕ್ರೋಶ ವ್ಯಕ್ತವಾಗಿದೆ.

ಪಾಲಿಕೆ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಾದ ಹೋಟೆಲ್, ಕಲ್ಯಾಣಮಂಟಪಗಳು, ಚಿತ್ರಮಂದಿರ, ಮಾಲ್ ಅಥವಾ ಅಂಗಡಿ ಮುಂಗಟ್ಟುಗಳ ಮಾಲೀಕರು ಅವರ ಅವರಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರು ಮಾಸ್ಕ್ ಧರಿಸಿ ಒಳ ಪ್ರವೇಶಿಸುವುದು ಹಾಗೂ ಸಾಮಾಜಿಕ ಅಂತರ ಕಾಪಾಡುವ ಮಾಲೀಕರು ಪರಿಶೀಲಿಸಿಕೊಳ್ಳಬೇಕು. ತಪ್ಪಿದರೆ ಕರ್ನಾಟಕ ಸಾಂಕ್ರಾಮಿಕ ರೋಗಗಳ ಸುಗ್ರೀವಾಜ್ಞೆ 2020ರ ತಿದ್ದುಪಡಿ ಆದೇಶದನ್ವಯ ವಿವಿಧ ಮಾಲೀಕರಿಗೆ ಪಾಲಿಕೆ ದಂಡ ವಿಧಿಸಲು ಕ್ರಮಕೈಗೊಂಡಿದೆ. ಈಗಾಗಲೇ ಮಾಸ್ಕ್ ದಂಡ ಸಾಮಾಜಿಕ ಅಂತರ ಹೇಳಿಕೊಂಡು ಮಾರ್ಷಲ್ ಮೂಲಕ ಸಾಮಾನ್ಯ ಜನರ ಸುಲಿಗೆ ಮಾಡುತ್ತಿದ್ದಾರೆ. ದಂಡದ ಹೆಸರಲ್ಲಿ ಮಾರ್ಷಲ್‌ಗಳಿಗೆ ಏನಾದರೂ ಬಿಬಿಎಂಪಿ ಸಂಬಳ ನೀಡುತ್ತಿದ್ದಾರೆ? ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿರುವ ಪ್ರಶ್ನೆಯಾಗಿದೆ.



200 ರೂಪಾಯಿ ಮಾಸ್ಕ್ ದಂಡಕ್ಕೇ ಕಟ್ಟಲಾರದ ಸಾರ್ವಜನಿಕರು ಪ್ರತಿದಿನ ಹಿಡಿಶಾಪ ಹಾಕುತ್ತಿದ್ದಾರೆ.

ಲಾಕ್‌ಡೌನ್‌ನಿಂದ ಚೇತರಿಸಿಕೊಂಡು ವ್ಯಾಪಾರ ವಹಿವಾಟು ಮೊದಲಿನಂತೆ ಆಗಲು ಪ್ರಾರಂಭವಾಗುತ್ತಿದ್ದಂತೆ ಬಿಬಿಎಂಪಿ ಸಾಮಾಜಿಕ ಅಂತರದ ನೆಪವೊಡ್ಡಿ ದುಬಾರಿ ದಂಡ ವಸೂಲಿಯ ಮತ್ತೆ ಇಳಿದಿದೆ. ಬಿಬಿಎಂಪಿ ಹೊಸ ಮಾರ್ಗದಲ್ಲಿ ವಸೂಲಿಗೆ ಇಳಿದಿದೆ. ಸ್ವಸಹಾಯಪದ್ಧತಿಯ ಹೋಟೆಲ್‌ಗಳು, ದರ್ಶಿನಿಗಳು, ಆಹಾರ ಮಳಿಗೆಗಳು, ಸಣ್ಣ ಅಂಗಡಿ ಮುಂಗಟ್ಟುಗಳು, ಬೀದಿಬದಿ ತ್ವರಿತ ಆಹಾರ ಮಳಿಗೆ ಸೇರಿದಂತೆ ಎಲ್ಲಾ ವ್ಯಾಪಾರಿ ಮಳಿಗೆ ಮೇಲೆ 5000 ಸಾವಿರ ರಿಂದ ಹಿಡಿದು ಒಂದು ಲಕ್ಷ ದಂಡ ವಿಧಿಸಲು ಮುಂದಾಗಿ ರುವುದಕ್ಕೆ ಸಾರ್ವಜನಿಕ ವಲಯ ಭಾರಿ ಟೀಕೆ ವ್ಯಕ್ತವಾಗಿದೆ.

### ತ್ಯಾಜ್ಯ ಸಂಗ್ರಹಿಸಿ ಗಮನ ಸೆಳೆದ ಬಿಬಿಎಂಪಿ ಆಯುಕ್ತ

**ಬೆಂಗಳೂರು:** ವಾಯುವಿಹಾರಕ್ಕೆ ತೆರಳಿದ್ದ ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್ ವಸಂತ ನಗರದ ರಸ್ತೆಯ ಬದಿಯಲ್ಲಿ ಬಿದ್ದಿರುವ ಪ್ಲಾಸ್ಟಿಕ್ ಸೇರಿದಂತೆ ತ್ಯಾಜ್ಯವನ್ನು ಗೋಣಿ ಚೀಲವೊಂದರಲ್ಲಿ ಸಂಗ್ರಹಿಸಿ ಗಮನಸೆಳೆದರು. ಈ ವೇಳೆ ಮಾತನಾಡಿದ ಅವರು, ನಗರದ ಜನರು ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿ ಇಟ್ಟುಕೊಂಡು ತಮ್ಮ ಆರೋಗ್ಯದ ಕಡೆ ಹೆಚ್ಚಿನ ಗಮನ ನೀಡಬೇಕು. ಆರೋಗ್ಯವೇ ಭಾಗ್ಯ ಎಂಬಂತೆ ಮನುಷ್ಯ ಆರೋಗ್ಯವಾಗಿದ್ದರೆ ಜೀವನ ಗುರಿ ಸಾಧಿಸಲು ಸಾಧ್ಯ. ಸಮಾಜ ಸ್ವಚ್ಛತೆ ಕಾಪಾಡುವುದರಿಂದ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದರು.

ಹೊಸ ದಿಗಂತ

| Date | 07-12-2020 |
| --- | --- |
| Page No | 12 |

# ನೂತನ ಕಾಯ್ದೆ ಜಾರಿಗೆ ಸರ್ಕಾರ ಬದ್ಧ: ಅಶೋಕ



**ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಕೆ ಸುಳಿವು ನೀಡಿದ ಸಚಿವ**

> ಬೆಂಗಳೂರಿಗೆ ವಿಶೇಷ ಕಾಯ್ದೆ ರೂಪಿಸಿ ಸದನದಲ್ಲಿ ಮಂಡಿಸಲಾಗುವುದು. ಹೆಚ್ಚು ವಾರ್ಡ್‌ಗಳ ಮೂಲಕವೇ ಚುನಾವಣೆಗೆ ಹೋಗುವುದು ನಮ್ಮ ಉದ್ದೇಶ.
> ■ ಆರ್.ಅಶೋಕ, ಸಚಿವ

**ಬೆಂಗಳೂರು:** ಬಿಬಿಎಂಪಿಯ ವಾರ್ಡ್, ವಲಯ ಹೆಚ್ಚಿಸಿ ನೂತನ ಕಾಯ್ದೆ ಜಾರಿ ಮಾಡಲು ಸರ್ಕಾರ ಬದ್ಧವಾಗಿದೆ ಎನ್ನುವ ಮೂಲಕ ಚುನಾವಣೆ ಮುಂದೂಡಿಕೆ ಮತ್ತು ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಹೋಗುವ ಸುಳಿವನ್ನು ಕಂದಾಯ ಸಚಿವ ಆರ್.ಅಶೋಕ ನೀಡಿದ್ದಾರೆ.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿಗೆ ವಿಶೇಷ ಕಾಯ್ದೆ ಜಾರಿಗೆ ತರಲಾಗುತ್ತದೆ. ವಾರ್ಡ್‌ಗಳ ಸಂಖ್ಯೆಯನ್ನು ಹೆಚ್ಚಳ ಮಾಡುವ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಚುನಾವಣೆ ನಡೆಸಬೇಕಾಗುತ್ತದೆ ಎಂದು ಕಾನೂನು ತಜ್ಞರು ಸ್ಪಷ್ಟಪಡಿಸಿದ್ದು, ಇದನ್ನೇ ಕೋರ್ಟ್‌ಗೂ ಮನವರಿಕೆ ಮಾಡಿಕೊಡುತ್ತೇವೆ ಎಂದರು.

**ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ಸುಳಿವು**

ಆರು ವಾರದೊಳಗೆ ಈಗಿರುವ ಮೀಸಲಾತಿಯಂತೆಯೇ ಬಿಬಿಎಂಪಿಯ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ಆದೇಶ ನೀಡಿದ್ದು, ಆದೇಶದ ವಿರುದ್ಧ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ತಯಾರಿ ನಡೆಸಿದೆ. ಈ ಮೂಲಕ ಚುನಾವಣೆ ಮುಂದೂಡುವ ಪರೋಕ್ಷ ಸುಳಿವನ್ನು ಸಚಿವ ಅಶೋಕ ನೀಡಿದ್ದಾರೆ.

ಹೊಸ ದಿಗಂತ

| Date | 07-12-2020 |
| --- | --- |
| Page No | 12 |

# ಅಂಬೇಡ್ಕರ್ ಪುತ್ಥಳಿಗೆ ಗಣ್ಯರಿಂದ ಪುಷ್ಪನಮನ



ಬೆಂಗಳೂರು: ಭಾರತ ರತ್ನ ಡಾ. ಬಿ.ಆರ್.ಅಂಬೇಡ್ಕರ್‌ರವರ 64ನೇ ವರ್ಷದ ಮಹಾ ಪರಿನಿರ್ವಾಣ ದಿನಾಚರಣೆಯ ಅಂಗವಾಗಿ ಪಾಲಿಕೆ ಕೇಂದ್ರ ಕಚೇರಿ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಆಡಳಿತಾಧಿಕಾರಿ ಗೌರವ್ ಗುಪ್ತಾ ಹಾಗೂ ಆಯುಕ್ತ ಮಂಜುನಾಥ್ ಪ್ರಸಾದ್ ಮಾಲಾರ್ಪಣೆ ಮಾಡಿ ಪುಷ್ಪನಮನ ಸಲ್ಲಿಸಿದರು. ಈ ವೇಳೆ ಮಾತನಾಡಿದ ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತಾ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ದೇಶಕ್ಕೆ ನೀಡಿರುವ ಸಂವಿಧಾನ ಅತಿ ಶ್ರೇಷ್ಠವಾಗಿದೆ. ಅಂಬೇಡ್ಕರ್ ಕೇವಲ ಒಂದು ಜನಾಂಗಕ್ಕೆ ಸೀಮಿತವಾಗಿಲ್ಲ, ಎಲ್ಲರ ಉದ್ಧಾರಕ್ಕಾಗಿ ಸಂವಿಧಾನ ರಚಿಸಿ ದೇಶಕ್ಕೆ ನೀಡಿದ್ದಾರೆ ಎಂದರು. ವಿಶೇಷ ಆಯುಕ್ತರಾದ(ಆಡಳಿತ) ಜೆ.ಮಂಜುನಾಥ್, ರಾಜೇಂದ್ರ ಚೋಳನ್, ಉಪ ಆಯುಕ್ತ(ಆಡಳಿತ) ಲಿಂಗಮೂರ್ತಿ ಇದ್ದರು.

ಹೊಸ ದಿಗಂತ

| Date | 07-12-2020 |
| --- | --- |
| Page No | 12 |

# ಎಎಪಿಯಿಂದ ಗೊರಕೆ ಸಾಕು ಪೊರಕೆ ಬೇಕು ಅಭಿಯಾನ



**ಬೆಂಗಳೂರು:** ಬಿಬಿಎಂಪಿ ಹಾಗೂ ರಾಜ್ಯ ಬಿಜೆಪಿ ಸರ್ಕಾರದ ವೈಫಲ್ಯಗಳನ್ನು ಮನೆ, ಮನೆಗೆ ತಲುಪಿಸುವ ಗೊರಕೆ ಸಾಕು ಪೊರಕೆ ಬೇಕು ಬೃಹತ್ ಅಭಿಯಾನವನ್ನು ಪ್ರತಿ ವಾರ ಮಾಡಲಿದ್ದೇವೆ ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ತಿಳಿಸಿದರು. ಮಂಜುನಾಥ ನಗರದ ನಿವಾಸಿಗಳಿಗೆ ಪಕ್ಷದ ಬಾವುಟ ನೀಡುವುದರ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಬೆಂಗಳೂರಿನ ಜನತೆ ಮೂರು ಪಕ್ಷಗಳ ಕೆಟ್ಟ ಆಡಳಿತದಿಂದ ಬೇಸತ್ತು ಹೋಗಿದ್ದಾರೆ. ಹೀಗಾಗಿ, ಬಿಬಿಎಂಪಿಯ ಹಾಗೂ ರಾಜ್ಯ ಬಿಜೆಪಿ ಸರ್ಕಾರದ ವೈಫಲ್ಯಗಳನ್ನು ಮನೆ, ಮನೆಗೆ ತಲುಪಿಸುವ ಅಭಿಯಾನ ಮಾಡಲಿದ್ದೇವೆ ಎಂದರು. ಬೆಂಗಳೂರು ನಗರ ಅಧ್ಯಕ್ಷ ಮೋಹನ್ ದಾಸರಿ, ಖಾಸಗಿ ಸಂಸ್ಥೆ ನಡೆಸಿದ ಸಮೀಕ್ಷೆ ಪ್ರಕಾರ ಶೇ 70 ರಷ್ಟು ಬೆಂಗಳೂರಿನ ಜನತೆ ಬೆಂಗಳೂರಿನಲ್ಲಿ ದೆಹಲಿ ಮಾದರಿ ಆಮ್ ಆದ್ಮಿ ಪಕ್ಷದ ಸರ್ಕಾರ ಇರಬೇಕು. ಈ ನಂಬಿಕೆಯನ್ನು ನಾವು ಅಧಿಕಾರಕ್ಕೆ ಬಂದರೆ ಉಳಿಸಿಕೊಳ್ಳುತ್ತೇವೆ ಎಂದು ಭರವಸೆ ನೀಡಿದರು.

ಜಯ ಕಿರಣ
JAYAKIRANA MORNING DAILY ವಸ್ತುನಿಷ್ಠ ಸುದ್ದಿ-ಮಾಹಿತಿಗಳ ಪ್ರತಿಬಿಂಬ

| Date | 06-12-2020 |
|---|---|
| Page No | 1 |

# ಹೈಕೋರ್ಟ್ ಆದೇಶಕ್ಕೆ ಸರ್ಕಾರ ಕವಡೆ ಕಾಸಿನ ಕಿಮ್ಮತ್ತೂ ನೀಡಲ್ಲವಂತೆ! ಶತಾಯಗತಾಯ ಚುನಾವಣೆ ಮುಂದೂಡಲು ಸುಪ್ರೀಂಕೋರ್ಟ್‌ಗೆ ಮೊರೆ

ಬೆಂಗಳೂರು: ಇದಕ್ಕೆ ಜುಟ್ಟು ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಅನ್ನೋದು! ಶತಾಯಗತಾಯ ಚುನಾವಣೆ ಮುಂದೂಡಲು ಪ್ರಯತ್ನಿಸಿದ ಸರ್ಕಾರಕ್ಕೆ ಹೈಕೋರ್ಟ್ ಕಪಾಳಮೋಕ್ಷ ಮಾಡಿ 6 ವಾರಗಳ ಅವಧಿಯಲ್ಲೇ ಮೀಸಲಾತಿ ಹಾಗೂ ಚುನಾವಣೆ ದಿನಾಂಕ ನಿಗದಿ ಮಾಡಲು ಸೂಚಿಸಿದೆ. ಹಾಗೂ ಚುನಾವಣಾ ಆಯೋಗಕ್ಕೆ ಖರ್ಚು ವೆಚ್ಚವನ್ನು ಭರಿಸಲು ಆದೇಶ ನೀಡಿದೆ.

ತೀವ್ರ ಮುಖಭಂಗಕ್ಕೊಳಗಾಗಿರುವ ಸರ್ಕಾರ ಈಗಲೂ ಸುಗ್ರೀವಾಜ್ಞೆಯ ಆದೇಶವನ್ನೇ ನೆಪ ಮಾಡಿಕೊಂಡು ಅಧಿವೇಶನದಲ್ಲಿ



ಹಾಲಿ ಸಭಾಪತಿ ಪ್ರತಾಪಚಂದ್ರ ಶೆಟ್ಟಿ ವಿರುದ್ಧ ಹಕ್ಕುಚ್ಯುತಿಗೆ ಕೈ ಇಟ್ಟಿದೆ. ವಿಧಾನಸಭೆಯಲ್ಲಿ 20 ಶಾಸಕರ ಸಮಿತಿ ನಿಯೋಗ ನೀಡಿದ ವರದಿಯ ಮೇರೆಗೆ 243 ವಾರ್ಡ್‌ಗಳ ಮರುಪರಿಷ್ಕರಣೆಗೆ ವಿಧಾನ ಪರಿಷತ್ ಅಂಗಳದಲ್ಲೇ ಮತ್ತೆ ಚೆಂಡಾಟವಾಡಲು ನಿರ್ಧರಿಸಿದಂತಿದೆ. ವಿಧಾನಸಭೆಯಲ್ಲಿ ಅನುಮೋದನೆ ದೊರೆತಿದ್ದು, ಇದೀಗ ಮೇಲ್ಮನೆಯಲ್ಲಿ ಕಾಂಗ್ರೆಸ್ ಅನ್ನು ಅಧಿಕಾರದಿಂದ ಕೆಳಗಿಳಿಸಿ, ಬಿಜೆಪಿ ಅಧಿಕಾರದ ಗದ್ದುಗೆಗೇರಿದರೆ ಜೆಡಿಎಸ್ ತಟಸ್ಥವಾಗಿ ಉಳಿದು ಬಿಜೆಪಿಯನ್ನು ಬೆಂಬಲಿಸಿದೆ. ಸುಗ್ರೀವಾಜ್ಞೆಯ ಆದೇಶವನ್ನು ಬಿಜೆಪಿ ಮೇಲ್ಮನೆಯಲ್ಲಿ ಅಂಗೀಕಾರ ಮಾಡಿಕೊಂಡು ಹೊಸ ಲೆಕ್ಕಾಚಾರಕ್ಕೆ ಅಣಿಯಾಗಲಿದೆ. ಅದರ ಬೆನ್ನಲ್ಲೇ ಸುಪ್ರೀಂ ಕೋರ್ಟ್‌ನಲ್ಲೂ ಇದೇ ನೆಪವನ್ನು ಕಾರಣವಾಗಿಟ್ಟುಕೊಂಡು ಚುನಾವಣೆಯನ್ನು ಮುಂದೂಡಲು ಮನವಿ ಸಲ್ಲಿಸಲಿದೆ.

ಅಳಿದೂ ಸುರಿದು ಸುಪ್ರೀಂ ಕೋರ್ಟ್ ಮುಂದೆ ಮಂಡಿಸಿದರೂ 3-4 ತಿಂಗಳ ಅವಧಿಯೊಳಗೆ ಹೈಕೋರ್ಟ್ ಆದೇಶವನ್ನೇ ಎತ್ತಿ ಹಿಡಿದು ಸುಪ್ರೀಂ ಕೋರ್ಟ್ ಸಹ ಚುನಾವಣೆಗೆ ಆದೇಶ ನೀಡಿದರೂ ಅಚ್ಚರಿಯಿಲ್ಲ. ಅಲ್ಲಿಗೆ 2021 ಮೇ-ಜೂನ್ ವೇಳೆಗೆ ಶತಾಯಗತಾಯ ಚುನಾವಣೆ ನಡೆಸಲೇಬೇಕಾಗುತ್ತದೆ. ಅಲ್ಲಿಗೆ (ಕೊನೆಯ ಚುಟುಕೈ)

## ಸುಪ್ರೀಂ ಕೋರ್ಟ್‌ಗೆ ಮೊರೆ

ಅಧಿಕಾರದಲ್ಲಿರುವ ಶಾಸಕರು ಹಾಗೂ ಸಚಿವರಿಗೆ ಭರ್ಜರಿ ಹೋಳಿಗೆ ಊಟ...! 21 ಸಾವಿರ ಕೋಟಿಗೂ ಹೆಚ್ಚಿನ ಅರೆಬರೆ ಕಾಮಗಾರಿಗಳು, ರಸ್ತೆ, ಮೂಲಭೂತ ಸೌಕರ್ಯಗಳನ್ನೊಳಗೊಂಡ ಐಟಂವಾರು ಪ್ಯಾಕೇಜ್ ವರ್ಕ್‌ಗಳು ಪ್ರಗತಿ ಹಂತದಲ್ಲಿದ್ದು, ಅವುಗಳ ಬಿಲ್ ಕಮೀಷನ್ 6 ತಿಂಗಳ ಅವಧಿಯಲ್ಲಿ ನುಂಗಿ ನೊಣೆದ ನಂತರವೇ ಚುನಾವಣೆಗೆ ಚಾಲನೆ ನೀಡಬೇಕೆಂಬುದು ಶಾಸಕ, ಸಚಿವರ 'ಹಕ್ಕೊತ್ತಾಯ'. ಕಾರಣ ಕಾರ್ಪೊರೇಟರುಗಳು ಹೋಳಿಗೆ ಊಟಕ್ಕೆ 'ಬಾಯಿ' ಹಾಕಿಬಿಟ್ಟರೆ...!? ಪಾಪ, ಸರ್ಕಾರ ಕೂಡ ಈ ಮನವಿಗೆ ಮಣಿದು ಯಾರಿಗೂ ಬೇಡದ, ಒಲ್ಲದ ಪಾಲಿಕೆ ಚುನಾವಣೆಯನ್ನು ನಡೆಸಲು ಗಡುವು ತೆಗೆದುಕೊಳ್ಳುವುದು ಶತಸ್ಸಿದ್ಧ.

ಸಂಜೆವಾಣಿ
1982

| Date | 06-12-2020 |
| --- | --- |
| Page No | 2 |

# ಪಾರ್ಕಿಂಗ್ ಶುಲ್ಕ ಪ್ರಸ್ತಾವನೆ ಎಎಪಿ ವಿರೋಧ

ಬೆಂಗಳೂರು,ಡಿ.6–ನಗರದಲ್ಲಿ ವಾಹನ ನಿಲುಗಡೆಗೆ ಶುಲ್ಕ ವಿಧಿಸುವ ಬಿಬಿಎಂಪಿ ಆಯುಕ್ತರ ಪ್ರಸ್ತಾವನೆಯನ್ನು ಆಮ್ ಆದ್ಮಿ ಪಕ್ಷ (ಎಎಪಿ) ತೀವ್ರವಾಗಿ ವಿರೋಧಿಸಿದೆ.

ವಾಹನಗಳ ನಿಲುಗಡೆ ಶುಲ್ಕ ವಿಧಿಸಲು ಬಿಬಿಎಂಪಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ವಾಹನ ಸವಾರರ ಜೇಬಿಗೆ ಕತ್ತರಿ ಹಾಕಲು ಮುಂದಾಗಿದ್ದು ಮುಂದಿನ ದಿನಗಳಲ್ಲಿ ಉಸಿರಾಡುವುದಕ್ಕೂ ಬಿಬಿಎಂಪಿ ಶುಲ್ಕ ವಿಧಿಸಬಹುದು ಎಂದು ಪಕ್ಷದ ನಗರ ಉಪಾಧ್ಯಕ್ಷ ಸುರೇಶ್ ರಾಥೋಡ್ ಪತ್ರಿಕಾಗೋಷ್ಠಿಯಲ್ಲಿ ವ್ಯಂಗ್ಯವಾಡಿದರು.

ನಗರದಲ್ಲಿ ದಿನದಿಂದ ದಿನಕ್ಕೆ ವಾಹನಗಳ ಸಂಖ್ಯೆ ಹೆಚ್ಚಳವಾಗುತ್ತಿದ್ದು, ಇದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಪಾರ್ಕಿಂಗ್ ಶುಲ್ಕ ಹೆಚ್ಚಳ ಮಾಡಲಾಗುತ್ತಿದೆ ಎನ್ನುವುದೇ ಅತ್ಯಂತ ಮೂರ್ಖತನದ ಹಾಗೂ ಅವೈಜ್ಞಾನಿಕ ನಿರ್ಧಾರ ಎಂದರು.

ಈಗಾಗಲೇ ನಗರದ ಅನೇಕ ಕಡೆ ಪಾರ್ಕಿಂಗ್ ದಂಧೆ ನಡೆಯುತ್ತಿದ್ದು ಇದನ್ನೇ ಸರಿಯಾಗಿ ನಿಭಾಯಿಸಲು ಕಷ್ಟ ಪಡುತ್ತಿರುವ ಸರ್ಕಾರ ಇನ್ನು ಇಡೀ ಬೆಂಗಳೂರನ್ನು ಸುಧಾರಿಸುವುದಕ್ಕೆ ಸಾಧ್ಯವೇ ಎಂದು ಹೇಳಿದರು.

ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಮಾತನಾಡಿ ಸರ್ಕಾರದ ಒಳ ಜಗಳದಿಂದ ಆಡಳಿತ ಹಳಿ ತಪ್ಪಿದೆ. ಈ ಗಮನವನ್ನು ಬೇರೆಡೆ ಸೆಳೆಯಲು ಪ್ರತಿದಿನ ಇಂತಹ ಮೂರ್ಖ ಕಾನೂನುಗಳನ್ನು ಸರ್ಕಾರ ಚರ್ಚೆಗೆ ತರುತ್ತಿದೆ ಎಂದರು.

ಬೆಂಗಳೂರಿನಲ್ಲಿ 1.3 ಕೋಟಿ ಜನಸಂಖ್ಯೆ ಇದ್ದು ವಾಹನಗಳ ಸಂಖ್ಯೆಯೇ 95 ಲಕ್ಷವಿದೆ. ಈ ನಿರ್ಧಾರದಿಂದ ಹೆಚ್ಚು ತೊಂದರೆಗೆ ಒಳಗಾಗುವರು ನಗರದಲ್ಲಿರುವ ಮಧ್ಯಮ ವರ್ಗ ಹಾಗೂ ಬಡವರು. ಇವರೆಲ್ಲ ಸ್ವಂತ ವಾಹನ ಹೊಂದಬಾರದೆ ಮಾನ್ಯ ಮುಖ್ಯಮಂತ್ರಿಗಳೇ, ಹಾಗಾದರೆ ಈ ನಗರ ಕೇವಲ ದುಡ್ಡು ಇದ್ದವರಿಗೆ ಮಾತ್ರವೇ ಎಂದು ಕಿಡಿಕಾರಿದರು.

ಸಂಜೆವಾಣಿ 1982

| Date | 06-12-2020 |
| --- | --- |
| Page No | 3 |



ನಗರದ ಬಿಬಿಎಂಪಿ ಕೇಂದ್ರ ಕಚೇರಿಯ ಗಾಜಿನಮನೆಯಲ್ಲಿಂದು ಏರ್ಪಡಿಸಿದ್ದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಪರಿನಿರ್ವಾಣ ದಿನ ಕಾರ್ಯಕ್ರಮದಲ್ಲಿ ಆಡಳಿತಾಧಿಕಾರಿ ಗೌರವ್ ಗುಪ್ತ, ಆಯುಕ್ತ ಮಂಜುನಾಥ್ ಪ್ರಸಾದ್, ಬೌದ್ಧ ಬಿಕ್ಕುಗಳು ಭಾಗವಹಿಸಿ, ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಸಂಜೆವಾಣಿ
1982

| Date | 06-12-2020 |
|---|---|
| Page No | 3 |

# ಕೊರೊನಾ ನಿಯಮ ಉಲ್ಲಂಘಿಸಿದರೆ ಪಾಲಿಕೆ ವ್ಯಾಪ್ತಿಯಲ್ಲಿ ದಂಡ ದುಪ್ಪಟ್ಟು

ಬೆಂಗಳೂರು, ಡಿ.6–ಕೊರೊನಾ ಸೋಂಕಿನ ಎರಡನೇ ಅಲೆಯ ಭೀತಿ ಹಿನ್ನೆಲೆ ಬಿಬಿಎಂಪಿ ವ್ಯಾಪ್ತಿಯಲ್ಲಿ ದಂಡದ ಮೊತ್ತವನ್ನು ಮತ್ತಷ್ಟು ಹೆಚ್ಚಳ ಮಾಡಲಾಗಿದ್ದು, ಕಲ್ಯಾಣ ಮಂಟಪ, ಸಮುದಾಯ ಭವನ, ಸಾರ್ವಜನಿಕ ಸ್ಥಳ, ಸ್ಟಾರ್ ಹೊಟೇಲ್‌ಗಳಲ್ಲಿ ಕೋವಿಡ್–19 ಮಾರ್ಗಸೂಚಿಗಳನ್ನು ಉಲ್ಲಂಘಿಸಿದರೆ 1 ಲಕ್ಷ ರೂ. ದಂಡ ವಸೂಲಿಗೆ ಆದೇಶಿಸಲಾಗಿದೆ.

ಕರ್ನಾಟಕ ಸಾಂಕ್ರಾಮಿಕ ರೋಗಗಳ ಸುಗ್ರೀವಾಜ್ಞೆ 2020ರ ಸೆಕ್ಷನ್ 04, 15 ಹಾಗೂ 17ರ ಅನ್ವಯ ಸಾರ್ವಜನಿಕ ಸ್ಥಳಗಳಲ್ಲಿ ಸುರಕ್ಷಿತ ಅಂತರ ಕಾಪಾಡಿಕೊಳ್ಳುವ ಹಾಗೂ ಮಾಸ್ಕ್ ಧರಿಸುವ ಕುರಿತಂತೆ ನಿಯಮಗಳನ್ನು ರೂಪಿಸಿದ್ದು, ಈ ನಿಯಮಗಳನ್ನು ಉಲ್ಲಂಘನೆ ಮಾಡಿದಲ್ಲಿ ದಂಡ ವಿಧಿಸುವ ನಿಯಮಗಳಿಗೆ ತಿದ್ದುಪಡಿ ತರಲಾಗಿದೆ ಎಂದು ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಆದೇಶದಲ್ಲಿ ತಿಳಿಸಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯ ಹೋಟೆಲ್‌ಗಳು, ಕಲ್ಯಾಣ ಮಂಟಪಗಳು, ಚಿತ್ರಮಂದಿರ, ಮಾಲ್‌ಗಳು, ಸಭೆ ಸಮಾರಂಭಗಳು, ಅಂಗಡಿ ಮುಂಗಟ್ಟುಗಳ ಮಾಲೀಕರು ತಮ್ಮ ಆವರಣಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರು ಮಾಸ್ಕ್ ಧರಿಸುವ ಕುರಿತು ಪರಿಶೀಲನೆ ಮಾಡಬೇಕು. ತಪ್ಪಿದಲ್ಲಿ ಮಾಲೀಕರಿಗೆ 1 ಲಕ್ಷದವರೆಗೆ ದಂಡ ವಿಧಿಸಲಾಗುವುದು. ಈ ವಿಷಯವಾಗಿ ಕಾರ್ಯನಿರತ ಆರೋಗ್ಯ ನಿರೀಕ್ಷಕರು ಹಾಗೂ ವಾರ್ಡ್ ಮಾರ್ಷಲ್‌ಗಳು ನಿಯಮ ಉಲ್ಲಂಘನೆ ಮಾಡಿದ್ದು ಕಂಡುಬಂದಲ್ಲಿ ದಂಡ ವಿಧಿಸಲು ಆಯುಕ್ತರು ಹೇಳಿದ್ದಾರೆ.

## ಯಾರಿಗೆ ಎಷ್ಟು ದಂಡ?

* ಸ್ವ ಸಹಾಯ ಪದ್ಧತಿಯ ಹೋಟೆಲ್‌ಗಳು, ದರ್ಶಿನಿಗಳು, ಆಹಾರ ಮಳಿಗೆಗಳು, ಸಣ್ಣ ಅಂಗಡಿ ಮುಂಗಟ್ಟುಗಳು, ಬೀದಿಬದಿ ತ್ವರಿತ ಆಹಾರ ಮಳಿಗೆಗಳು– 5 ಸಾವಿರ ರೂ.ದಂಡ

* ಹವಾ ನಿಯಂತ್ರಿತವಲ್ಲದ ರೆಸ್ಟೋರೆಂಟ್‌ಗಳು, ಪಾರ್ಟಿ ಹಾಲ್‌ಗಳು, ಅಂಗಡಿ ಮಳಿಗೆಗಳು, ಡಿಪಾರ್ಟ್‌ಮೆಂಟಲ್ ಸ್ಟೋರ್ ಗಳು, ಖಾಸಗಿ ಬಸ್ ನಿಲ್ದಾಣಗಳು, ಇತರೆ ಸಾರ್ವಜನಿಕ ಸ್ಥಳ– 25 ಸಾವಿರ ರೂ.ದಂಡ

* ಹವಾ ನಿಯಂತ್ರಿತ ರೆಸ್ಟೋರೆಂಟ್‌ಗಳು, ಪಾರ್ಟಿ ಹಾಲ್‌ಗಳು, ಅಂಗಡಿ ಮಳಿಗೆಗಳು, ಡಿಪಾರ್ಟ್‌ಮೆಂಟಲ್ ಸ್ಟೋರ್ ಗಳು, ಸಿನಿಮಾ ಹಾಲ್, ಮಲ್ಟಿಪ್ಲೆಕ್ಸ್, ಶಾಪಿಂಗ್ ಮಾಲ್‌ಗಳಿಗೆ 50 ಸಾವಿರ ರೂ.ದಂಡ

* ಸಾರ್ವಜನಿಕ ಸಭೆ, ಸಮಾರಂಭಗಳು, ಕಾರ್ಯಕ್ರಮಗಳು, ರ್‍ಯಾಲಿಗಳು, ಕೂಟಗಳು, ಇತ್ಯಾದಿ ಸಮಾರಂಭಗಳ ಆಚರಣೆ ಮಾಡಿದ ಆಯೋಜಕರಿಗೆ 50 ಸಾವಿರ ರೂ.ದಂಡ

* 3 ಸ್ಟಾರ್ ಮತ್ತು ಅದಕ್ಕೂ ಹೆಚ್ಚಿನ ಸ್ಟಾರ್ ಹೋಟೆಲ್‌ಗಳು, 500 ಹಾಗೂ ಅದಕ್ಕಿಂತ ಹೆಚ್ಚು ಆಸನ ಹೊಂದಿದ ಕಲ್ಯಾಣ ಮಂಟಪಗಳು, ಸಮುದಾಯ ಭವನಗಳಿಗೆ 1 ಲಕ್ಷರೂ. ದಂಡ

* ಮೇಲಿನ ಸ್ಥಳಗಳನ್ನು ಹೊರತುಪಡಿಸಿ ಇನ್ನಿತರೆ ಸಾರ್ವಜನಿಕ ಸ್ಥಳಗಳಲ್ಲಿ 10 ಸಾವಿರಕ್ಕಿಂತ ಹೆಚ್ಚು ದಂಡ

ಸಂಜೆವಾಣಿ
1982

| Date | 06-12-2020 |
|---|---|
| Page No | 7 |

# ಅಂಬೇಡ್ಕರ್ ಪ್ರತಿಮೆಗೆ ಗೌರವ್ ಗುಪ್ತಾ ನಮನ

ಬೆಂಗಳೂರು, ಡಿ.6– ಭಾರತ ರತ್ನ ಡಾ. ಬಿ.ಆರ್.ಅಂಬೇಡ್ಕರ್ ಅವರ 64ನೇ ವರ್ಷದ ಮಹಾ ಪರಿನಿಬ್ಬಾಣ ದಿನಾಚರಣೆ ಅಂಗವಾಗಿ ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ಅವರು ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಪುಷ್ಪನಮನ ಸಲ್ಲಿಸಲಿದರು.

ನಗರದಲ್ಲಿಂದು ಬಿಬಿಎಂಪಿ ಕೇಂದ್ರ ಕಚೇರಿಯ ಡಾ.ರಾಜ್ ಕುಮಾರ್ ಗಾಜಿನ ಮನೆಯಲ್ಲಿ ಅಂಬೇಡ್ಕರ್ ಅವರ 64ನೇ ವರ್ಷದ ಮಹಾ ಪರಿನಿಬ್ಬಾಣ ದಿನಾಚರಣೆಯ ವಿಶೇಷ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಈ ವೇಳೆ ಮಾತನಾಡಿದ ಆಡಳಿತಾಧಿಕಾರಿ, ಅಂಬೇಡ್ಕರ್ ನಿಧನರಾದ ಡಿ.6ರನ್ನು ಮಹಾ ಪರಿನಿಬ್ಬಾಣ ಅಥವಾ ಪರಿನಿರ್ವಾಣ ದಿನವನ್ನಾಗಿ ಆಚರಿಸುವ ಮೂಲಕ ವಿವಿಧೆಡೆ ಅವರ ಸ್ಮರಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ದೇಶಕ್ಕೆ ನೀಡಿರುವ ಸಂವಿಧಾನ ಅತಿ ಶ್ರೇಷ್ಠವಾದುದು. ಅಲ್ಲದೆ, ಅಂಬೇಡ್ಕರ್ ಕೇವಲ ಒಂದು ಜನಾಂಗಕ್ಕೆ ಸೀಮಿತವಾಗಿಲ್ಲ. ಅವರು ಎಲ್ಲಾರ ಉದ್ಧಾರಕ್ಕಾಗಿ ಸಂವಿಧಾನವನ್ನು ರಚಿಸಿ ದೇಶಕ್ಕೆ ನೀಡಿದ್ದಾರೆ ಎಂದು ಹೇಳಿದರು.

ಈ ವೇಳೆ ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್, ವಿಶೇಷ ಆಯುಕ್ತ(ಆಡಳಿತ) ಜೆ.ಮಂಜುನಾಥ್, ವಿಶೇಷ ಆಯುಕ್ತ(ಮಾಹಿತಿ ತಂತ್ರಜ್ಞಾನ) ರಾಜೇಂದ್ರ ಚೋಳನ್, ಉಪ ಆಯುಕ್ತ(ಆಡಳಿತ) ಲಿಂಗಮೂರ್ತಿ, ಮುಖ್ಯ ಅಭಿಯಂತರ(ಯೋಜನೆ) ರಮೇಶ್ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಸಂಜೆವಾಣಿ
1982

| Date | 06-12-2020 |
|---|---|
| Page No | 8 |

# ತ್ಯಾಜ್ಯ ಸಂಗ್ರಹಿಸಿದ ಪಾಲಿಕೆ ಆಯುಕ್ತ

ಬೆಂಗಳೂರು, ಡಿ.6– ಬೆಳ್ಳಂ ಬೆಳಗ್ಗೆ ವಾಯುವಿಹಾರಕ್ಕೆ ತೆರಳಿದ್ದ ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಅವರು ನಗರದ ರಸ್ತೆಯಲ್ಲಿ ಬಿದ್ದಿದ ತ್ಯಾಜ್ಯವನ್ನು ಸಂಗ್ರಹಿಸಿ, ಗಮನಸೆಳೆಸಿದ್ದಾರೆ.



ನಗರದಲ್ಲಿಂದು ವಸಂತನಗರದ ರಸ್ತೆಯ ಬದಿಯಲ್ಲಿ ಇದ್ದ ಪ್ಲಾಸ್ಟಿಕ್ ಸೇರಿದಂತೆ ಇನ್ನಿತರ ತ್ಯಾಜ್ಯವನ್ನು ಗೋಣಿ ಚೀಲವೊಂದರಲ್ಲಿ ಆಯುಕ್ತರು ಸಂಗ್ರಹಿಸಿದರು.

ತದನಂತರ ನಾಗರೀಕರನ್ನುದ್ದೇಶಿಸಿ ಮಾತನಾಡಿದ ಅವರು, ಸಾರ್ವಜನಿಕರು ಸುತ್ತಮುತ್ತಲ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಂಡು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಕೊಡಬೇಕು ಎಂದು ತಿಳಿಸಿದರು.

ಸಮಾಜದಲ್ಲಿ ಸ್ವಚ್ಛತೆ ಕಾಪಾಡಿದಾಗ ಆರೋಗ್ಯ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದ ಅವರು, ಆರೋಗ್ಯವೇ ಭಾಗ್ಯ ಎಂಬಂತೆ ಮನುಷ್ಯ ಆರೋಗ್ಯವಾಗಿದ್ದರೆ ಜೀವನದ ಗುರಿ ಸಾಧನೆ ಮಾಡಬಹುದು.

ಇತ್ತೀಚೀನ ದಿನಗಳಲ್ಲಿ ಸಾಂಕ್ರಾಮಿಕ ರೋಗಗಳು ಹರಡುತ್ತಿದ್ದು, ಅದನ್ನು ತಡೆಗಟ್ಟಲು ಸಾರ್ವಜನಿಕರು ಮುಂದಾಗಬೇಕು ಎಂದು ಹೇಳಿದರು.

REQUIRED
NON-VEG HOTEL
ಬೆಂಗಳೂರಿನ ಉತ್ತರ ಭಾಗದಲ್ಲಿ ಚಾಲ್ತಿಯಲ್ಲಿರುವ
ನಾಟಿ ಸ್ಟೈಲ್ ನಾನ್‌ವೆಜ್ ಹೋಟೆಲ್
ಖರೀದಿಗೆ ಬೇಕಾಗಿದೆ.
Required Running Nati Style Non-Veg Hotel situated in North Bangalore.
Contact- ARUN KUMAR M- 78922 74635

| Date | 06-12-2020 |
| --- | --- |
| Page No | 1 |



## ಬಿಬಿಎಂಪಿಗೆ ಹೊಸ ಕಾಯ್ದೆ ಜಾರಿ ಪಕ್ಕಾ...

# ಚುನಾವಣೆ ನಡೆಯೋದು ಅನುಮಾನ?



**ಬೆಂಗಳೂರು, ಡಿ.6**- ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆಗೆ ವಿಶೇಷವಾದ ಕಾಯ್ದೆ ಜಾರಿ ಮಾಡಲಿದ್ದು, ನೂತನ ಕಾಯ್ದೆ ಅನ್ವಯವೇ ಚುನಾವಣೆ ನಡೆಯಲಿದೆ ಎಂದು ಪರೋಕ್ಷವಾಗಿ ಬಿಬಿಎಂಪಿ ಚುನಾವಣೆಯನ್ನು ಸರ್ಕಾರ ಮುಂದೂಡಲಿದೆ ಎಂಬ ಸುಳಿವನ್ನು ಕಂದಾಯ ಸಚಿವ ಆರ್. ಅಶೋಕ್ ನೀಡಿದ್ದಾರೆ.

ನಾಳೆ ಆರಂಭವಾಗಲಿರುವ ಅಧಿವೇಶನದಲ್ಲಿ ಬಿಬಿಎಂಪಿಗೆ ತಿದ್ದುಪಡಿ ಮಾಡಿರುವ ಕಾಯ್ದೆಯನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ...ಪುಟ 2

## ಅನುಮಾನ?

ಮಂಡಿಸಿ ಅಂಗೀಕಾರ ಪಡೆಯಲಿದ್ದೇವೆ ಎನ್ನುವ ಮೂಲಕ ಚುನಾವಣೆ ಮುಂದೂಡಿಕೆಯಾಗುವ ಸುಳಿವು ಕೊಟ್ಟರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಬಿಎಂಪಿಗೆ ಹಾಲಿ ಇರುವ ಕಾಯ್ದೆಯನ್ನು ತಿದ್ದುಪಡಿ ಮಾಡಲಾಗಿದ್ದು, ಈಗಿರುವ 198 ವಾರ್ಡುಗಳ ಬದಲಿಗೆ 243 ವಾರ್ಡ್‌ಗಳಾಗಿ ಬದಲಾಗಲಿವೆ. ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಸೂದೆ ಅಂಗೀರವಾದರೆ ಪಾಲಿಕೆಗೆ ಈಗಿರುವ ಸ್ಥಾನ-ಮಾನ ಬದಲಾಗಲಿದೆ ಎಂದು ಹೇಳಿದರು.

ತಿದ್ದುಪಡಿ ಮಾಡಲು ರಚನೆಯಾಗಿದ್ದ ಸಮಿತಿಯು ಈಗಾಗಲೇ ಸರ್ಕಾರಕ್ಕೆ ವರದಿಯನ್ನು ಹಸ್ತಾಂತರ ಮಾಡಿದೆ. ಪುಸ್ತಕ ಅಧಿವೇಶನದಲ್ಲಿ ಇದು ಮಂಡನೆಯಾಗಿ ಕಾರ್ಯರೂಪಕ್ಕೆ ಬಂದರೆ ಹೊಸ ಕಾಯ್ದೆಯಂತೆ ಚುನಾವಣೆಗೆ ಹೋಗಬೇಕಾಗುತ್ತದೆ ಎಂದು ಅಶೋಕ್ ತಿಳಿಸಿದರು.

ಬಿಬಿಎಂಪಿ ಚುನಾವಣೆಯನ್ನು ಸರ್ಕಾರ ಮುಂದೂಡುತ್ತದೆಯೇ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಈ ಸಂಬಂಧ ಕಾನೂನು ತಜ್ಞರ ಜತೆ ಚರ್ಚೆ ಮಾಡಲಾಗುವುದು. ಕಾಯ್ದೆ ಅಂಗೀಕಾರವಾದರೆ ಆ ಪ್ರಕಾರವೇ ಚುನಾವಣೆ ನಡೆಸಬೇಕು. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷರು, ಮುಖಂಡರು, ಬೆಂಗಳೂರು ಭಾಗದ ಸಚಿವರು, ಶಾಸಕರೊಂದಿಗೆ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಿದ್ದೇವೆ ಎಂದು ಹೇಳಿದರು.

ಬಿಬಿಎಂಪಿ ಚುನಾವಣೆ ಸಂಬಂಧ ಎರಡು ದಿನಗಳ ಹಿಂದೆಯಷ್ಟೇ ರಾಜ್ಯ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ದ್ವಿಸದಸ್ಯ ಪೀಠ ನಾಲ್ಕು ವಾರದೊಳಗೆ ಮೀಸಲಾತಿ ಹೊರಡಿಸಿ ಆರು ವಾರದೊಳಗೆ ಚುನಾ ವಣೆ ನಡೆಸಬೇಕೆಂದು ಆದೇಶ ನೀಡಿತ್ತು. ರಾಜ್ಯ ಸರ್ಕಾರ ಹೈಕೋರ್ಟ್ ನೀಡಿರುವ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರುವುದು ಖಚಿತವಾಗಿದೆ. ಉಪ ಮುಖ್ಯಮಂತ್ರಿ ಡಾ.ಅಶ್ವತ್ಥನಾರಾಯಣ ಹೈಕೋರ್ಟ್ ಆದೇಶವನ್ನು ಸುಪ್ರಿಂಕೋರ್ಟ್‌ನಲ್ಲಿ ಪ್ರಶ್ನಿಸುವುದಾಗಿ ಹೇಳಿದ್ದರು. ಇದರ ಬೆನ್ನಲ್ಲೇ ಅಶೋಕ್ ಕೂಡಾ ನ್ಯಾಯಲಯಕ್ಕೆ ಹೋಗುವ ಸುಳಿವು ನೀಡಿದ್ದಾರೆ.

ಈ ಸಂಜೆ

| Date | 06-12-2020 |
|---|---|
| Page No | 2 |

## ದಂಡ ಹಾಕುವುದೇ

# ಬಿಬಿಎಂಪಿ ಮಾನದಂಡವೇ

### ಹುಚ್ಚಾಟದ ಪರಮಾವಧಿ.. ಜನರ ಆಕ್ರೋಶ

**ಬೆಂಗಳೂರು, ಡಿ.6-** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಗಲು ದರೋಡೆ ಮಾಡುತ್ತಿದೆಯೇ? ಸಾರ್ವಜನಿಕರ ವಸೂಲಿಗೆ ಇಳಿದಿದೆಯೇ ? ದಂಡ ಹಾಕುವುದನ್ನೇ ತನ್ನ ಮಾನದಂಡವನ್ನಾಗಿ ಮಾಡಿಕೊಂಡಿದೆಯೇ. ಬಿಬಿಎಂಪಿಯ ಕ್ರಮದಿಂದ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಾಸ್ಕ್ ಧರಿಸದಿದ್ದರೆ, ಸಾಮಾಜಿಕ ಅಂತರ ಕಾಪಾಡಿಕೊಳ್ಳದಿದ್ದರೆ, ಹೋಟೇಲ್, ಮಾಲ್ , ಕಲ್ಯಾಣ ಮಂಟಪ , ಎಸಿ, ರೆಸ್ಟೋರೆಂಟ್, ಪಾರ್ಟಿ ಹಾಲ್, ಥಿಯೇಟರ್, ಸಭೆ-ಸಮಾರಂಭ ನಡೆಸುವ ಜಾಗಗಳ ಆಯೋಜಕರಿಗೆ ದಂಡ ವಿಧಿಸಲು ಮುಂದಾಗಿರುವ ಬಿಬಿಎಂಪಿ ಕ್ರಮಕ್ಕೆ ಸಾರ್ವಜನಿಕರು ಹಿಡಿ ಶಾಪ ಹಾಕುತ್ತಿದ್ದಾರೆ.

ಈಗಾಗಲೇ ಲಾಕ್‍ಡೌನ್‍ನಿಂದ ವ್ಯಾಪಾರ ವಹಿವಾಟು ಇಲ್ಲದೆ ಹೈರಾಣಾಗಿರುವ ಜನ ಸದ್ಯ ಲಾಕ್‍ಡೌನ್ ತೆರವಾಗಿ ನಿಧಾನವಾಗಿ ವ್ಯಾಪಾರ ವಹಿವಾಟು ಆಗುತ್ತಿರುವುದರಿಂದ ಚೇತರಿಸಿಕೊಳ್ಳತೊಡಗಿದ್ದಾರೆ. ಈಗ ಬಿಬಿಎಂಪಿ ಮನಸ್ಸಿಗೆ ಬಂದಂತೆ ದಂಡ ವಿಧಿಸ ತೊಡಗಿದೆ. ಈಗಾಗಲೇ ಮಾಸ್ಕ್ ಧರಿಸದವರಿಗೆ, ಸಾಮಾಜಿಕ ಅಂತರ ಮಾಡುತ್ತಿಲ್ಲ ಎಂದು ನೆಪವೊಡ್ಡಿ ಬಿಬಿಎಂಪಿ ಮಾರ್ಷಲ್‍ಗಳ ಮೂಲಕ ಸುಲಿಗೆ ಮಾಡುತ್ತಿದೆ ಎಂಬ ಆರೋಪ ಸಾರ್ವಜನಿಕರಿಂದ ದಿನೇ ದಿನೇ ಕೇಳಿ ಬರುತ್ತಿದೆ.

ಸಾವಿರ ರೂ. ದಂಡ ವಿಧಿಸಿ ಸಾರ್ವಜನಿಕರಿಂದ ಛೀಮಾರಿ ಹಾಕಿಸಿಕೊಂಡಿದ್ದ ಬಿಬಿಎಂಪಿ ಅದನ್ನು 200 ರೂ.ಗೆ ಇಳಿಸಿತ್ತು . ಅದನ್ನೂ ಕಟ್ಟಲಾರದ ಸಾರ್ವಜನಿಕರು ಪ್ರತಿ ದಿನ ಬಿಬಿಎಂಪಿಗೆ ಹಿಡಿ ಶಾಪ ಹಾಕುತ್ತಿದ್ದಾರೆ.

ಈಗ ಬಿಬಿಎಂಪಿ ಹೊಸ ರೀತಿಯ ವಸೂಲಿಗೆ ಇಳಿದಿದೆ. ಒಂದೆಡೆ ಆರ್ಥಿಕ ಚಟುವಟಿಕೆಗಳ ಸಕ್ರಿಯಗೊಳಿಸುವ ನೆಪದಲ್ಲಿ ಕಲ್ಯಾಣ ಮಂಟಪ, ಹೋಟೇಲ್, ಸ್ಟಾರ್ ಹೋಟೇಲ್, ರೆಸ್ಟೋರೆಂಟ್, ಪಾರ್ಟಿ ಹಾಲ್, ಮಾಲ್ , ಥಿಯೇಟರ್ ಮುಂತಾದವುಗಳಿಗೆ ಅನುಮತಿ ಕೊಡುವ ಬಿಬಿಎಂಪಿ ಮತ್ತೊಂದೆಡೆ ಕೊರೊನಾ ನಿಯಮಾವಳಿ ನೆಪದಲ್ಲಿ ಮನ ಬಂದಂತೆ 5,000 ದಿಂದ 1 ಲಕ್ಷದವರೆಗೆ ದಂಡ ವಿಧಿಸಿ ಸುಲಿಗೆಗೆ ಮುಂದಾಗಿರುವುದು ಸಾರ್ವಜನಿಕರನ್ನು ಕೆರಳಿಸಿದೆ.

ಈಗಷ್ಟೇ ನಾವು ಚೇತರಿಸಿಕೊಳ್ಳುತ್ತಿದ್ದೇವೆ. ಗ್ರಾಹಕರಿಗೆ ನಾವೂ ಕೂಡ ಜಾಗೃತಿ ಮೂಡಿಸುತ್ತಿದ್ದೇವೆ. ಅವರು ಒಂದೊಮ್ಮೆ ನಿಯಮ ಪಾಲಿಸದಿದ್ದರೆ ನಮ್ಮ ಮೇಲೆ ದಂಡ ವಿಧಿಸುವುದು ಎಷ್ಟು ಸಮಂಜಸ ಎಂದು ಮಾಲ್ , ಹೋಟೇಲ್ ಮಾಲೀಕರು ತಮ್ಮ ಅಳಲು ತೋಡಿಕೊಂಡಿದ್ದಾರೆ.

ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಎಳೆದಂತೆ ಎನ್ನುವ ರೀತಿಯಲ್ಲಿ ಬಿಬಿಎಂಪಿ ವರ್ತಿಸುತ್ತಿದೆ ಎಂದು ಭಾರೀ ಟೀಕೆಗಳು ವ್ಯಕ್ತವಾಗುತ್ತಿದೆ.

ಈ ಸಂಜೆ

| Date | 06-12-2020 |
|---|---|
| Page No | 8 |

## ಕೊರೊನಾ ಎರಡನೆ ಅಲೆ ಭೀತಿ

# ಪಾಲಿಕೆ ಕಟ್ಟುನಿಟ್ಟಿನ ಕ್ರಮ

**ಬೆಂಗಳೂರು, ಡಿ.6-** ಚಳಿಗಾಲಕ್ಕೆ ಕೊರೊನಾ ಹೆಚ್ಚಾಗುವ ಸಾಧ್ಯತೆ ಹಾಗೂ ಕೊರೊನಾ ಎರಡನೇ ಅಲೆಯ ಭೀತಿ ಹಿನ್ನೆಲೆಯಲ್ಲಿ ಪರಿಸ್ಥಿತಿ ಎದುರಿಸಲು ಪಾಲಿಕೆ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದೆ.

ಮಾಸ್ಕ್ ಧರಿಸದವರಿಗೆ ಸಾಮಾಜಿಕ ಅಂತರ ಕಾಪಾಡಿಕೊಳ್ಳದವರಿಗೆ ಮಾರ್ಷಲ್‌ಗಳ ಮೂಲಕ ದಂಡ ವಿಧಿಸುತ್ತಿದ್ದ ಪಾಲಿಕೆ ಈಗ ಹೋಟೆಲ್, ಮಾಲ್‌ಗಳ ಮಾಲೀಕರಿಗೂ ಭಾರೀ ಪ್ರಮಾಣದ ದಂಡ ವಿಧಿಸಲು ಮುಂದಾಗಿವೆ.

ಹೋಟೇಲ್‌ಗಳಲ್ಲಿ ಆಯೋಜಿಸುವ ಸಭೆ, ಸಮಾರಂಭಗಳಿಗೆ ಬರುವ ಗ್ರಾಹಕರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಇಲ್ಲದಿದ್ದರೆ ಮಾಲೀಕರನ್ನೇ ಹೊಣೆಗಾರರನ್ನಾಗಿ ಮಾಡಿ ದಂಡ ವಿಧಿಸಲು ತೀರ್ಮಾನಿಸಲಾಗಿದೆ.

ಅದೇ ರೀತಿ ಸ್ಟಾರ್ ಹೋಟೆಲ್, ಖಾಸಗಿ ಬಸ್ ನಿಲ್ದಾಣ, ದರ್ಶಿನಿ ಹೋಟೆಲ್‌ಗಳಲ್ಲಿ ದೊಡ್ಡ ದೊಡ್ಡ ಕಲ್ಯಾಣ ಮಂಟಪ ಸೇರಿದಂತೆ ಎಲ್ಲೆಡೆ ಆಯೋಜಕರೇ ಮಾಸ್ಕ್ ಧರಿಸುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ 5000 ದಿಂದ 1 ಲಕ್ಷದವರೆಗೆ ದಂಡ ವಿಧಿಸಲು ಪಾಲಿಕೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ.

ಪ್ರತಿಭಟನೆ ನಡೆಸುವ ಸಂದರ್ಭದಲ್ಲಿ ಮಾಸ್ಕ್ ಧರಿಸಿರಬೇಕು, ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು. ಇಲ್ಲದಿದ್ದರೆ ಪ್ರತಿಭಟನೆ ನಡೆಸುವವರಿಗೆ ದಂಡ. ಆಯೋಜಕರಿಗೂ ದಂಡ ವಿಧಿಸಲಾಗುವುದು ಎಂದು ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್ ಹೇಳಿದ್ದಾರೆ.

ಡಿಸೆಂಬರ್, ಜನವರಿ, ಫೆಬ್ರವರಿ ತಿಂಗಳಲ್ಲಿ ಸಾಕಷ್ಟು



ಮದುವೆ ಇನ್ನಿತರ ಕಾರ್ಯಕ್ರಮಗಳು ನಡೆಯುತ್ತವೆ.

ಸಭೆ ಸಮಾರಂಭಗಳಲ್ಲಿ 100 ಜನ ಭಾಗವಹಿಸಲು ಮಾತ್ರ ಅವಕಾಶ ಕಲ್ಪಿಸಲಾಗಿದೆ. ಆದರೂ ಇಂತಹ ಕಾರ್ಯಕ್ರಮದಲ್ಲಿ ಹೆಚ್ಚು ಜನ ಭಾಗಿಯಾಗುತ್ತಿದ್ದಾರೆ. ಅಲ್ಲಿ ಮಾಸ್ಕ್ ಸಾಮಾಜಿಕ ಅಂತರ ಕಂಡು ಬರುತ್ತಿಲ್ಲ. ಎಲ್ಲೆಡೆ ಮಾರ್ಷಲ್‌ಗಳನ್ನು ನೇಮಿಸಲು ಸಾಧ್ಯವಿಲ್ಲ, ಈ ಜಾಗಗಳು ಕೊರೊನಾ ಹರಡಿಕೆಯ ಕೇಂದ್ರಗಳಾಗಿ ಮಾರ್ಪಾಡಾಗಿವೆ.

ಕಠಿಣ ಕ್ರಮದ ಅವಶ್ಯಕತೆ ಇದ್ದು, ಸ್ಟಾರ್ ಹೋಟೆಲ್ ದೊಡ್ಡ ಕಲ್ಯಾಣ ಮಂಟಪ ದವರಿಗೆ 1 ಲಕ್ಷ ರೂ. ದಂಡ ವಿಧಿಸಲು ತೀರ್ಮಾನಿಸಲಾಗಿದೆ.

ದೊಡ್ಡ ಸ್ಟೋರ್‌ಗಳಿಗೆ 25 ಸಾವಿರ, ಥಿಯೇಟರ್ ಮಾಲ್, ಪಾರ್ಟಿ ಹಾಲ್ 50 ಸಾವಿರ, ಹೋಟೇಲ್‌ಗಳಿಗೆ 5 ಸಾವಿರ, ಸಭೆ ರ್‍ಯಾಲಿ ಮತ್ತಿತರ ಕಾರ್ಯಕ್ರಮಗಳಿಗೆ 50 ಸಾವಿರ ದಂಡ ವಿಧಿಸಲು ತೀರ್ಮಾನಿಸಲಾಗಿದೆ.

ಈ ಮೊದಲು ವೈಯಕ್ತಿಕ ದಂಡ ವಿಧಿಸಲಾಗುತ್ತಿತ್ತು. ಈಗ ಆಯೋಜಕರಿಗೆ ದಂಡ ವಿಧಿಸುವ ಮೂಲಕ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಬಿಬಿಎಂಪಿ ಮುಂದಾಗಿದೆ.